

ಶಿವಪ್ರಕಾಶರ ಕವಿತೆಗಳು

ಎಚ್. ಎಸ್. ಶಿವಪ್ರಕಾಶ್

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಶಿವಪ್ರಕಾಶರ ಕವಿತೆಗಳು

ಎಚ್.ಎಸ್. ಶಿವಪ್ರಕಾಶ

ಕನ್ನಡ ಪುಸ್ತಕ ಪ್ರಾಧಿಕಾರ
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦ ೦೧೮

ಶಿವಪ್ರಕಾಶರ ಕವಿತೆಗಳು

ಎಚ್.ಎಸ್. ಶಿವಪ್ರಕಾಶ

ಕನ್ನಡ ಪುಸ್ತಕ ಪ್ರಾಧಿಕಾರ
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦ ೦೧೮

SHIVAPRAKASHARA KAVITEGALU- **(Selected Poems of Sri H.S. Shivaprakash) wirtten by H.S. Shivaprakash, Published by : The Administrative Officer, Kannada Book Authority (Kannada Pustaka Pradhikara) Pampa Mahakavi Road, Chamarajpet, Bangalore-560018.**

ಪುಟಗಳು : IV+೧೯೧

ಮೊದಲನೇ ಆವೃತ್ತಿ : ೨೦೦೦

ಐಎಸ್‌ಬಿಎನ್ : ೮೧-೭೭೧೩-೦೪೭-೧

ಬೆಲೆ : ರೂ. ೬೦/- (ಅರವತ್ತು ರೂಪಾಯಿಗಳು)

ರಕ್ಷಾಪತ್ರ ವಿನ್ಯಾಸ : ಯು.ಟಿ. ಸುರೇಶ್

ಛಾಯಾಕ್ಷರ ಜೋಡಣೆ :
ವರ್ಷಿಣಿ ಗ್ರಾಫಿಕ್ಸ್, ಬೆಂಗಳೂರು-೫೬೦ ೦೪೦ ☎ : 3402575

ಮುದ್ರಣ :
ಸ್ನೇಹಾ ಪ್ರಿಂಟರ್ಸ್
೨೨, ೨ನೇ ಮುಖ್ಯರಸ್ತೆ, ಅತ್ತಿಗುಪ್ಪೆ
ವಿಜಯನಗರ ೨ನೇ ಹಂತ,
ಬೆಂಗಳೂರು - ೫೬೦ ೦೪೦ ☎ : 3392814, 3302417
E-mail-Snehaprints@usa.net

ಕವಿತೆ ಎಂಬ ಹಾದಿಸುಂಕ

ವಿಚಿತ್ರ ಸನ್ನಿವೇಶ. ಬೆಂಗಳೂರಲ್ಲಿ ಅಚ್ಚಾಗುತ್ತಿರುವ ನನ್ನ ಆಯ್ದ ಕವಿತೆಗಳ ಪುಸ್ತಕಕ್ಕೆ ಶಿಕಾಗೋದಿಂದ ಮುನ್ನುಡಿ ಬರೆಯುತ್ತಿದ್ದೇನೆ.

ಎಲ್ಲಿಂದ ಶುರು ಮಾಡಲಿ?

ಇಲ್ಲಿಂದಲೇ ಮಾಡುತ್ತೇನೆ.

ನನ್ನ ಶಿಕಾಗೋ ತೆಲುಗಿಗ ಸ್ನೇಹಿತರಾದ ಕಲಾವಿದ ರಾಮರಾವ್ ಅವರು ತಮ್ಮ ಕಾರಿನಲ್ಲಿ ಊರು ಸುತ್ತಿಸುತ್ತಿದ್ದಾಗ-

ಹೆಜ್ಜೆ ಹೆಜ್ಜೆಗೂ ಹಾದಿಸುಂಕಕಟ್ಟೆಗಳು ಅಡ್ಡಬರುತ್ತಿವೆ. ಒಂದೊಂದು ಸುಂಕಕಟ್ಟೆಯಲ್ಲೂ ಇಷ್ಟಿಷ್ಟು ಸುಂಕ ಅಂತ ಮೊದಲೇ ನಿಗದಿಯಾಗಿರುತ್ತೆ. ಅಲ್ಲಿರುವ ಲೋಹದ ಬುಟ್ಟಿಯೊಳಕ್ಕೆ ಸುಂಕ ಎಸೆಯಬೇಕು. ಎಸೆದಾಗ ಅಡ್ಡ ನಿಂತಿರುವ ಕೆಂಪು ಲೈಟಿನ ಅಡ್ಡಕಡ್ಡಿ ತೆರೆದು ಮುಂದೆ ಹೋಗಲು ಜಾಗ ಬಿಡುತ್ತೆ. ಕೆಂಪು ಲೈಟು ಹಸಿರಿಗೆ ತಿರುಗಿ 'ಥ್ಯಾಂಕ್ಯು' ಎಂದಾಗುತ್ತೆ. ಅಕಸ್ಮಾತ್ ನೀವು ಸುಂಕ ತೆರದಿದ್ದರೆ, ಮೇಲಿರುವ ಎಚ್ಚರಿಕೆ ಬೋರ್ಡ್ ಹೇಳುತ್ತೆ: 'ಸುಂಕ ತೆರದವರಿಗೆ ಜೈಲುವಾಸ ಅಥವಾ ಲೈಸನ್ಸ್ ಅಮಾನತ್ತು.'

ಇದೇ ಮುನ್ನುಡಿಗೆ ಸ್ಫೂರ್ತಿಯಾಗುತ್ತಿದೆ.

ಕವಿತೆ ಎನ್ನುವುದು ನಾನು ಅಲೆದ ಅದೆಷ್ಟೋ ಹಾದಿಗಳಲ್ಲಿ ತೆರಲೇಬೇಕಾಗಿ ಬಂದ ಹಾದಿಸುಂಕ. ಹಾಗೆ ತೆರದಿದ್ದರೆ ರಸ್ತೆ ಮುಚ್ಚಿಕೊಳ್ಳುತ್ತಿತ್ತು. ಜೈಲುವಾಸ ಅನುಭವಿಸಬೇಕಾಗುತ್ತಿತ್ತು. ದಂಡ ತೆರಬೇಕಾಗಿತ್ತು.

ಇಲ್ಲಿನ ಭರ್ಜರಿ ರಸ್ತೆಗಳ ನಿರ್ಮಾಣಕ್ಕೆ ನಾವು ತೆರುವ ಸುಂಕ ಬಳಕೆಯಾಗುತ್ತದೆ. ಕವಿತೆಗಳೂ ಹಾಗೇ. ಅವು ಬರೆದಾತ ತೆರುವ ಸುಂಕವಾದರೂ ಎಲ್ಲರ ಹಾದಿಗಳ ನಿರ್ಮಾಣಕ್ಕೆ ಕಾವ್ಯ ನೀಡುವ ಸುಂಕ.

ಇಂದಿನ ಘೋರ ನಾಗರಿಕ ಅರಣ್ಯಗಳಲ್ಲಿ ಕವಿತೆ ಎಂಬ ಸುಂಕದ ಮೂಲಕ ಹಾಡುಗಳು ನಿರ್ಮಾಣವಾಗುವಂತಾದರೆ ಅದೇ ಇವುಗಳ ಸಾರ್ಥಕ್ಯ. ಯಾಕೆಂದರೆ ನನ್ನ ಮಟ್ಟಿಗೆ ಕವಿತೆಗಳ ಅಸಲು ಜರೂರಿ ಮಾನವೀಯ. ಕಲಾತ್ಮಕ ಜರೂರಿ ಆಮೇಲಿನದು.

ಪುಸ್ತಕ ಪ್ರಾಧಿಕಾರದವರು ಈ ಕವಿತೆಗಳನ್ನು ಆಯ್ಕೆ ಮಾಡುವ ಅವಕಾಶವನ್ನು ನನಗೆ ಕೊಟ್ಟು ನನ್ನ ಕವಿತೆಗಳಿಗೆ ನಾನೇ ಜರಡಿ ಹಿಡಿಯುವಂತೆ ಮಾಡಿದರು. ಮೂವತ್ತು ವರ್ಷ ಬರೆದ ಕವಿತೆಗಳಿಗೆ ಜರಡಿ ಹಿಡಿದಾಗ ಉಳಿದವಷ್ಟನ್ನು ಇಲ್ಲಿ ಕಲೆ ಹಾಕಿದ್ದೇನೆ. ಇವುಗಳ ಮೂಲಕ ನನ್ನ ರಸ್ತೆಗಳು ತೆರಕೊಂಡ ಹಾಗೆ ನಿಮ್ಮವೂ ತೆರಕೊಂಡರೆ ಸಂತೋಷ.

ನನ್ನ ಕವಿತೆಗಳನ್ನು ಈ ತೆರೆಗೆ ಪೊರೆದ ಸರ್ವರಿಗೂ ಶರಣಾರ್ಥಿ. ಮುಖ್ಯವಾಗಿ ದಿವಂಗತ ಅಡಿಗರು ಮೊದಲಿಗೆ ನನ್ನನ್ನು ಹರಸಿದರು. ಅವರನ್ನು; ಕೀರಂ ಅವರನ್ನು, ಅನಂತಮೂರ್ತಿ ಅವರನ್ನು, ಚೆನ್ನಿ, ಓ.ಎಲ್.ಎನ್., ವೀಚಿ ಹಾಗೂ ಇನ್ನೂ ಅನೇಕರನ್ನು ನೆನೆಯುತ್ತೇನೆ. ನನ್ನ ಅಸ್ತವ್ಯಸ್ತ ಜಗತ್ತಲ್ಲಿ ಹರಿದು ಹಂಚಿಹೋಗುತ್ತಿರುವ ನನ್ನ ಬರಹಗಳನ್ನು ಪ್ರತಿಮಾಡಿ ಉಳಿಸಲು ನೆರವಾದ ಸಂಧ್ಯಾ ಅವರನ್ನು ನೆನೆಯುತ್ತೇನೆ. ಈ ಕವಿತೆಗಳ ಪರವಾಗಿ ಮತ್ತು ವಿರುದ್ಧವಾಗಿ ವಿಮರ್ಶೆ ಬರೆದ ಎಲ್ಲ ಮಹನೀಯರನ್ನೂ ನೆನೆಯುತ್ತೇನೆ.

ಎಷ್ಟೇ ಆಗಲಿ, ಅಲ್ಲಮ ಗುರು ಹೇಳಿದಂತೆ 'ಆಯುಷ್ಯ ಹಿರಿದು, ಭಾಷೆ ಕಿರಿದು.'

ಇನ್ನು ಅಚ್ಚು ಹಾಕಿಸುತ್ತಿರುವ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಎಚ್.ಜೆ. ಲಕ್ಕಪ್ಪ ಗೌಡರಿಗೆ, ಅಚ್ಚು ಹಾಕುತ್ತಿರುವ ಸ್ನೇಹಾ ಪ್ರಿಂಟರ್ಸ್‌ನವರಿಗೆ ನನ್ನ ತುಂಬುಮನದ ಕೃತಜ್ಞತೆಗಳು.

ಈ ಕವಿತೆಗಳು ಈವರೆಗೆ ತೆತ್ತ ರಸ್ತೆ ಸುಂಕಗಳು. ಈಗ ಮತ್ತೆ ರಸ್ತೆ ಮುಚ್ಚಿರುವಂತೆ ಸುಂಕ ಇಷ್ಟೆಂದು ನಿಗದಿಯಾಗಿಲ್ಲ. ಆಗಲೆಂದು ಕಾಯುತ್ತಿದ್ದೇನೆ. ಕಾಯುತ್ತಾ ಹಾದು ಬಂದ ರಸ್ತೆಗಳ ಕಡೆ ತಿರುಗಿ ನೋಡುತ್ತಿದ್ದೇನೆ.

ಬಂದು ನೋಡಿ ಎಂದು ಓದುಗರಾದ ನಿಮ್ಮನ್ನೂ ಕರೆಯುತ್ತಿದ್ದೇನೆ.

ಶಿಕಾಗೋ ಎಚ್.ಎಸ್. ಶಿವಪ್ರಕಾಶ

೩.೧೦.೨೦೦೦

ಮುನ್ನುಡಿ

ಜ್ಞಾನ ಸಂಪಾದನೆ ಮತ್ತು ಜ್ಞಾನ ಪ್ರಸಾರಗಳ ಅತ್ಯಂತ ಪ್ರಬಲ ಮತ್ತು ಪರಿಣಾಮಕಾರೀ ಮಾಧ್ಯಮ ಅಕ್ಷರ ಮಾಧ್ಯಮ. ಈ ಮಾಧ್ಯಮದಲ್ಲಿ ಆಹ್ಲಾದಕಾರಿಯೂ, ಆತ್ಮಾಕರ್ಷಕವೂ, ಜೀವನ ಸೌಂದರ್ಯದಾಯಕವೂ, ಸಂಸ್ಕೃತಿ ಸಂಪನ್ನವೂ, ಬುದ್ಧಿ ಮನಸ್ಸುಗಳ ವರ್ಧಕವೂ ಆದ ಅಪೂರ್ವ ಮಾಧ್ಯಮವೇ ಸಾಹಿತ್ಯ. ನಿತ್ಯ ಪರಿವರ್ತನಶೀಲವಾದ ಜಗತ್ತಿನ ಜ್ಞಾನ ವಿಜ್ಞಾನ ಸಂಸ್ಕೃತಿಗಳನ್ನು ತಲೆಮಾರಿನಿಂದ ತಲೆಮಾರಿಗೆ ಪ್ರವಹಣ ಮಾಡುತ್ತ ಮನುಷ್ಯನ ಜೀವನವನ್ನು ಪುಷ್ಟಿಗೊಳಿಸುತ್ತ, ತುಷ್ಟಿಗೊಳಿಸುತ್ತ, ವಿಕಾಸಗೊಳಿಸುತ್ತ, ಪೂರ್ಣತೆಯ ಕಡೆಗೆ ಅವನನ್ನು ಕರೆದೊಯ್ಯುವುದೇ ಇದರ ಪರಮ ಗುರಿ. ಇಂಥ ಜೀವನೋತ್ಥಾನಕಾರಿಯಾದ ಉತ್ತಮ ಜ್ಞಾನ ಸಂಪತ್ತನ್ನು ವಿಶಿಷ್ಟ ಹಾಗೂ ಅರ್ಥಪೂರ್ಣ ಗ್ರಂಥಗಳ ಮೂಲಕ ಕನ್ನಡ ಓದುಗರಿಗೆ ಒದಗಿಸುವ ಗುರುತರ ಜವಾಬ್ದಾರಿಯನ್ನು ಕನ್ನಡ ಪುಸ್ತಕ ಪ್ರಾಧಿಕಾರ ಹೊತ್ತುಕೊಂಡು ನಿರ್ವಹಿಸುತ್ತಿದೆ.

ಜ್ಞಾನ, ಸಂಸ್ಕೃತಿ ಮತ್ತು ಸಾಹಿತ್ಯ ಪ್ರಸಾರ ಕಾರ್ಯಕ್ಕೆ ಕರ್ನಾಟಕ ಸರ್ಕಾರ ಬಹು ಹಿಂದಿನಿಂದ ಒತ್ತಾಸೆ ನೀಡುತ್ತ ಬಂದಿದೆ. ಈ ಮೌಲಿಕ ಪರಂಪರೆಯನ್ನು ಆರಂಭಿಸಿದ ಕೀರ್ತಿ ಕರ್ನಾಟಕ ಕಂಡ ಅತ್ಯಂತ ದಕ್ಷ ಹಾಗೂ ದೂರದೃಷ್ಟಿಯ ಮುಖ್ಯಮಂತ್ರಿಗಳಲ್ಲಿ ಒಬ್ಬರಾದ ಶ್ರೀ ಕೆಂಗಲ್ ಹನುಮಂತಯ್ಯ ಅವರಿಗೆ ಸಲ್ಲಬೇಕು. ಕನ್ನಡದಲ್ಲಿ ಶ್ರೀಮಂತ ಸಾಂಸ್ಕೃತಿಕ ಪರಂಪರೆಯ ಶ್ರೇಷ್ಠ ಗ್ರಂಥಗಳನ್ನು ಸುಲಭ ಬೆಲೆಯಲ್ಲಿ ಓದುಗರಿಗೆ ತಲುಪಿಸುವ ಸ್ತುತ್ಯ ಕಾರ್ಯವನ್ನು ಅಂದಿನಿಂದ ನಿರ್ವಹಿಸುತ್ತ ಬಹುಬೇಡಿಕೆಯ ನೂರಾರು ಕೃತಿಗಳನ್ನು ಸರ್ಕಾರ ಪ್ರಕಟಿಸಿ ಜನಮನ್ನಣೆಯನ್ನು ಗಳಿಸಿದೆ.

ಇದುವರೆಗೆ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಪ್ರಕಟಿಸುತ್ತಿದ್ದ ಇಂಥ ಪ್ರಾಚೀನ ಹಾಗೂ ಆಧುನಿಕ ಜನಪ್ರಿಯ ಪುಸ್ತಕಗಳನ್ನು ಈಗ ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸುತ್ತಿದೆ. ಅಲಭ್ಯವಾಗಿರುವ ಹಾಗೂ ಬಹುಬೇಡಿಕೆಯ, ಸಾಹಿತ್ಯ ಮೌಲ್ಯ ಮತ್ತು ವೈಚಾರಿಕ ಮೌಲ್ಯಗಳನ್ನು ಒಳಗೊಂಡಿರುವ ಕೃತಿಗಳನ್ನು ಅತ್ಯಂತ ಕಡಿಮೆ ಬೆಲೆಯಲ್ಲಿ ಕನ್ನಡ ಸಹೃದಯರಿಗೆ ನೀಡುವುದೇ ಈ ಜನಪ್ರಿಯ ಪುಸ್ತಕ ಮಾಲೆಯ ಮುಖ್ಯೋದ್ದೇಶ.

ಈ ಮಾಲೆಯಲ್ಲಿ ಇದೀಗ ಕನ್ನಡದ ಮುಖ್ಯ ಕವಿಗಳಲ್ಲಿ ಒಬ್ಬರಾದ ಶ್ರೀ ಎಚ್.ಎಸ್. ಶಿವಪ್ರಕಾಶರ 'ಶಿವಪ್ರಕಾಶರ ಕವಿತೆಗಳು' ಎಂಬ ಸಂಕಲನ ಪ್ರಕಟವಾಗುತ್ತಿರುವುದು ಸಂತೋಷದ ಸಂಗತಿಯಾಗಿದೆ.

ಶ್ರೀ ಎಚ್.ಎಸ್. ಶಿವಪ್ರಕಾಶ ಅವರು ಕನ್ನಡ ಕಾವ್ಯ ಲೋಕದಲ್ಲಿ ಒಬ್ಬ ವಿಶಿಷ್ಟರಾದ ಕವಿ. ಇಂಗ್ಲೀಷ್ ಮತ್ತು ಕನ್ನಡ ಸಾಹಿತ್ಯಗಳ ಗಾಢವಾದ ಮತ್ತು ಶ್ರದ್ಧಾನ್ವಿತವಾದ ಅಧ್ಯಯನದಿಂದ ಗಳಿಸಿಕೊಂಡಿರುವ ಕಾವ್ಯ ವ್ಯವಸಾಯದ ಸೂಕ್ಷ್ಮತೆಗಳು, ಜೀವನದ ನಾನಾ ಮುಖಗಳ ತೀಕ್ಷ್ಣ ಮತ್ತು ಕೋಮಲ ಅನುಭವಗಳು, ಜನಪದ ಸಾಹಿತ್ಯದ ವಿಸ್ತಾರವಾದ ಪರಿಚಯ, ಅಲ್ಲಿನ ಹಾಡುಗಳ ಭಾಷೆಯ ಮಣ್ಣಿನ ಸತ್ವ ನಮನಶೀಲತೆಗಳು, ಅವುಗಳ ಅಂತರಾಳದಲ್ಲಿ ಮಿಡಿಯುತ್ತಿರುವ ವಿವಿಧ ಭಾವಸಂದರ್ಭಗಳ ಅಕೃತಕ ಜೀವಂತಲಯ ಮತ್ತು ಗೇಯತೆಗಳು, ಆಧುನಿಕ ಬದುಕಿನ ಜಟಿಲತೆ - ಕುಟಿಲತೆಗಳು, ಪ್ರಕೃತಿಲೋಕ ಮತ್ತು ಮಾನವಲೋಕಗಳೆರಡನ್ನು ತಮ್ಮದೇ ಆದ ವಿಶಿಷ್ಟ ದೃಷ್ಟಿಕೋನಗಳಿಂದ ಪ್ರವೇಶಿಸಿ ಅವುಗಳ ಅಂತರ್ಯದ ಸೂಕ್ಷ್ಮ ಭಾವ ಮತ್ತು ಚಿಂತನೆಗಳನ್ನು ಶಕ್ತಿಯುತವಾಗಿ ಎತ್ತಿ ತಂದು ಕವಿತೆಯಲ್ಲಿ ಅನನ್ಯವಾಗಿ ಅನಾವರಣ ಮಾಡುವ ರೀತಿ, ಕಾವ್ಯವನ್ನು ಕ್ಲಿಷ್ಟತೆಯ ಕಗ್ಗಾಡಾಗಿ ಮಾಡದೆ, ಮಾನವಪರ ಜೀವದನಿಗಳನ್ನು ಸಹಜವಾಗಿ ಹೊಮ್ಮಿಸಲು ಅನುವು ಮಾಡಿಕೊಡುವ ಸರಳ ಸಮರ್ಥ ಅಭಿವ್ಯಕ್ತಿಶಕ್ತಿ ಈ ಕವಿಯ ಅಸಾಧಾರಣ ಸಾಧನೆ. ಪುರಾಣ, ಚರಿತ್ರೆ, ಸಮಾಜವಿಜ್ಞಾನ, ಜಾನಪದ ರಂಗಭೂಮಿ, ಪ್ರಾಚೀನ ಹಾಗೂ ಆಧುನಿಕ ಕಾವ್ಯ ಜಗತ್ತು, ಇವುಗಳಿಂದ ಲೀಲಾಜಾಲವಾಗಿ ವಸ್ತುಗಳನ್ನು ಎತ್ತಿಕೊಂಡು ತಮಗೆ ವಿಶಿಷ್ಟವಾದ ಕುಸರಿ ಕೆಲಸದಿಂದ ಭಾಷೆಯಲ್ಲಿ ಮರುಹುಟ್ಟು ಪಡೆಯುವಂತೆ ಮಾಡುವ ಕೌಶಲ, ಅತ್ಯಂತ ಸಾಧಾರಣವೆನಿಸಬಹುದಾದಂತಹ ವಸ್ತುವನ್ನೂ ತಮ್ಮ ಸೂಕ್ಷ್ಮ ಒಳನೋಟಗಳಿಂದ ವಿಶಿಷ್ಟವಾಗಿ ಪರಿವರ್ತಿಸುವ ಅನನ್ಯತೆ ಇವರಿಗೆ ಸಿದ್ಧಿಸಿದೆ. ಯಾವುದೇ ಇಸಮ್ಮುಗಳಿಗೆ ಕಟ್ಟುಬೀಳದೆ ಜೀವನವನ್ನು ಅದರ ಎಲ್ಲಾ ಮುಖಗಳಲ್ಲಿ ಮುಕ್ತವಾಗಿ ಸ್ವೀಕರಿಸುವ ಹಾಗೂ ತಮ್ಮ ಸೃಜನಶೀಲತೆಗೆ ಬಳಸಿಕೊಳ್ಳುವ ಮತ್ತು ಕಾವ್ಯ ರಸಿಕರನ್ನು ತಾವು ಸೃಷ್ಟಿಸುವ ಲೋಕದೊಳಗೆ ತನ್ಮಯಭಾಗಿಗಳನ್ನಾಗಿ ಮಾಡಿಕೊಳ್ಳುವ ಶಕ್ತಿ ಇವರ ಕವನಗಳಿಗಿದೆ. ಆದುದರಿಂದಲೇ ಇವರು ನವೋದಯ, ನವ್ಯ, ಪ್ರಗತಿಶೀಲ ಮತ್ತು ದಲಿತ-ಬಂಡಾಯಗಳ ಎಲ್ಲಾ ವಿಶಿಷ್ಟ ಸಂವೇದನೆಗಳನ್ನು ತಮ್ಮ ಕವಿತೆಗಳಲ್ಲಿ ಅಂತರ್ಗತಗೊಳಿಸುವ ಮೂಲಕ ಎಲ್ಲಾ ಪಂಥದ ಓದುಗರ ಮನಸ್ಸನ್ನು ಗೆಲ್ಲುವ ಸೃಜನ ಸಾಮರ್ಥ್ಯವನ್ನು ಪಡೆದುಕೊಂಡಿದ್ದಾರೆ. ಈ ಸಂಕಲನದಲ್ಲಿರುವ ಕವಿತೆಗಳು ಅವರ ವಿಶಿಷ್ಟ ಮನೋಧರ್ಮ, ಭಾಷಾಶಕ್ತಿ, ನಿರ್ಮಾಣಕೌಶಲ ಹಾಗೂ ಚಿಂತನಶೀಲತೆಗಳನ್ನು ಸಮರ್ಥವಾಗಿ ಮತ್ತು ಪರಿಣಾಮಕಾರಿಯಾಗಿ ಬಿಂಬಿಸುತ್ತವೆ.

ಕನ್ನಡದ ಅತ್ಯಂತ ಜನಪ್ರಿಯ ಕವಿಗಳಲ್ಲಿ ಒಬ್ಬರಾಗಿದ್ದು, ಇನ್ನೂ ಜೀವಂತವಾದ ಸತ್ವಶೀಲ ಕವಿತೆಗಳನ್ನು ರಚಿಸುತ್ತಲೇ ಇರುವ ಶ್ರೀ ಎಚ್.ಎಸ್. ಶಿವಪ್ರಕಾಶ ಅವರು ತಮ್ಮ ಪ್ರಾತಿನಿಧಿಕ ಕವನಗಳನ್ನು ಆಯ್ದು ಈ ಸಂಕಲನವನ್ನು ಸಿದ್ಧಗೊಳಿಸಿದ್ದಾರೆ. ಅವರೇ ಈ ಸಂಕಲನದ ಕವಿತೆಗಳನ್ನು ಆಯ್ದಿರುವ ಕಾರಣ ಈ ಕವಿತೆಗಳ ಬಗ್ಗೆ ಸಹೃದಯರಿಗೆ ದಕ್ಕಬಹುದಾಗಿದ್ದ ಅವರ ಕಾವ್ಯದ ಮೌಲ್ಯಮಾಪನದ ಪ್ರಸ್ತಾವನೆ ಇಲ್ಲವಾಗಿದೆ. ಇಂಥದೊಂದು ಸಂಕಲನವನ್ನು ಪ್ರಕಟಿಸಲು ಅನುಮತಿಸಿದ ಹಾಗೂ ಕವಿತೆಗಳನ್ನು ತಾವೇ ಆಯ್ದು ಸಂಪಾದಿಸಿಕೊಟ್ಟಿರುವ ಶ್ರೀ ಎಚ್.ಎಸ್. ಶಿವಪ್ರಕಾಶ ಅವರಿಗೆ, ಈ ಸಂಪುಟವನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ 'ಸ್ನೇಹಾ ಪ್ರಿಂಟರ್ಸ್' ಮಾಲೀಕರು ಮತ್ತು ಸಿಬ್ಬಂದಿ ವರ್ಗಕ್ಕೆ ಹಾಗೂ ಈ ಸಂಕಲನವನ್ನು ಪ್ರಕಟಿಸಲು ಸಮ್ಮತಿಸಿದ ಪ್ರಾಧಿಕಾರದ ಸದಸ್ಯ ಮಿತ್ರರಿಗೆ ಗೌರವದ ನಮನಗಳು.

ದಿನಾಂಕ : ೨೫.೧೦.೨೦೦೦

ಡಾ. ಎಚ್.ಜೆ. ಲಕ್ಕಪ್ಪಗೌಡ
ಅಧ್ಯಕ್ಷರು
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಪರಿವಿಡಿ

ನಾಯಿ-ಮುದುಕ

ಬೆಳಗ್ಗೆ ಅಷ್ಟು ಹೊತ್ತಿಗೇ ನಾಯಿಯ ಜೊತೆಗೆ ಮುದುಕ
ಊರಾಚೆಗೆ ವಾಕಿಂಗು ಹೊರಟನು. ಕೋಲೂರಿ ನಡೆಯುತ್ತಾ,
ಬೆಟ್ಟಗಳು ರೆಕ್ಕೆ ಬಿಚ್ಚಿರುವುದನ್ನು ಕಂಡು, ಹಾರಲಿ ಅಂತ
ಕಾಯುತ್ತಾ ನಿಂತನು. ಬಿಸಿಲು ಹಬ್ಬಿತು. ರೆಕ್ಕೆಗಳು ಮೋಡಗಳು!
ಕರಗಿದವು. ಗೋರಿಕಲ್ಲಿನ ಹಾಗ ಹಾರದ ಬೆಟ್ಟ.
ನಾಯಿಯ ಹಾಗೆ ನಡೆದ ಮನೆಯ ಕಡೆಗೆ.

ಮಿಲರೇಪ*

ಕನಸು ಕಂಡಿದ್ದೀಗ ಕಣ್ಣು ಮುಂದಿನ ನೋಟ:
ಬಿದ್ದ ಮನೆ, ಗೆದ್ದಲಿಕ್ಕಿದ್ದ ಕಂಬಗಳು,
ನವಣೆ ಹೊಲಗಳ ಮಧ್ಯ ಪಾಳು ನೆಲ
ಇಲ್ಲಿದ್ದ ಮನೆಯ ಉಳಿದ ಕೊನೆಯ ಚಿಹ್ನೆಗಳು.
ಮಂಜಿನ ಅನಾಮಧೇಯತೆಯ ಕೆಳಗೆ
ಹೂತ ಚಿಕ್ಕಂದಿನ, ತಲೆಮಾರ ನೆನಪುಗಳು
ಇಲ್ಲೇನೆ ಕುಪ್ಪಳಿಸ ಕಲಿತಿದ್ದು,
ಕತ್ತರಿಸುವ ಚಳಿಯಲ್ಲಿ ಉಣ್ಣೆ ಬಟ್ಟೆಯ ಒಳಗೆ
ಬಚ್ಚಿಟ್ಟ ಮೈಯ ಮಧ್ಯ ಯೌವನ ಜ್ವಾಲೆ
ಚಿಗಿತದ್ದು.
ಹೊಸ್ತಿಲನ್ನೊದೆಯುತ್ತ ಗುರುವಿನೆಡೆ ಹೊರಟಾಗ,
ತಾಯ ಮುಚ್ಚಿದ ಬಾಯ ಕಂಬನಿಯ ಬಿಂದು
ಸ್ಪರ್ಶಿಸಿದ್ದು;
ಎಲ್ಲಿರುವೆ ತಂದೆ, ನವಣೆ ಮೂಟೆಗಳ
ಹೊತ್ತು ತರುತ್ತಿದ್ದ ಕಟ್ಟಾಳು ರೈತ?
ತಾರಬಲ್ಲೆನೆ ತಿರುಗಿ
ಗೋಳಿಡುವ ಮಂಜುಗುಪ್ಪೆಗಳ ನಡುಮಧ್ಯ
ಇಟಕಿ ರಾಶಿಯ ಅಡಿ ನೆನಪಾಗಿ ಹೂತ
ಜೀವದಾತರ ಈಗ?
ನಿಂತುಕೊಂಡಿದೆ ಕೈತಟ್ಟಿ ಢಾಕಿನೀ ಸಂಕುಳ
ಅಂದಿದೆ: 'ತರುತ್ತೇವೆ ಸತ್ತವರ ಮತ್ತೆ,
ಮಂಜು ಕಣಗಳ ಹೊನ್ನಾಗಿಸುತ್ತೇವೆ.
ಮಿಲರೇಪ ನೀ ಹೂಂ ಅಂದರೆ,
ಚಿಟಕಿ ಹಾಕಿದರೆ ಆಶೆಯೀಡೇರಿಸುವ
ಢಾಕಿನಿಯರ ವಶಮಾಡಿ,

ಆಶೆ ಹೀಗೆ ಬೀಳುವ ಮನೆಗೆ,
ಸಂಸಾರಕ್ಕೆ
ಬುನಾದಿ ಎಂದು ತೋರಿದೆ ಮಾರ್ಪ;
ಚಕ್ರ ತಿರುಗುವುದ,
ನಿಧಾನಗಳ ಗುಟ್ಟ,
ಬಾಧೆಗಳ ರೂಪಗಳ ಢಾಕಿನೀ ಸಂಕುಲದ
ನರ್ತನದ ಮೊದಲು ಕೊನೆ ಕಾಣಿಸಿದೆ.
ಕಾಲದೇಶಗಳ ಬೀಳಿನಿಕ್ಕಟ್ಟಲ್ಲಿ
ಕರೆದೊಯ್ವ
ವಜ್ರಾಯಾನದಗ್ನಿರಥ ಸಾರಥಿಯೆ
ನಮನ ನಮನ ನಿನಗೆ.
ಬಿದ್ದ ಇಟ್ಟಿಗೆಯ ಅಳಿಸಿದ್ದ ಮಂಜು,
ಬಿಳಿಗಗನಕ್ಕೆ ಬಾಯ್ಬಿಟ್ಟ ಗೆದ್ದಲು ಕಂಬ
ಹದಿನಾಲ್ಕು ಲೋಕಗಳ ಹಣೆಬರಹ;
ನಿರ್ವಾಣದಂಚಲ್ಲಿ ಬುದ್ಧಗುರುವಿಗೆ ಕೂಡ ಕಿಬ್ಬೊಟ್ಟೆ ನೋವು.
ಯಾಕೆ ಬಲಿಕೊಡಲಿ ಚಕ್ರದ ತಿರುಗಣೆಗೆ
ಅಪ್ಪ ಅಮ್ಮ ನಿಮ್ಮ?

---

* ಮಿಲರೇಪ ಟಿಬೆಟ್ಟಿನ ಮಹಾಯೋಗಿಗಳಲ್ಲೊಬ್ಬ. ಚಿಕ್ಕಂದಿನಲ್ಲೇ ಮನೆಯಿಂದ ತೆರಳಿ, ಗುರು ಲೋತ್ಸಾವಮಾರ್ಪನ ಕೈಕೆಳಗೆ ಅನೇಕ ವರ್ಷಗಳ ಕಾಲ ಯೋಗದ ಅಧ್ಯಯನ ನಡೆಸಿದ. ಬಳಿಕ ಗುರುವಿನ ಆಜ್ಞೆಯ ಮೇರೆಗೆ ಮನೆಗೆ ಹಿಂದಿರುಗುವಾಗ ತನ್ನ ತಾಯಿ ತಂದೆಗಳು ಸತ್ತಂತೆ, ಮನೆ ಬಿದ್ದಂತೆ ಸ್ವಪ್ನವಾಯಿತು. ಊರು ತಲುಪಿದಾಗ ಈ ಸ್ವಪ್ನ ನಿಜವಾಗಿತ್ತು. ತನ್ನ ಯೋಗಶಕ್ತಿಯಿಂದ ಎಲ್ಲವನ್ನೂ ಪೂರ್ವಸ್ಥಿತಿಗೆ ತರುವ ಶಕ್ತಿಯಿದ್ದರೂ, ಅನಿತ್ಯವಾದವನ್ನು ನೆನೆದು ಆತನು ಮತ್ತೆ ತಪಸ್ಸಿಗೆ ಹೊರಟುಹೋದ.

ಜಂಗಮರು

ಮ್ಲೇಚ್ಛ ಖಡ್ಗಗಳು ಫಳ್ಳೆಂದು
ವಿಜಯನಗರ ಸಾಮ್ರಾಜ್ಯ ಸೂರ್ಯನಿಗೆ
ಕೆಂಪು ನಾಚಿಕೆ, ಮೋಡಗಳ ಜವನಿ
'ಅಲ್ಲಾ ಹೋ ಅಕ್ಬರ್'
ಆಕಾಶದೆತ್ತರಕೆ ಸಾಮ್ರಾಜ್ಯದುನ್ನತ್ತಿ
ದೇವದೇವಿಯರಿಗೆ ತಲಾ ಒಂದೊಂದು
ಎರಡೆರಡು
ಮಂದಿರಗಳ ಕಟ್ಟಿ
ಸ್ಥಾವರಗಳಲ್ಲಿ ಬೇರೂರಿ ಕೂತವರು
ಕನಸಿನಲ್ಲೂ ಕಂಡಿರಲಿಲ್ಲ;
ರಾಮರಾಯನ ಮುದಿ ಎದೆಗೆ ಶೂಲ,
ಮೋರಿಗಳ ತುಂಬಾ ಹೆಣ,
ಬೀದಿಯೆಲ್ಲಾ ರಕ್ತ, ಬಳೆಯ ಚೂರುಗಳು,
ಬರಿಯ ಹಣೆಗಳು
ಅರಬ್ಬಿ ಕುದುರೆಗಳ ರಾಜ ಗಮನ;
ಗೆದ್ದ ಕೈಗಳ ಹಾರೆಯೇಟಿಗೆ
ಕಡಲೆ ಗಣಪತಿ ಕಡಲೆ
ಉಗ್ರ ನರಸಿಂಹನ ಕಲ್ಲಿನ ಮೂಗು
ನುಚ್ಚುನೂರು
"ಹರಹರ ಮಹದೇವ"
ಸ್ಥಾವರಕ್ಕಳಿವುಂಟು
ಜಂಗಮರು ನಾವು
ಜಗದೊಳು ಜಂಗಮರು ನಾವು
ಕಲ್ಯಾಣದಲ್ಲಿ ರಕ್ತದ ವಾಸನೆಗೆ
ಕಾಲು ಕಿತ್ತೋಡಿದವರು;

ಉಳವಿಯಲ್ಲಿ ಮತ್ತೆ ಮಹಾಮನೆಯ
ಸ್ವಪ್ನ ಕಂಡವರು.

ರಾಜಾಸ್ಥಾನ, ವಿರೂಪಾಕ್ಷ ದೇವಸ್ಥಾನ,
ಕೂತು ಉಣ್ಣುವ ಊಟ
ಮುತ್ತು ರತ್ನದ ರಾಶಿ
ವಿಜಯ ಪತಾಕೆ
ನದಿಯ ತಟಾಕಗಳನ್ನು
ಬಿಟ್ಟು ಹೊರಟಿದ್ದೇವೆ:
ಸ್ಥಾವರಕ್ಕಳಿವುಂಟು.

ನಡೆದಿದ್ದೇವೆ ಜಂಗಮರು
ಮನೆಯಿರದ ತಾರೆಗಳ, ಚಂದ್ರಮನ
ಗುರಿಯಿರದ ಗಾಳಿಸುಯ್ಲಿನ ಜೋಡಿ
"ಶಿವ ಶಿವಾ ನಿಮಗಿನಿತು ಕರುಣವಿಲ್ಲ".

ಮಾವಿನ ಕಾಲ

ಬೇಸಿಗೆ ಬಂದರೆ ಸಾಕು,
ಹಣ್ಣಿನಂಗಡಿಗಳಲ್ಲಿ ಕಿತ್ತಳೆ, ಮೋಸಂಬಿ, ದಾಳಿಂಬೆ
ಎಲ್ಲಿ ಹೋಗುತ್ತವೋ ಏನೋ. ಮಾವಿನ ಹಣ್ಣು
ಗೂಡೆಗಳ ತುಂಬ, ಲಾರಿಗಳ ತುಂಬ
ಬಂದಿಳಿದು, ಅಂಗಡಿಯಲ್ಲಿ ಕಿಕ್ಕಿರಿದು,
ಶೆಟ್ಟರಿಗೂ ಜಾಗವಿಲ್ಲದೇ ಆಚೆಯೇ ಮಾರಾಟ.

ಜೊತೆಗೆ ನೊಣಗಳು; ಮಾವಿನ ಹಣ್ಣಾ ಪರ್ವತದಲ್ಲಿ
ಹರಿಯುವ ನದಿಗಳು, ಝರಿಗಳು;
ಬೇಸಿಗೆಯ ಬಿಸಿಗಾಳಿಯನ್ನು ಮೀರಿಸುವ
ಗ್ಯೊಂಕಾರ ಸಹಿತ ಧಾಳಿಗಳು.

ಶೆಟ್ಟರ ತಲೆ ಹಿಂದೆ, ಗಿರಾಕಿಗಳ ತಲೆ ಹಿಂದೆ,
ಹಣ್ಣುಗಳ ಮೇಲೆಲ್ಲ ನೊಣಗಳು
ಬರೆಯುತ್ತಿರುವ ದಿವ್ಯ ಚಕ್ರ;
ಮಾವಿನ ವಾಟೆಗಳು ಕಟ್ಟಿರುವ ಮೋರಿಗಳ ತುಂಬ
ನೀರು ನಿಂತಿದೆ; ನೊಣಗಳದೇ ಹರಿದಾಟ.
ಮಾವಿನಕಾಲ ನೊಣಗಳ ಕಾಲವೂ ಹೌದು.
ಶಾಲೆ ರಜವಿದ್ದರೂ ಹುಡುಗ ಅಂಗಡಿಗೆ ಬರಲಿಲ್ಲ
ಹಣ್ಣುಗಳ ಕೊಳ್ಳಲಿಲ್ಲ.

* * *

ಬೇಸಿಗೆ ಚಳಿಗಾಲ ಬೇರೆಯಾಗಿರುವುದು
ಕ್ಯಾಲೆಂಡರಿನಲ್ಲೇ
ಗಣಿತ ತರಗತಿಯಲ್ಲೇ
ಒಂದು ಕಿಟಕಿಯಲ್ಲಿ ಬಿಸಿಲು

ಇನ್ನೊಂದರಲ್ಲಿ ಮೋಡ
ಬೆಟ್ಟಗಳ ಕಡೆಯಿಂದ
ನುಗ್ಗಿ ಬರುವ ಮಳೆ.
ಒಂದೇ ಕ್ಷಣ ಒಂದೇ ಕೋಣೆಯ
ಎರಡು ಕಿಟಕಿಗಳಲ್ಲಿ ಮೂರು ಋತುಗಳು

* * *

ಬೇಸಿಗೆ ನೊಣಗಳ ಕಾಲ
ಮಾವಿನ ಹಣ್ಣು ಬೇಕೆನ್ನಿಸಲಿಲ್ಲ.

ಚಳಿಗಾಲದಲ್ಲಿ ನೊಣಗಳು ಕಡಿಮೆ:
ಅಮ್ಮಾ ಮಾವಿನ ಹಣ್ಣೆಂದು ಹಂಡಿ ಕೂತಾಗ
ಸುಮ್ಮನಿರು ಬರಲಿ ಬೇಸಿಗೆ ಎಂದು
ಅವಳ ಸಮಾಧಾನ.

ಚಂದ್ರ ಮತ್ತು ಗಡಿಯಾರ
(ಕೆಲವು ಗಪದ್ಯಗಳು)

"........ But lies are the natural food of boyhood: and he had eaten it greedily. His first resolve was to be more careful in future."

-E.M.Forster

ಒಂದು

ಗಾಳಿಪಟಗಳ ಹಬ್ಬ

ಹಕ್ಕಿಗಳ ಹಾಗೆ ಹಾರುವ ಪಟಗಳ ಪೈಪೋಟಿ. ಗಟ್ಟಿಮಾಂಜದ ಪಟಗಳು ಪುಸುಕಲು ಮಾಂಜದ ಪಟಗಳ ಕುತ್ತಿಗೆ ಕೊಯ್ದು, ಅವು ಆಶೆಗಳ ಹಾಗೆ ಉದುರಿದಾಗ, ಕೈ ತಟ್ಟಿ ಬಾಲಂಗೋಚಿ ಎಳೆದುಕೊಳ್ಳುತ್ತಾನೆ ಯಾರೋ ಹುಡುಗ. ಗೆದ್ದವರು "ಕಟ್ ... ಕಟ್...." ಅಂತ ಕೇಕೆ ಹಾಕೋದು ಕೇಳಿಸುತ್ತಾ ಇದೆ. ನಾನು ಕೂತಿದೀನಿ.

ಎದುರು ಮನೆ ಸೇಟು ಪಲ್ಟಿ ಹೊಡಿಯೋ ಪಟ ಸರಿಮಾಡಿ ಕೇಳುತಾನೆ:

"ವರ್ಷಕ್ಕೊಂದು ಹಬ್ಬ. ಯಾಕೆ ಸುಮ್ಮನೆ ಕೂತೆ? ಮುದುಕ ಏನು ನೀನು?"

ಅವನಿಗೆ ಹ್ಯಾಗೆ ಹೇಳಲಿ: ಈ ಮುದುಕರು ಅನಿಸಿಕೊಂಡವರು ಹುಡುಗರನ್ನ ಕತ್ತರಿಸಿ ಬಿದಿರು ಕಡ್ಡಿ ಸಿಗಿಸಿ, ಬಾಲಂಗೋಚಿ ಅಂಟಿಸಿ ಗಾಳೀಲಿ ತೂರಿ ಬಿಡೋದು; ಆ ಹುಡುಗರು ಮೋಡಗಳಲ್ಲಿ ಒಬ್ಬರೊಬ್ಬರ ಕತ್ತು ಕುಯ್ಯೋದು; ಕೊಯ್ಯಿಸಿಕೊಂಡವರು ಆಶೆಗಳ ಹಾಗೆ ಉದುರೋದು - ಹ್ಯಾಗೆ ಹೇಳಲಿ. ಹುಟ್ಟಿದಾಗಲೇ ಇದನ್ನು ನೋಡಿ ನನ್ನ ತಲೆಯೊಳಗಿನ ಕೂದಲು ನೆರೆತು ಹೋಯ್ತು.

"ಹೂ ಕಣೋ, ನಾನು ಮುದುಕ"

ಎರಡು

ಬಿಸಿಲಿಗೆ ಬಾಳೆಗಿಡದ ಹರಿದ ಎಲೆ ಪಚ್ಚೆ ಡಾಬು. ಡಾಬೇ ಇಲ್ಲದ ಅಮ್ಮನಿಗೆ ಮೈ ಮುರಿಯ ಕೆಲಸ. ಕಾಗೆ ಹಾಡು. ಸಂಪಿಗೆ ಮರದಲ್ಲಿ ಸಂಪಿಗೆ ಬಿಡದಕಾಲ. ನಿದ್ದೆ ಅಮ್ಮನಿಗೆ. ಯಾರು ಬರಬಹುದು ಈವತ್ತಿನ ಹಗಲುಗನಸಿಗೆ? ಹಲಸು ಹಣ್ಣಿನ ಮಾವನೆ? ಬಣ್ಣ ಬಣ್ಣದ ಬಳೆಗಾರನೆ? ಕಾಮನಬಿಲ್ಲು ಸೀರೆಗಳ ಶೆಟ್ಟೀನೇ?

ಕಾಗೆ ಹಾಡು. ತಲೆಬಾಗಿಲ ಸದ್ದು. ನಿಂತಿದಾನೆ ಅಲ್ಲಿ ಮಂಕರಿ ಹೊತ್ತುಕೊಂಡು 'ಖಾಲಿ ಸೀಸಾ ಪೇಪರ್' ಕೂಗುವನು. ಬಂದುಬಿಟ್ಟ ತಕ್ಕಡಿ ಅಲ್ಲಾಡಿಸಿಕೊಂಡು. ಅಮ್ಮನ ನಿದ್ದೆ ಹಾಳು. ತಿಂಗಳುಗಳ ಸುದ್ದಿ ಜೋಡಿಸಿ ತೂಗಿಸಿ, ಈ ಬೋಡು ತಲೆಯವನಿಗೆ ಸೀಯಬೇಕು.

ಮೂರು

ದೇವತೆಗಳು ಒಂದೊಂದು ಸಲ ಭೂಲೋಕಕ್ಕೆ ಬರ್ತಾರಂತೆ: ನಡುಮನೇಲಿ ಕಿತ್ತಾಡಿದ ಅಪ್ಪ ಅಮ್ಮ ಬೆಡ್ ರೂಮು ಸೇರಿದಾಗ: ಪಕ್ಕದಲ್ಲಿ ಮಲಗಿರೋ ನೆಂಟರ ಹುಡುಗಿ ಮೊಳಕಾಲು ಸೋಕಿಸಿ ಮೆಲ್ಲಗೆ ನಕ್ಕಾಗ. ರಾತ್ರಿರಾಣಿ ಸುಗಂಧದ ಗೆಜ್ಜೆ ಕೇಳಿಸ್ತಾ ಇಲ್ಲ?

ಕಿವಿತುಂಬ ನಾಯಿಗೋಳು. ಅಮ್ಮ ಬಚ್ಚಲು ಮನೇಲಿ- ಬಳೆಸದ್ದು, ಮೋರೀಲಿ ನೀರು. ಚಿಕ್ಕಪ್ಪನ ಮಗಳು ಬಿಕ್ಕುತ್ತಿದ್ದಾಳೆ. ಬೇಡಪ್ಪ ಯಾರಿಗೂ ಹೇಳಬೇಡ- ಭಾಷೆ ಕೇಳುತ್ತಿದಾಳೆ. ಇನ್ನು ಆ ಅಪ್ಪ ಆರಾಮಕುರ್ಚಿಯ ಮೇಲೆ ಕಣ್ಣು ಬಿಟ್ಟು- ಎದ್ದಿದಾನೋ, ಮಲಗಿದಾನೋ?

ಪೋಲೀಸಿನವನ ಸೀಟಿ. ಹೊರಟು ಹೋಗಿದಾರೆ ದೇವತೆಗಳು. ಪಿಶಾಚಿಗಳು ಬಂದಿದಾವೆ ಭೂಲೋಕಕ್ಕೆ.

ನಾಲ್ಕು

"ಊರು ತುಂಬಾ ಟಾರು ರಸ್ತೆ, ಬಿಸಿಲಲ್ಲಿ ಕರಗಿ ಕುದಿಯುತ್ತೆ. ಇಟ್ಟ ಹೆಜ್ಜೆ ಹಪ್ಪಳವಾಗುತ್ತೆ. ಹುಷಾರು, ಮಗೂ, ಆಚೆ ಹೋದಾಗ ಚಪ್ಪಲಿ ಹಾಕು.

ಎಡಗಡೆ ಕಟ್ಟುಗಾಜಿನಂಗಡಿ. ಗಾಜು ಚೆಲ್ಲಿರುತ್ತೆ. ಬಲಗಡೆ ಹೊಸ ಕಟ್ಟಡ ಏಳುತ್ತಿದೆ. ಜಲ್ಲಿ ಸುರಿದಿರುತ್ತೆ. ಬಳೆ ಅಂಗಡೀನೋ ರಸ್ತೇಲೇ ಒಡೆದು ಬಿದ್ದಿವೆ. ಹುಷಾರು, ಮಗೂ, ಆಚೆ ಹೋದಾಗ ಚಪ್ಪಲಿ ಹಾಕು."

ಐದು

ಹಾಲು ಕೊಡೋ ಮೊಲೆಗೆ ಕ್ಯಾನ್ಸರ್ ಹತ್ತುತ್ತೆ. ಮಕ್ಕಳ ಬಾಯಿ ತುಂಬ ಹುಳುಗಳು. ಪೂಜೆಗೆ ಹೂವು ಕೊಡೋ ಪಾರಿಜಾತ ಮರದ ಬುಡದಲ್ಲೇ ಗೆದ್ದಲುಗಳ ಬೀಡು. ಕಾಂಡದ ತುಂಬಾ ಮಣ್ಣು. ಕೊನೆಯ ಹೂವುಗಳಿಂದ ಸಾದು ತಯಾರಿಸಿ ಅಜ್ಜಿ ಎಲ್ಲರ ಹಣೆಗೆ ಬೊಟ್ಟಿಟ್ಟುಕೊಂಡು ಬಂದಳು.

ತಾಟು ಸರಿಸಿದರೆ ಕೆಳಗೆ ಗುಲಾಬಿ ಬಣ್ಣದ ಗುಬ್ಬಚ್ಚಿ ಮರಿಯನ್ನ ಮುತ್ತಿರುವ ಇರುವೆಗಳು. ಎಸಗಿತೋ ಮುದಿ ಗುಬ್ಬಚ್ಚಿ ಕೊಕ್ಕಲ್ಲಿ ಕಚ್ಚಿಕೊಂಡು ಹೋಗೋದಕ್ಕೆ:

ಡಾಕ್ಟರಿದಾರೆ, ಬಿಳಿಕೋಟು. ಬಿಳಿಚಿಕೊಂಡಿರೋ ಹೆಣ್ಣು. "ನನ್ನ ಹೊಟ್ಟೇಲಿ ಬೆಳೆದಿರೋ ಈ ಜೀವಾನ ಕೊಯ್ದು ನನ್ನ ದುಂಡು ಮೊಲೆಗಳ ಆಕಾರ ಉಳಿಸಿ ಡಾಕ್ಟರೇ...."

ಆರು

ಈ ರಾತ್ರಿ ಈ ಗಡಿಯಾರಾನ ಎಸೆದು ಆ ಚಂದ್ರನನ್ನ ಕೆಡಹುವ ಸಿಟ್ಟು ಸುಳ್ಳು, ಅವೆರಡೂ ಹೆಂಗಸರ ಸೀರೆ ಜಾಕೀಟು ನಗೆಗಳ ಹಾಗೆ: ಸೀರೆ ಜಾಕೀಟು ನಗೆಗಳನ್ನು ಕಳಚಿ ಹಾಕಿದ ಹೆಂಗಸರು ರಬ್ಬರ್ ಬೆರಳುಗಳಿಂದ ಹೇಗೆ ತಣ್ಣಗೆ ಕೊರಳು ಮುಟ್ಟುತಾರೆ - ಗೊತ್ತು.

ಮಹಿಳೆಯರೆ ಸೀರೆ ಜಾಕೀಟು ನಗೆ ಎಲ್ಲಾ ತೊಟ್ಟುಕೊಳ್ಳಿ. ಚಂದ್ರ ನೀನೂ ಗಡಿಯಾರ ಕಳ್ಳಾಟ ಮುಂದುವರಿಸಿ.

ಏಳು

ನನ್ನ ನೆನಪಿನ ಸ್ಮಶಾನದಲ್ಲಿ ಹೂತ ಹೆಣಗಳ ಪೈಕಿ ಶೇ. ೯೯.೯೯ ಹೆಂಗಸರವೇ. ಆ ಗುಂಡಿಗಳಲ್ಲಿ ಏನಾದರೂ- ಒಂದು ಸರಾನೋ ಉಂಗುರಾನೋ ಇಲ್ಲಾ ನಗೆನೋ ಇರುತ್ತೇನೋ ಅಂತ ಆಸೆ. ಕಳ್ಳನ ಥರ ತೋಡುತೀನಿ.

ಗುಂಡೀಲಿ-ನೋಡುತೀನಿ! - ನಾನೇ: ಆ ಕಿವಿಯಿಂದ ಈ ಕಿವಿವರೆಗೆ ನಗುತಾ ಇರೋ ಅಸ್ಥಿಪಂಜರ.

ಎಲ್ಲಿ ಹೋದರು ಆ ಹೆಂಗಸರೆಲ್ಲಾ? ಆಗೋ ಅಲ್ಲಿ-ನನ್ನ ಮಾಂಸ ಬೇಯಿಸುತಾ ಇದಾರೆ- ಬೇರೆ ಗಂಡಸರ ಜೊತೆ.

ಅಕ್ಟೋಬರ್, ೧೯೭೮

ಮಗು ಮತ್ತು ಹಣ್ಣುಗಳು

ಹಣ್ಣಿನಂಗಡಿ ಮುಂದೆ ಕಣ್ಣರಳಿಸುವ ಮಗು

ಇಲ್ಲಿ ಈ ತಿರುವಲ್ಲಿ ಥಟ್ಟನವತರಿಸಿದ ಕಪ್ಪು ಲಾರಿಯ ಹಾಗೆ
ಗಾಳಿ ಕೀಟಲೆ ಉಗುರೊ
ತುಂಟರೆಸೆಯುವ ಕಲ್ಲೊ
ಕಾಯಿಯಲ್ಲೇ ನಿನ್ನ ಕೆಡವದಿರಲಿ.

ಹಣ್ಣಿನಂಗಡಿಯಾಗು ನೀನೂನು
ಗಿರವಿಯಂಗಡಿ ಗುಜರಿಗಳ ಧೂಳು ಹಬ್ಬಿದ
ಊರ ಮಾರುಕಟ್ಟೆಯ ನಡುವೆ

ಹಣ್ಣಾಗಬೇಕು ಮಗು,
ಮೈಯೆಲ್ಲ ಮಾಗಿ ಹಣ್ಣಿನ ಸುಕ್ಕು ಬರುವವರೆಗೆ.
ಪಕ್ವತನ ಬಿರಿದ ಬಾಳೆಹಣ್ಣಿದೆಯಲ್ಲ
ಅದರ ಹಾಗೇ ಕೊಂಚ ಬಾಗಬೇಕು.

ಕೊಬ್ಬಿದರೆ ಚಕೋತನೆಯ ಹಾಗೆ
ಕುಗ್ಗಿದರೆ ನಿಂಬೆಹಣ್ಣಿನ ಹಾಗೆ
ಹುಳಿಗಟ್ಟುವುದು ನಿನ್ನೊಳಗೆ
ಸರಿಗಾತ್ರವಾಗಿ ಸಮನಿಸಲಿ ನಿನ್ನತನ
ಕಿತ್ತಲೆಯ ಹಾಗೆ, ಮೋಸಂಬಿ ಹಾಗೆ
ರಸಪೂರಿ ಮಾವಿನ ಹಣ್ಣಿನಂತೆ.
ಅಂಜೂರದಂತೆ ಅಪರೂಪವಾಗು ಜನರ ಕಣ್ಣಿಗೆ;
ಕಂಡರೆ ಕಾಣು ಕಲ್ಲಂಗಡಿಯಾಗಿ
ಬೇಸಿಗೆಯ ಕಮರಿರುವ ಕಣ್ಣುಗಳಿಗೆ.
ದಳದಳ ಕೊಯ್ದು ಅರಳಿಸಿದ ದಾಳಿಂಬೆಯೊಳಗೆ
ಥಳಥಳ ಕೆಂಡ ಬಣ್ಣ ಮಣಿ ಮಣಿ
ಹನಿ ಹನಿ ತನಿರಸದ ಖನಿಯಾಗು;

ಹಬ್ಬಿಕೋ ದ್ರಾಕ್ಷಿಬಳ್ಳಿಯ ಹಾಗೆ
ಆಯುಷ್ಯ ಚಪ್ಪರದ ಉದ್ದಗಲ;
ತಬ್ಬಿಕೋ ಬಿಡಬೇಡ
ಹಣ್ಣು ತೊಡಿಸಲು ನಿನಗೆ
ತಾನೆ ಮಣ್ಣಾಗುತ ಬರಲು ತೋಟಗಾತಿ

ಬೆಲೆಯ ರಾಕೆಟ್ಟುಯಾನ ಹೊರಡದಿರು ಸೇಬು ಹಣ್ಣಿನ ಜೊತೆಗೆ
ಎಲ್ಲರಿಗೂ ದಕ್ಕುವ ಎಲಚಿಯಾಗು.

ಜನವರಿ, ೧೯೭೮

ಕಟ್ಟಡದ ಕೆಲಸಗಾರರು

ಸ್ಮಶಾನದ ಬೂದಿ ಮಿಶ್ರಿತ ಮಣ್ಣು
ಹೆಜ್ಜೆ ಕಲ್ಲುಗಳ ದಾಟುತ್ತಾ
ಅರೆಬೆಂದ ಕೊರಡುಗಳ ಎಡವುತ್ತ
ಬಂದೆ ಬಯಲಿಗೆ
ಒಂದು ಸಲವಾದರೂ
ಬೆಚ್ಚನೆಯ ಗಾಳಿ ತುಂಬಿಕೊಳ್ಳಲು ಪುಪ್ಪುಸದೊಳಕ್ಕೆ
ಮಣ್ಣ ತಿಮಿಂಗಲ ಎದ್ದು ನಿಂತಂತೆ ದೂರದಲ್ಲಿ[illegible]
ಸುಣ್ಣ ಬಳಿಯದ ಮಹಲು:
ಅದರ ಭುಜದ ಮೇಲಿನ ಕೂಲಿಕಾರರ [illegible]
ಮಣ್ಣು ಇಟ್ಟಿಗೆಯಾಗಿ ಬಳಿಕ ಕಟ್ಟಡವಾಗಲು
ಇಷ್ಟಿಷ್ಟೆ ಏರಿದ ಎತ್ತರದ ಜೀವಂತ ಸೀಮಾರೇಖೆ.
ಕೈಯಿಂದ ಕೈಗೆ ಹಾರುವ ಬಾಣಲಿಯೊಂದು
ರೆಕ್ಕೆ ಮೂಡದ ಮಣ್ಣು ತುಂಬಿದ ಲೋಹದ ಹಕ್ಕಿ.
ತೊನೆಯುವ ತೋಳುಗಳ ಹಿಂದೆ
ಬಗಲ ಕಿಂಡಿಗಳಲ್ಲಿ
ನೀಲಿ ಹೊತ್ತಿ ಉರಿದರೆ ಏನು?
ಮೋಡಗಳು ಬೂದಿ ಎಷ್ಟು ಕಟ್ಟಿದರೇನು?
ಬುಡದಿಂದ ಅಡಿಅಡಿ ಬೆಳೆದು ಬೆವರುಂಡು ನಿಲ್ಲುವ
ಸುತ್ತ ಹಬ್ಬುವ
ಮಜಲು ಮಹಲು.
ಬಾವಿಗಾಲಿಗಳ ಮಿಡಿಮಿಡಿಯ
ಕೂಗುಗಳ ಕರೆಗಳ ಮಧ್ಯ
ಸುಡು ಮರಳರಾಶಿಯ ಹರುಹರುಕು ನೆರಳಲ್ಲಿ

ಅರೆ ತೆರೆದ ಕಣ್ಣುಗಳ ಕಂದನಿಗೆ
ಹಾಲನೂಡುವ ಅಮ್ಮ

ನಿನ್ನ ಗರ್ಭದ ಗುಪ್ತ ಸಾಮ್ರಾಜ್ಯಗಳಲ್ಲಿ
ನಗರನಾಡುಗಳೆಷ್ಟು ಹೊರಳುತ್ತಿವೆ?

ಮಾರ್ಚ್, ೧೯೭೮

ಸಿಂಗಿರಾಜ ಸಂಪಾದನೆ*

ಬಂದಿತ್ತು ದಿನ: ಬಸವಣ್ಣ ಕಲ್ಲಿಗೆ, ಚನ್ನಬಸವಣ್ಣ ಉಳವಿಗೆ
ಪ್ರಭು ಅಕ್ಕ ಕದಳಿ ದ್ವಾರಕ್ಕೆ
ಮಿಕ್ಕಾದ ಪ್ರಮಥರೆಲ್ಲರೂ ತಮ್ಮ ತಮ್ಮ ಲಕ್ಷ್ಯಕ್ಕೆ

-ತುರುಗಾಹಿ ರಾಮಣ್ಣ

* ಸಿಂಗಿರಾಜ ಪುರಾಣ'ದ ಕರ್ತೃವಾದ ಸಿಂಗಿರಾಜ ಕೆಲವರಿಗೆ ಮಾತ್ರ ಪರಿಚಿತ. ಅವನ ಕಾಲ ವಿವಾದಾಸ್ಪದ. ಬಸವಣ್ಣನ ಸಮಕಾಲೀನ ಎಂದೂ ಹೇಳುವುದುಂಟು. ಆದರೆ ಈ ಪದ್ಯಗಳಲ್ಲಿ ಬರುವ ಸಿಂಗಿರಾಜ ಕಾಲ್ಪನಿಕ ವ್ಯಕ್ತಿ.

ಕೆಲವು ಐತಿಹಾಸಿಕ ವಿವರಗಳ ಆಧಾರದ ಮೇಲೆ ಹೀಗೆ ಕಲ್ಪಿಸಿಕೊಂಡಿದ್ದೇನೆ: ಸಿಂಗಿರಾಜ ಒಬ್ಬ ಮಾಂಡಲಿಕ, ಬಸವಣ್ಣನ ಅನುಯಾಯಿ; ಬಿಜ್ಜಳ-ಬಸವರ ನಡುವೆ ವೈಮನಸ್ಯ ಬಂದು ಬಸವಣ್ಣ ಕಲ್ಯಾಣವನ್ನು ತ್ಯಜಿಸಿದಾಗ ಬಿಜ್ಜಳನ ವಿರುದ್ಧ ಈತ ಬಂಡೇಳುತ್ತಾನೆ. ಆಗ ಅವನನ್ನು ಸೆರೆಹಿಡಿಸಿ ಬಿಜ್ಜಳ ಮರಣದಂಡನೆ ವಿಧಿಸುತ್ತಾನೆ.

ಸಿಂಗಿರಾಜನ ಸೆರೆಮನೆಯ ಕೊನೆಯ ದಿನಗಳ ಅನಿಸಿಕೆಗಳನ್ನು ಆಧರಿಸಿ ರಚಿಸಿದ ಕವಿತೆಗಳು ಇವು. ಒಟ್ಟಿನಲ್ಲಿ ಸಿಂಗಿರಾಜ ಒಂದು ಸಾಮಾಜಿಕ ಅನುಭವಕ್ಕೆ ಸ್ಪಂದಿಸುವ ಪ್ರಜ್ಞಾವಲಯ.

ಸುರುಳಿ ಒಂದು:

ಹಗಲಿನಲ್ಲೂ ಕಂಬಿಗಳ ಸರಿವ ನೆರಳುಗಳಲ್ಲಿ
ರಾತ್ರಿ ಬಿಡಿಸಿಕೊಂಡಿದೆ. ಬಿಸಿಲುಕೋಲುಗಳ ಹೊಂಧೂಳ ಕುಣಿತದ ಕೆಳಗೆ
ಹರಕು ಬಟ್ಟೆ ಹೊಟ್ಟೆ ಬಿಗಿತ. ಎಷ್ಟುಸಲ
ಸೂರ್ಯನಲುಗು
ಯೌವ್ವನದ ಕತ್ತಿನ ಕುಣಿಕೆ

ಕತ್ತರಿಸಲಿಲ್ಲ. ರಾತ್ರಿ ಚಂದ್ರಾಯುಧಗಳು
ಮೂಡುವುವು ಹೀಗೆ ನೆರಳಿಗೂ.
ನಕ್ಷತ್ರ ಗಡಣಗಳ ಎರಡರಷ್ಟು
"ಮರಣದಂಡನೆ" ಎಂದಾಗ ಕಾದ ಸೂಜಿಗಳಾದ
ರೋಮ ಕೂಪಗಳ ನೂರರಷ್ಟು
ಭಯದ, ಕಂಪನದ ಪಾತ್ರಗಳು.

ಸುರುಳಿ ಎರಡು:

ನಿನ್ನ ಶವಮಂದಿರಗಳ ದ್ವಾರಪಾಲಕರ ಶಿಲೆಗಳ
ಮೂಗು ಮೀಸೆಗಳನ್ನು
ಗಾಳಿ ಮಳೆ ಬಿಸಿಲು ಸವೆಸಿ ಹಾಕಲಿ.

ಕೆಂಪಾಳ ಕಾದ ತೋಳು ಕೆನ್ನೆಗಳ ಕೊಬ್ಬನ್ನು
ನಿಟ್ಟುಸಿರ ಧಗೆಯಲ್ಲಿ ಹುರಿದು
ಲಲ್ಲೆ ಮಾತುಗಳ ಸವಿಬೆರಸಿ
ನಿನ್ನೆಲ್ಲ ಸೂಳೆಯರ ಹಂಚಿ ತಿನ್ನಲಿ.

ಇರುಳ ಬಣ್ಣದ ಉರಿಗೆ ಕರುಕಾಗಿ ಆರೆಬೆಂದು
ಕಾಮಕೇಳಿಬಾವಿಗಳಲ್ಲಿ ತೇಲಿದರು
ಪ್ರತಿರಾತ್ರಿ.
ಹಗಲು ಶರಣರೆದೆತುಂಬ
ಹುಣಸೆಮರ ಬೆಳಸಿ
ಉಯ್ಯಲಾಡುವೆ,
ಬಿಜ್ಜಳಾ,
ನೀನು ಅಂತರ ಪಿಶಾಚಿ.

ಸುರುಳಿ ಮೂರು:

ಬಸವನಿಲ್ಲ ಕಲ್ಯಾಣದಲ್ಲಿ.

ವೇದಘೋಷದ ಗಂಟೆಗಳ ಪೂರ
ಪುರದ ಸಮಾಧಿ.

ಬಸವ ಕಲ್ಯಾಣದ ಕೊರಳಿಗೆ
ಮಿಂಚು ವಿಷಬಳ್ಳಿ.

ತಾಳೆಯೋಲೆ ನಾಗರಿಯ ಅರೆತಿಂದ
ಗೆದ್ದಲುಗಳಿಗೆ ಈಗ
ಮೋಚಿ ಅಂಬಿಗ ಅಕ್ಕಸಾಲಿಗರ
ಮೂಳೆ ಔತಣ. ಯಾರ ತಿಥಿ?

ಹುಳಬಿದ್ದ ಸೂಜಿಮಲ್ಲಿಗೆ ಗಿಡವೋ,
ಅಪ್ಪಣ್ಣ, ನಿನ್ನ ಹಡಪದ ಕತ್ತಿ.

ಕಲ್ಯಾಣದ ತುಂಬ ಬಸವರಾಗಲಿ ಕೋಟಿ.
ಕೋಟಿ ಕೊಂಬುಗಳಾಗಿ ನಿನ್ನ ಕ್ಷೌರದ ಕತ್ತಿ
ಬಿಜ್ಜಳನ ಅರಮನೆ ಅಡಿಪಾಯ ತಲೆಮಕುಟಗಳ
ಗುಮ್ಮಿ ಹಾಕಲಿ.

ಸುರುಳಿ ನಾಲ್ಕು:

ನಕ್ಷತ್ರ ಕಾಂತಿಯನ್ನು ಕೊಚ್ಚುವುದು
ಬಿಜ್ಜಳನ ಕಿರೀಟ
ಪಂಜುಗಳ ಬೆಳಕಲ್ಲಿ.
ಏನಾಯಿತು
ನನ್ನ ಜನಗಳೆ?
ನಿಮ್ಮ ಕನಸುಕಿಟಕಿ ನಕ್ಷತ್ರಗಳನ್ನು
ತಂದು ಸುರಿಯುತ್ತೀರಿ

ನಿಮ್ಮ ಮಕ್ಕಳ ನಾಳೆಗಳನ್ನು
ತುಳಿವ ಪಾದಗಳ ಮೇಲೆ.

ಮಳೆತರದ ಈ ಮೋಡಗಳು
ಬಂಡೆಗಳು ಬೀಳುವುವು ನಿಮ್ಮ ತಲೆಗಳ ಮೇಲೆ.

ಹೆತ್ತ ಕಂದಮ್ಮಗಳ ಮತ್ತೆ ಬಸಿರೊಳಗಿಟ್ಟರೂ
ಉಳಿದಾವೆ
ಅವರ ಹವಳದುಟಿಗಳು?

ಸುರುಳಿ ಐದು:

ಕಲ್ಲುದೇವಾಲಯಗಳು ಹೊಲ್ಲ
ಮೋಡ ನೆರಳುಗಳ ಗಾಳಿ ಗುರಿ ಒಡಿದ
ಜಂಗಮಾರ್ಚನೆಗೆಂದು

ಎಲ್ಲ ತೋಟದ ಬಣ್ಣ ಬಣ್ಣಗಳ ಹೂ ತಂದು
ಲಿಂಗಸಂಗಮನ ಪೂಜೆಗಾರಂಭ ಮಾಡಿದಿರಿ.

ಬಿಜ್ಜಳನ ಉಗ್ರಾಣದ ಜೋಳರಾಶಿಯ
ರೊಟ್ಟಿಯಲ್ಲವೆ ಅಣ್ಣ ನಿಮ್ಮ ರಕ್ತದ ಕಾವು?
ಬಿಜ್ಜಳನ ವಿಕ್ರಮನ ತಲೆಮೇಲೆ ಕೈಯಿಟ್ಟು
ಸತ್ತ ಸಂಸ್ಕೃತದಲ್ಲಿ ಹರಸುವರ
ವೀರ್ಯವಲ್ಲವೆ ನಿಮ್ಮ ಜೀವಧಾತು?
ನೀರಮಹಮನೆಯಲ್ಲಿ ದಾಸೋಹ ಗಂಟೆಬಾರಿಸಿ
ಕೂತು ಉಣ್ಣುವರಿಗೆಲ್ಲ ಮೃಷ್ಟಾನ್ನ
ಚನ್ನಬಸವ ನೀಡುತ ಬಂದ. ಎಷ್ಟು ದಿನ?

ಇಬ್ಬರು ಹೆಂಡಿರ ಗಂಡ
ಒಬ್ಬಾಕೆ ಹರಳಯ್ಯ ಮಧುವರಸರ ಸ್ನೇಹವಲ್ಲರಿ;

ಇನ್ನೊಬ್ಬಾಕೆ ಬಿಜ್ಜಳನ ಮನದ ವೇಶ್ಯಾವಾಟಿಕೆಗಳಲ್ಲಿ
ಕೊಳೆತಯೋನಿಯ ರಾಜ್ಯಲಕ್ಷ್ಮಿ.

ಸುರುಳಿ ಆರು;

ಕಲ್ಯಾಣವೆಂಬ ಕಲ್ಯಾಣಿಯ ತುಂಬ
ಕಮಲಗಳು ಕಿಕ್ಕಿರಿದು
ಮೋಚಿ ಕ್ಷೌರಿಕ ನೇಕಾರಾದಿಗಳ
ಬೆಳಗುಗಳನ್ನು ಬೆಳಕಲ್ಲಿ ನೇಯುವ
ಶತಕೋಟಿ ಸೂರ್ಯರು ಅರಳಲಿಲ್ಲ.

ಹಗಲಲ್ಲಿ ಬೆವರಿಳಿಸಿ
ಸಂಜೆ ಚಂದ್ರನ ಜೊತೆಗೆ
ಅನುಭಾವ ಗಾಳಿಯಲ್ಲಡ್ಡಾಡಿ
ರಾತ್ರಿ ಶರಣೆಯರ ಶ್ವೇತಶಿಖರಗಳಲ್ಲಿ
ನಿದ್ರಾಸಮಾಧಿ ಏರುತ್ತಿದ್ದ ಶರಣರ ಸಂಘ
ಎಲ್ಲ ಕಡೆ ಬಿಳಲುಗಳ ಹರಡಲಿಲ್ಲ.

ಕಲ್ಯಾಣಪ್ರಣತಿ ಬೆಳಕನ್ನು
ಕರುಕು ಬತ್ತಿಯೆ ನುಂಗಿ ಅಗೊ
ಹೊಗೆ ಕೂಗು ಹೊಲಗೇರಿ.....
ಯಾರ ಜಯಭೇರಿ?

ಸುರುಳಿ ಏಳು:

ಭಕ್ತಿಯೆಂಬುದ ಮಾಡಬಾರದಯ್ಯ.
ಗರಗಸದಂತೆ ಕೊಯ್ಯುವುದು
ಶಿಶುಬಸವ ಕಂಡ ಕನಸುಗಳನ್ನು.
ಹೊಟ್ಟುಗಳಲ್ಲಿ ಒಟ್ಟುವರು ನಮ್ಮನ್ನು
ಬಿಜ್ಜಳನ ಊಳಿಗದವರು

ಯುಕ್ತಿಯೆಂಬುದ ಬಿಡಬಾರದಯ್ಯ.
ಜಗದೇಕಮಲ್ಲ, ಮಸೆ ಮಸೆ ಕತ್ತಿ ಚೂರಿಗಳನ್ನು
ಮಲೆಬಂಡೆಗಳ ಮೇಲೆ.
ಹಂಸತೂಲಿಕೆಯೊಳಗೆ ಬಿಜ್ಜಳ
ಕಾಯುತ್ತಿರಬೇಕು ಗಣಿಕೆಯರಿಗೆ.

ಸುರುಳಿ ಎಂಟು:

ನನ್ನ ಮಿಡಿತಗಳ ಬಿರುಮಳೆ.
ಬಿಜ್ಜಳನ ಸೇನೆ ಕರಿ ತುರಗಗಳು ಕೊಚ್ಚಿಹೋದವೆ?

ಬಸವ ಬಿರುಗಾಳಿ.
ಕಲಚುರಿ ಪುರೋಹಿತರ ಬಟ್ಟೆ ಜುಟ್ಟುಗಳು ಹಾರಿಹೋದವೆ?

ಅಪ್ಪಗಳ ಚಪ್ಪಲಿಗಾದ
ಗೋಮಾಂಸದಂತೆ ಬೇಯಿಸಿದ
ಹರಳಯ್ಯ, ಸಂತತಿಯ ಗೋರಿಗಳ ಕೊಳ್ಳಿದೆವ್ವಗಳು.
ತ್ರಿಪುರಾಂತಕ ಮಂದಿರಕೆ ಬೆಂಕಿಕೊಟ್ಟವೆ?

ಸುರುಳಿ ಒಂಭತ್ತು:

ನನ್ನ ಒರೆಯಲ್ಲವಿತ ಕತ್ತಿ ಹೊಳಪಿಗೆ
ಕಣ್ಣುನಗೆಗಳಲ್ಲಿ ಪ್ರೇಮವ ಹೆರುವ
ತರುಣಿಯರ ಬೆವರು ಕಂಕುಳ ದಾಹ

ಉಪ್ಪು ಬೆರಸಿದ ನೀರು ಕುಡಿದ ನಾಲಗೆಗೆ
ಕೊತವಾಲನ ಚಾಟಿ ರಭಸಕ್ಕೆ ಬೆಚ್ಚಿ
ಉಚ್ಚೆ ಬೆಚ್ಚಗಾಗಿಸಿದ ಈ ತೊಡೆಗಳಿಗೆ.
ಕಹಳೆ ಧರಿಸಿ ಯೌವನರೆಕ್ಕೆಗುದುರೆ ಬೆನ್ನೇರಿ
ಕೊರಳ ನುಡಿಸುತ್ತ

ಹರಿಣೆಯರ ಮೇಲೆ ಗುರಿಯಿಟ್ಟ ಬಿಲ್ಲಾಳು
ಬೇಟಗಳ ಬೇಟೆಗಾರ.

ನಗರ ಮಧ್ಯೆಗಳಲ್ಲಿ
ಅವನ ತಿಂದು ಗರ್ಜಿಸಿವೆ
ಬಿಜ್ಜಳನ ಬೋನ ಹುಲಿ ಚಿರತೆ ಸಿಂಹಗಳು.

ಸುರುಳಿ ಹತ್ತು:

ದೋರಸಮುದ್ರ ಹೊಯ್ಸಳನ ಅಶ್ವಶಾಲೆಯ ಸಂಖ್ಯೆ
ಚೋಳ ವೀರಪಾಂಡ್ಯನ ಹೊಸ ಸೂಳೆ ಯಾವ ಸೀಮೆಯ ಚೆಲುವೆ
ಕರ್ಹಾಡದ ಅಂತಃಪುರದ ಗೋಪ್ಯ ಚರ್ಚೆ
ಈ ಚಿಂತೆ
ಮನದ ಕಣಜದ ಜೋಳ ತಿಂಬ ನುಸಿಗಳು.

ವಣಿಕ ಮಂಡಲಿ ಪತ್ರ:
"ವರ್ಣಸಂಕರವಾಯಿತು.
ಗೆಜ್ಜೆ ಕಟ್ಟಿಸಿ ಚಾಲುಕ್ಯ ಭೂತಗಳಿಗೆ
ಕುಣಿಸುತ್ತೇವೆ ನಿನ್ನ ಛಾವಣಿ ಮೇಲೆ."

ತೋಳಿನಹಿಂದೆ- ಅಲ್ಲ
ಆಳ ಮನಸ್ಸಿನ ತುಂಬ
ಈ ಹಾಳು ಕಿವಿಮೈಯ ಬೇಹುಗಾರರು
ಕಣ್ಣು ಮುಚ್ಚಿ ನೋಡು
ವಾಯುವ್ಯ ಗಡಿಯಾಚೆ
ಅರಬ್ಬೀ ಕುದುರೆಗಳ ನಾಗಾಲೋಟ
ಖುರಪುಟ ಧ್ವನಿ ಧೂಳು ಗೋಪುರ

ಹೇಗೆ ನಡುಗಿದೆ ನಿನ್ನ ಮಂತ್ರಶಾಲೆಯ ಕಂಬ

ಸುರುಳಿ ಹನ್ನೊಂದು:

ಬಸವಣ್ಣ ಕಟ್ಟಿದ ಲಿಂಗವನ್ನು
ಪಾದರಕ್ಷೆಗಳಡಿ ತುಳಿದ ಬಿಜ್ಜಳ
ಅಬ್ಬರಿಸಿದಾಗ ನಾನೆಂದೆ:
"ಗುರು ಹೋದ ಮೇಲೆ ಲಿಂಗವೇಕೆ?"

ಸ್ಮಶಾನದ ಬೂದಿ ವಿಭೂತಿಯೆಂದು
ಗಹಗಹಿಸಿ ಕೊತ್ವಾಲರಿಂದ ಮೈಯ್ಗೆಲ್ಲ ಬಳಸಿ
"ಭೂಷಣವೆ?" ಎಂದು ಕೇಳಲು
ಅಂದೆ: "ಗುರು ಬೂದಿಯಿಂದ
ಕತ್ತಿಗಳ ಹೂವು ಮಾಡುವೆನೆಂದ. ನನಗದೇ ವಜ್ರ."

ಬಡಬಡಗಿ ಮಾರಿತಂದೆಯ
ಹರಿದ ತಲೆ ಚಾಚುನಾಲಗೆ ತಂದು
ಮುಂದಿಟ್ಟು, "ಸಿಂಗಿರಾಜ, ಇಗೋ,
ನಿನ್ನ ಗತಿ!" ಎಂದಾಗ ಕಿರುಚಿಕೊಂಡೆ;
"ಹೇಡಿಗಳೆ, ಕಪ್ಪಡಿಗೆ ಕದಳಿಗೆ ಉಳವಿಗೆ
ದಿಕ್ಕುಪಾಲಾಗಿ ಕಾಲುಕಿತ್ತಿರೆ ಅಯ್ಯೋ."

ಸುರುಳಿ ಹನ್ನೆರಡು:

ಮರುಳು ಕುಪ್ಪೆಗಳನ್ನು ಸವರಿ ಹಾಕಿದ ಗಾಳಿ
ಮೋಡ ಮಹಲುಗಳನ್ನು ಚದುರಿಸಿದುದು
ನೆನಪಿದೆಯೆ, ಸಿಂಗಿರಾಜ?
ಭೂತಳದ ಕಾವಿನೀ ಸೆರೆಮನೆ ಮೂಲೆ
ಉಬ್ಬೆಗಮಲೀಗ ಹಸಿದ ನಿನ್ನ
ಚದುರಿಸಿದೆ ಇಲ್ಲೆಲ್ಲ: ಅಗೊ
ಸಿಂಗಿರಾಜನೆನ್ನುವ ಹುಡುಗ ಅಲ್ಲಿ

ಉಂಡೆಗಟ್ಟಿದ ಮಲದಿಂದ ಮರಳ ಮನೆ
ಕಟ್ಟುವನು; ಸಿಂಗಿರಾಜನೆಂಬೀ ನೆರಳು
ವೇಶ್ಯೆಯರ ನೆರಳನ್ನು ನುಂಗುವುದು;

ಜಂತೆಗಂಟಿದ ಎಷ್ಟೊಂದು ಇಷ್ಟಿಷ್ಟೆ ಸಿಂಗಿರಾಜರು
ಬಿಸಿಲು ದೂರದ ಮೇಲೆ ಬರೆವ ಚಿತ್ರಗಳಂತೆ;
ಕಲ್ಲು ಗೋಡೆಗಳ ಬೆವರು ಹನಿ ಹನಿ
ಅರೆಘನಿಸಿ ಜಿನುಜಿನುಗುವರು ಸಿಂಗಿರಾಜರು.....

ಸುರುಳಿ ಹದಿಮೂರು:

ದುಃಸ್ವಪ್ನಗಳು ಪ್ರಸವಿಸಿದ ಭ್ರೂಣಗಳ ಹಾಗೆ
ಇಲ್ಲೆಲ್ಲ ಬಿದ್ದಿದ್ದಾರೆ ಸಿಂಗಿರಾಜರು.

ಕತ್ತಿಮೊನೆ ಹೊಳಪಿನ ನಕ್ಷತ್ರಗಳಲ್ಲೆಷ್ಟನ್ನು
ಮುಚ್ಚುವುದು ಈ ಸೆರೆಮನೆಯ ಗೋಡೆ.

ಮೂರನೆಯ ಝೂವ ಎಂದು ಸಾರುವ
ನಿನಗೇನು ಗೊತ್ತಿದೆ,
ಭಯದ ಚಿಂದಿಗಳುಟ್ಟ ಸಿಂಗಿರಾಜ
ನಿನಗೇನು ಗೊತ್ತಿದೆ,

ಸೂಳೆಯರ ತೊಡೆಗಳೊಳಗೆ ತಿರುತಿರುಗಿ ಸತ್ತು
ಉಳಿದಷ್ಟು ಜೀವ ನಿದ್ದೆಗಣೆಮಾಡಿಸಿದ ಬಿಜ್ಜಳಾ,
ನಿನಗೇನು ಗೊತ್ತಿದೆ,

ಹುಲ್ಲುಗಾವಲು ನದಿ ಮೋಡಗಳ ರೆಕ್ಕೆ ಬಡಿದಂತೆ
ಈ ಪುಕ್ಕ ಉದುರಿಸಿ ಹೋದ
ಹೆಸರಿರದ ಪಕ್ಷಿ....

ಸುರುಳಿ ಹದಿನಾಲ್ಕು:

"ಎಮ್ಮವರು ಬೆಸಗೊಂಡರೆ
ಶುಭಲಗ್ನವೆನ್ನಿರಯ್ಯ,
ಇದು ಸಂಗಮನ ಸಾಮ್ರಾಜ್ಯ."

ಚಂದ್ರಬಲ ತಾರಾಬಲ ಉಂಟೆಂದಿರಿ;
ಪಾಳುಮಂದಿರಗಳಿಂದ ಹರಿದುಬಂದ
ಹಾವು ಕಚ್ಚಿತು ಚಂದ್ರನ;
ಚದುರಿದವು ತಾರಾಬಲ.

ಬಿಜ್ಜಳನ ಕಾರಿರುಳ ಕಣ್ಣಿಂದಿಳಿದು
ಹೆಣ್ಣುಗಂಡಿನ ನಡುವೆ ಅಗ್ನಿ ಕುಂಡ;
ಮದುವೆಯ ನಡುವೆ ಮರಣವಡ್ಡಬಿದ್ದಿತಲ್ಲಾ.....

ಹದ್ದುಗಳು ನೆರೆದಿರುವ ಸಂಜೆ ವೇಳೆ;
ಮದುವೆ ಮಾಡಿದರವ್ವ
ನೇಣುಗಂಬಗಳ, ಹದ್ದುಗಳ ನೆರಳಲ್ಲಿ
ಬಿಗಿದ ಹಿಡಿಗಳ, ಮುಗಿದ ಉಸಿರಿನ
ಸಿಗದ ಹರಕೆಯ, ಚಾಚು ನಾಲಗೆ ಹಾಗೆ
ಜೋತ ಹೆಣಗಳ ನೆರಳಲ್ಲಿ
ಮಾಡಿದರವ್ವ ಮ-ದು-ವೆ-ಯ.

ಮದುವೆ ಔತಣದಲ್ಲಿ ತಿಥಿಯ ರುಚಿ
ರುಂಡವಿಲ್ಲದ ಗಂಡನ ಚೆಂದುಟಿಗೆ
ರುದ್ರಭೂಮಿಗಳಲ್ಲಿ ಹುಡುಕಿದಳು ಹೆಣ್ಣು.
ಕಡಿದು ಬಿದ್ದ, ಕಣ್ಣೀರನೊರೆಸಿದ ತೋಳು
ಕಟ್ಟಲಿಲ್ಲವಲ್ಲಾ ತಾಳಿ ಎಂದು ಕೊರಗಿದಳು.
ಎಮ್ಮವರು ಬೆಸಗೊಂಡರೆ ಶುಭಲಗ್ನವೆನ್ನದಿರಿ
ಇದು ಬಿಜ್ಜಳನ ಸಾಮ್ರಾಜ್ಯ.

ಸುರುಳಿ ಹದಿನೈದು:

ತಲೆ ಕಡಿಸಿ, ಕರುಳ ಗೋಜಲ ಬಿಡಿಸಿ,
ನಗರದ ನಾಲ್ಕು ದಿಕ್ಕುಗಳಲ್ಲಿ ನೇತುಹಾಕಿಸಿ
ಬಿಗಿದ ಹಿಡಿಯನ್ನೊ
ಕಾಲು ತುಂಡನ್ನೊ
ನೀ ನಗುವ ಅಟ್ಟಹಾಸಕ್ಕೆ
ಇರುವುದಿಲ್ಲ ನನ್ನ ಕಿವಿ.

ನೀಲ ಗರ್ಭದ ಯಾವ ಕಪ್ಪನೆ ಹದ್ದು
ತಿಂದು ಹಾಕಿತು ಅದನ್ನು ಕುಕ್ಕಿ ಕುಕ್ಕಿ?

ಕತ್ತಿ ನೆಕ್ಕಿದ ರಕ್ತ ಹನಿಯಲ್ಲಿ,
ಹನಿಯ ಕಣದಲ್ಲಿ
ಕಣದ ಅಣುವಲ್ಲಿ
ಎಷ್ಟೊಂದು ಜನ ಸಿಂಗಿರಾಜರ ಮೊಳೆತ
ಮಳೆಹನಿಯ ಮೆಲುಸಿಡಿತದೊಳಗೆಲ್ಲೊ
ಹದಿನೈದು ಶತಕಗಳ ಬೆಳೆ ಅಡಗಿದಂತೆ.

ಮರಕಡಿವ ಮಾರಯ್ಯ ಮಳೆಯ ತಾರಯ್ಯ
ಮೇಘನಾದವ ಬಡಿಸು
ಭಯಕೆ ಬಿಸಿಲಿಗೆ ಬಿರುಕು ಬಿರುಕಾದ
ಎದೆಯ ನೆಲಗಳ ಮೇಲೆ.

ಸುರುಳಿ ಹದಿನಾರು:

ನಾಳೆ ಇದೇ ಹೊತ್ತು:
ಇಲ್ಲೆಲ್ಲಾ ಬೆರತು ಬಿರಿಯುವ

ತಿರುಗಿ ಬೆರೆಯುವ
ಸಿಂಗಿರಾಜರು ಎಲ್ಲಿ ಹೋಗುತ್ತಾರೆ?
ಮೋಡದೂರುಗಳಿಗಲ್ಲ;
ಈ ಸೆರೆಯ ಸಂಕೋಲೆಗಳು ಹೂತ
ವರುಷಗಳ ಮೇಲೆ ಹೊನ್ನಿನರಮನೆ.
ಯಾರು ಕಟ್ಟಿದರು ಹರಳಯ್ಯ
ಮಧುವರಸ ಕಾಣಿಸದೆ ನಿಮಗೆ?

ಶೀಲವಂತರ ಜೊತೆಗೆ ಸಿಂಗಿರಾಜರು ಬೆರತು
ದೂರ ದಿಗಂತದ ಹೊನ್ನಿನರಮನೆ ಮೇಲೆ
ಸೂರ್ಯ ಪಕ್ಷಿಗಳು.

ಮುಗಿಲುಮಾಧವಿ ಜೊತೆಗೆ
ಗಿಡ ಬೆಟ್ಟ ನದಿಯಾದ ಶೀಲವಂತನ ಮದುವೆ
ಹೊಂಬಿಸಿಲು ಮಳೆ ಮೊಗ್ಗು ಕಾಮನ ಬಿಲ್ಲು
ಕಾಣಿಸದೆ ನಿಮಗೆ?

ಅಲ್ಲಿಯ ತನಕ
ಹಾಡುದೋಣಿಯ ಕಟ್ಟಿ
ಪುಳಕದಲೆಗಳ ಮೇಲೆ
ಹೆಣ್ಣು ಗಂಡುಗಳ ತೇಲಿಸಿದ
ದಿಕ್ಕುಗಳ ಮೇಳವಿಸಿದ
ಈ ಕೊರಳ ಕತ್ತರಿಸಿದ
ಕತ್ತಿಯಲುಗಲ್ಲಿ ತೊಟ್ಟಿಕ್ಕುವ
ರಕ್ತಹನಿಗಳ ಮೇಲೆ
ಕಾದು ಉರಿಯುವ ಸೂರ್ಯ
ಎಷ್ಟು ಸಲ ಮುಳುಗುವನು
ಮೂಡುವನು?

ನವೆಂಬರ್, ೧೯೭೮

ವಾಸವದತ್ತೆ*

*ವಾಸವದತ್ತೆ ಬುದ್ಧನ ಸಮಕಾಲೀನಳು.
ಅವಳೊಬ್ಬ ಪ್ರಸಿದ್ಧ ವಾರಾಂಗನೆ.
ಅವಳ ಮನಸ್ಸಿನಲ್ಲಿ:

ಒಂದು:

ನನ್ನ ಪ್ರಾಣದ ಅದಿರನಗೆದಗೆದು
ಕಣ್ಣುಗಳನ್ನು ಬೆಳಕಿನೊಡವೆ ಮಾಡಿದೆ
ಕೋಸಲದ ಅರಸುಕುವರಾ ನೀನು......

ಉಚ್ವಾಸ ನಿಶ್ವಾಸಗಳ ಲಯಹಿಡಿದು
ನಾಡಿ ಎದೆ ತಾಳಗಳ ಮೈಯೆಲ್ಲ ಬಾರಿಸಿದೆ,
ಹಾಡಿನಣ್ಣನೆ, ಮಂತ್ರಿಕುವರಾ ನೀನು.

ನನ್ನ ಮೈಗಂಧಕ್ಕಿಂತ ಸಣ್ಣನೆಯ ನುಣ್ಣನೆಯ ಕಣವಾಗಿ
ರೋಮಕೂಪಗಳ ಸೂಕ್ಷ್ಮದ್ವಾರಗಳಿಂದಿಳಿದು
ರಕ್ತಮಾಂಸವ ನಾದಿ
ಋಷಿ ಕೂಸುಗಳ ಮೈಯೆಲ್ಲಾ
ಹಡಸಿದೆ
ಆನೆ ದಳಪತಿ ನೀನು.

ಜಗಕಳಚಿ ಕೆಳಗಿರಿಸಿ
ಮಿಂಚುಕಣ್ಣು ಕಪ್ಪುರೆಕ್ಕೆಕುದುರೆ ನನ್ನನ್ನು
ಹತ್ತಿ
ತಾರೆಯೆತ್ತರ ಸಾರಿ
ಪಾತಾಳಗಳ ನೋಡಿ
ನಾ ಮುಂದೋ
ನೀ ಮುಂದೋ
ಸಾಗಿರುವ ಈ ರಾತ್ರಿ

ಎರಡು:

ಮಾಂಗುಡಿಯ ನೆತ್ತಿ ಮುಗಿಲಿನವರೆಗೆ
ನೀ ಬಂದು ಕೂಡುವ ಮೊದಲು
ತೊಡೆಯಿರದ ಮಣ್ಣು ನಾನು
ತನ್ನನ್ನೇ ಕಚ್ಚಿ ಇಷ್ಟಿಷ್ಟೇ ತಿನ್ನುವ ಇರುವೆ;
ರೋಮಕೂಪದ ಕಿಟಕಿಯೊಳಗಡೆ ಇಣುಕಿ
ಕಣ್ಣು ಬಾಗಿಲು ತೆಗೆದು
ಮೆಲ್ಲ ಮೆಲ್ಲನೆ ನಡೆದು
ನಿನ್ನ ಮಾಂಸ ವಸಂತ ಸೇರಿರುವೆನು

ಮಾಂಸ ಹಣ್ಣುಗಳಿಗೋ ಮರವಾದೆನು:
ಕಣ್ಣು ದ್ರಾಕ್ಷಿಗಳು- ಇಗೋ! - ಬಳ್ಳಿಯಾದೆ

ದಾಳಿಂಬೆ ತುಟಿ
ಕೆಂಪು ಸಿಹಿ ಮದ ಸುರಿಸಿ ಮತ್ತೆದ್ದ ಈ ಬೆಳ್ಳಾನೆ
ಹತ್ತು ಮಾವಟಿಗಾ ಹೊರಡು
ನಿನ್ನೂರು ಶ್ರಾವಸ್ಥಿ ಗ್ರೀವಸ್ಥಿ ಅಲ್ಲ
ರಕ್ತ ಮೋಡದ ಆಚೆ ಮಿಂಚಿನ ಪುರಿ

* * *

ಮೂರು:

ನಡುಹಗಲ ಹೊನ್ನೀಲಿ ಮೊಟ್ಟೆಯೊಡೆದು
ಚಿಮ್ಮಿದ
ಕಪ್ಪು ಪಾರಿವಾಳದ ಹಾಗೆ ನಿನ್ನ
ಕೈ ಕಪ್ಪರ.
ಹಸಿರುವೆರಸಿ ಕೂಗುವ ಕಾಗೆ
ಕೊರಲೊಡನೆ ಸರಬೆರಸಿ
'ಭಿಕ್ಷೆ' ಅಂದೆ.
ಅನ್ನವನ್ನೊಲ್ಲೆ, ಹೊನ್ನಿನೊಡವೆ ನನ್ನನ್ನೊಲ್ಲೆ,
ಪ್ರಾಣವನ್ನೇ ಕರಿಯ ಕಪ್ಪರದಲ್ಲಿ ಕೊಂಡು ಹೋದೆ

ಬರಿಯ ನಾನಿಲ್ಲುಳಿದೆ;
ಬರುವ ಪ್ರಿಯತಮರೆಲ್ಲ ನನ್ನೊಡಲ ಪಾತ್ರೆಯಲಿ

ಪಚ್ಚೆಗಳ ತುಂಬಿದರು ಹವಳಗಳ ಹೆಕ್ಕಿದರು
ಬರಿದು ಹಾಗೇ ಉಳಿದು
ಬರಿಯ ನಾನಿಲ್ಲುಳಿದೆ.

ನೀ ಹೋದ ದಿಕ್ಕನ್ನು ಬಿಕ್ಕಿ ಬೇಡುವೆ ನಾನು;
ನನ್ನ ಪ್ರಾಣವ ನನಗೆ ಹಿಂದಿರುಗಿಸು.
ಒಲ್ಲೆ ಇವನ ಕಣ್ಣುಗಳನ್ನು, ಅವನ ತುಟಿ
ತೋಳ ಬಳಸನ್ನು ಕಳಚಿ ಎಸೆಯುವೆ.

ನನ್ನ ಪ್ರಾಣವ ನನಗೆ ಹಿಂದಿರುಗಿಸು

ನಾಲ್ಕು:

ಅವನ ಕಲ್ಲೆದೆಯ ಕಬ್ಬಿಣದ ಕದತಟ್ಟಿ
ತಟ್ಟಿ ತಟ್ಟಿ

ಆಕೆ ಬುದ್ಧನ ಶಿಷ್ಯನಾದ ಉಪಗುಪ್ತ ಎಂಬ ಭಿಕ್ಷುವಿನಲ್ಲಿ ಅನುರಕ್ತಳಾಗುತ್ತಾಳೆ.
ಉಪದತ್ತ ಅವಳ ಪ್ರೇಮವನ್ನು ಸ್ವೀಕರಿಸುವುದಿಲ್ಲ ಆಗ....

ಹಿಂತಿರುಗಿದ ಪ್ರಾಣ ಹೇಳುತ್ತದೆ:
ಇಗೋ ನನ್ನೆರಡೂ ಕೈಗಳು
ಬಿದ್ದು ಹೋಗಿವೆ.

ಐದು:

ಹಳದಿಬಣ್ಣದ ಸಂಜೆ ನೇರಳೆಗೆ ತಿರುಗಲಿ.
ಗೃಹಿಣಿಯರೆ,
ಒಗರೊಗರು ಹುಡುಗಿಯರೆ,
ಇನ್ನು ಮನೆದೀಪಗಳ ಹಚ್ಚುವಿರಿ.
ಕೊಳ್ಳಿ, ಅವ್ವಾ, ನನ್ನ ಜೀವದ ಕೊಳ್ಳಿ
ಚೆಲ್ಲಲವ್ವಾ ಆ ಕಾವು ಆ ಬೆಳಕು
ನಿಮ್ಮ ಮನೆಗಳಲ್ಲಿ

ಆರು:

ಝಣಗುಡುವ ಅಂಗಯ್ಯ ಉಂಗುರದ ಬೆರಳಲ್ಲಿ
ನನ್ನ ಸೊಂಟದ ಬಿಲ್ಲು
ಯಾರ್ಯಾರ ಕಾಮಬಾಣಗಳನ್ನು
ಯಾವ ಲೋಕಗಳ ಚಂದ್ರರಿಗೆ ನಾಟಿಸುವುದು?

ಆ ಲೋಕಗಳ ಚಂದ್ರಕಳೆಯುಟ್ಟು
ಈ ಸೂರ್ಯನಡಿಯಲ್ಲಿ ಮತ್ತೆ
ನಾನೊಂದು ಬಿಸಿರಸದ ಕಬ್ಬುಬಿಲ್ಲು.

ಒಂದು ಸಲ ಉಪಗುಪ್ತ, ಒಂದೇ ಒಂದು ಸಲ
ಸ್ವಂತ ಬಾಣಗಳನ್ನೆಸೆಯುವೆ ನಿನ್ನ ಕಡೆ
ಹೂವಿನಂಗಡಿಗಳಿಗೆ ಬೆಂಕಿ ತಗುಲಿದ ಹಾಗೆ
ತಾರಾಡುತ್ತಿರುವ ನಿನ್ನ ಕಡೆಗೆ.

ಆ ಕಾವಿ ಅರಿವೆಯಲಿ ನೀನಿಲ್ಲ
ಎಂದು
ನನ್ನ ಕಣ್ಣುಗಳೊಳಗೆ ನನ್ನ ಮೂಳೆಗಳೊಳಗೆ
ನೀ ಇರುವೆ ಎಂದು
ಆ ಬಾಣ ತಗುಲುವುದು ಮತ್ತೆ ನನಗೇ

ಏಳು:

ನಿನ್ನ ಬೋಳು ತಲೆಯನ್ನೊದ್ದು
ನನ್ನ ಮನೆಬಾಗಿಲಿಗೆ ಭಿಕ್ಷಕ್ಕೆ ಬಂದಿರುವ
ಕಾಂಭೋಜ ಕುದುರೆಯ ಸವಾರ.
ನಿನ್ನ ಕಪ್ಪರದಲ್ಲಿ ಕಮರಿ ಕರುಕಿಟ್ಟ
ತನ್ನ ಜೀವವನ್ನೆತ್ತಿ ಹಸಿರುಡಿಸಿ
ತನ್ನ ಕೊಪ್ಪರಿಗೆ ನಾಣ್ಯದ ಮೇಲೆ
ಮಲಗಿಸಿದನು:
ನಿನ್ನ ನೆನಪಿನ ಕಣ್ಣುಪೊರೆಯನ್ನೆರೆದ;
ಉರಿಯ ಪುಳಕಗಳಲ್ಲಿ ಮುಳುಗಿ
ಎದ್ದು ತೇಲಿ ಬಂದ

ಆ ಹವಳ ದ್ವೀಪದ
ನೀಲಮಣಿ ನಡುವಿನಲ್ಲಿ ಬಿಡಿಸತೊಡಗಿದೆ
ಪಚ್ಚೆ ಕುಡಿ ಮುತ್ತು ಮೊಗ್ಗುಗಳ.....
ಯಾಕೆ ಬಂದೆಯೋ
ಅಲ್ಲಿಗೂ
ತುಳಿಯುತ್ತ ಹಡಗುಗಳ

ಎಂಟು:

ಹೊಸರಾತ್ರಿ ಹಿಡಿದು ಹೊಸ ಚಂದ್ರರುಗಳನ್ನು
ಹೊಸ ಕಂಕುಳುಗಳಲ್ಲಿ ಹೊಸಬರುವ ಹೊಸಪ್ರಿಯತಮರುಗಳೆ,
ನೆನ್ನೆ ಚಂದ್ರನ ತಂಪು ಮೊನ್ನೆ ಮೊನ್ನೆ;
ಮೊನ್ನೆ ಚಂದ್ರನ ಕಾವು ಇಂದು ನೆನ್ನೆ ನಾಳೆ.

ನಾಳೆ ಬೆಳಗಿನ ಗಾಳಿ:
ಮೊದಲ ಸೋಂಕಿನ ರೆಕ್ಕೆ ಬಡಿದು ತಾಕಿ,
ಉಷೆಗುವರಿ ಜ್ಯೋತಿ ಆರಿ
ಈ ನಿಮಿಷಕೂ ಕೂಡ
ನೋಡು ಮೋಡದ ಬದಿಗೆ
ಈರೇಳು-ನೂರು ಕೋಟಿ ರೆಕ್ಕೆ.

ಮಾಗಿ ಬಂದಿದೆ ಹೊಸತು
ಬಿಳಿಯ ಹುಬ್ಬಿನ ವೇದ ರೆಪ್ಪೆಗಳಿಗೆ;
ಹಳೆಯರಸ ತಲೆಯುರುಳಿ ಅಳಿದು
ಎಳೆಯ ತೋಳಿನ ನಗೆಯ ಅರಸುಗುವರ;
ಗುಲಾಮರೆಲ್ಲರ ದಂಗೆ ಸುದ್ದಿ;
ಮಗಧ ರಾಜ್ಯದ ತುದಿಗೆ ಬೆಂಕಿ ಸುದ್ದಿ;

ಈ ತರಗೆಲೆಯ ವನದ ಹಾದಿಗಳಲ್ಲಿ
ನೀ ಕೊಟ್ಟ ಕನಸಿನ ಕುಡಿ-
ಅದೂ ಬಾಡುವುದೇ ಉಪಗುಪ್ತ?
ಉದುರುವುದೇ ತರಗಾಗಿ?

ನಿಲ್ಲಲಾರದೆ ಎಲ್ಲಿ ಧಾವಿಸುವೆ ಮಳೆಯಾಗಿ
ಮೋಡ ಮಿಂಚಿನ ಜೋಡಿ

ಆ ಕುಡಿಯ ಸವಿಯುಂಡ ಹಕ್ಕಿ ಎದೆ ತುಂಬ
ಬಿಡದ ಗುಡುಗಿನ ಕಡಲು.

ಮಾರ್ಚ್, ೧೯೭೯-ಸೆಪ್ಟೆಂಬರ್, ೧೯೮೦

ಮರುಳ ಶಂಕರದೇವ

ಅಲ್ಲಮನಿಂದ ಬಸವನಿಗೆ ಮರುಳ ಶಂಕರನ ಪರಿಚಯ:

ಒಂದು

"ಮರುಹು ಮರೆಯ ನಿಧಾನವನಾರು ಬಲ್ಲರು?
ಅಗೆದು ತೋರುವೆ ಬಾರ, ಬಸವದಣ್ಣಾಯಕ:
ಬೆವರು ನುಂಗಿದ ಮೈಯಿ,
ಬಯಲ ಹೀರಿ ಹೀರಿ ಕುಳಿವೋದ ಕೆನ್ನೆಗಳು,
ತಲೆಗೂದಲಿನ ಕಾನನದ ಕೆಳಗೆ
ಖನಿಜಗಳ ಖನಿ ತೆಗೆತೆಗೆದು ತೋರುವ ಮೊದಲು
ಇಕೋ ಬಸವ
ಈ ಸುಟ್ಟ ಕಣ್ಣುಗಳ ಮಧ್ಯೆ
ಬೆಳ್ಳಿಬೆಳಕುಲಿವ ಪರುಷದ ಪಕ್ಷಿ
ಮಹಾಮನೆಯ ಪಂಜರಕೆ
ಸಿಗದಷ್ಟು ಕಿರಿದು.

ಅವಶೇಷಗಳ ಗಾಳಿ ಹುಯ್ಯಲಿನಲ್ಲಿ ಸತ್ಯವನೆರೆದೆ:
ಬೆಟ್ಟಗಳಿಗೆಣೆಯಾಗಿ ಕೊಬ್ಬಿದ ನದಿಯ
ಬಡಬಾಗ್ನಿ ಸೀಳಿದ ಸಮುದ್ರದ ಬಸಿರಿನ ನೀರು
ಮಗದೊಮ್ಮೆ
ದೋಣಿ ಹಡಗುಗಳ ತಳದ ಸೋಂಕಲ್ಲಿ
ಪುಳಕಗೊಂಬುದ ಕಂಡೆ.

ನಿನ್ನಂಗಳದ ಪ್ರಸಾದಕುಳದೆಂಜಲಲೆ ದಡದಲ್ಲಿ
ನಾ- ಹಡಗನಪ್ಪಳಿಸಿ ಗಳಿಸಿ ಬದುಕಿದ ವಣಿಜ
ಮರುಳ ಶಂಕರದೇವ. ಹಡಗಲ್ಲ,
ಕಜ್ಜಿನಾಯಿಯ ತುರಿತುರಿ ಮೈಯ್ಯ
ದಿಕ್ಕೆಟ್ಟ ಮೋಡಗಳ ಹರುಕನ್ನು ಹೊತ್ತ

ಮರೆವ ಹಿಂದಣ ಮರಣ
ಮರುಳ ಶಂಕರದೇವ."

ಎರಡು

"ಈ ಕಣ್ಣಗೊಂಬೆಯ ಸೂತ್ರದ
ಈ ಕಳ್ಳ ನಗುವಿನ ಸವಿಯ ಸಾರದ
ಈ ಮೈಗೆ ಬಿದ್ದ ಕೂರೆಗಳ ಪಡೆಯ
ಹಡೆದ ಕರುಳಿರದ ತಾಯಿ
ಮಹಾಮನೆಯ ಲಕ್ಷ್ಮಿ ಬಸವಾ.
ಮಲತಂಗಿ ಬಸವಾ ಆಕೆ
ಕಲಚೂರ್ಯ ವಿಜಯಲಕ್ಷ್ಮಿಗೆ.

ಬೂದಿಹುಬ್ಬುಗಳ ಮರುಳ ಶಂಕರಗೀಗ
ಕಂಗಳೇ ಪ್ರಾಣ;
ಕಾಯುವಿಕೆ ಕಾಯಿ ಮಾಗಿತ್ತು ಈ ಹೊತ್ತು;
ಹಣ್ಣು ರಸವೂರುತಿದೆ; ತೊಟ್ಟುಗಳಚುವ ಮೊದಲೆ
ಕಿತ್ತು ಒಪ್ಪಿಸು ನಿನ್ನ ಶರಣ ಸಂದೋಹಕ್ಕೆ. ಹಣ್ಣಲ್ಲ,
ಮಣ್ಣು ಹುಳುಗಳ ಹಬ್ಬ."

ಬೀಜ ಗರ್ಭಿಣಿ ಹೆರುವ ಕಾಮಲತೆಯರು ನೆರೆದ
ಮೃತ್ತಿಕೆಯ ಮಹಮನೆಯ ಹೊಸ್ತಿಲಿಗೆ
ಕರೆಯದೇ ಬಂದವರ,
ಮಿಂದುಣದೆ, ಹೇಳದೇ ಹೋದವರ
ಹೆಜ್ಜೆ ಸಾಲು....

ಬೆಚ್ಚಿದೆಯ ಹೇಳು"

ಜನವರಿ, ೧೯೮೦

ಮುಗಿಲ ಜಹಜು

ಒಂದು

ಒಂದು ದಿನ ಹೀಗೆ ಅಂಗಿಗಳಲ್ಲಿ ಅಂಗಗಳಿರುವುದಿಲ್ಲ. ಇದ್ದರೂ
ಅಂಗಗಳಲ್ಲಿ ಕಾವು, ಕಾದು ಉರಿಯುವ ನೀಲಿ, ಇಲ್ಲಿ ಸಂಪಿಗೆಯ
ಜೋಂಪು ತಗುಲಿದ ಕಂಪು, ಸಾಗರದ ಉಪ್ಪುಪ್ಪು, ಹಾಗೇ
ನಿನ್ನ ಕಣ್ಣಿನ ಒಪ್ಪು- ಒಂದೂ ಅಂದು ಇರುವುದಿಲ್ಲ.

ಹಸಿರಿರದ ಹೊಲದಲ್ಲಿ ಹಸಿವಿರದ ಜೀವಿಗಳು
ದೆಸೆಯಿರದ ರಸ್ತೆಯಲ್ಲಿ ಜನವಿರದ ಬಸ್ಸುಗಳು

ಬಾರಿಸುತ್ತಿದೆ ಗಂಟೆ; ಶಬ್ದ ಕಂಪನಗಳಲ್ಲಿ.
ನಿಂತ ಗಡಿಯಾರ; ತೋಳು, ಅಂಕಗಳೆಲ್ಲಿ?

ಎರಡು

ನಿಂತ ಗಡಿಯಾರಗಳ ತೋಳು ಸೋಕದ ಸಂಜೆ ಗಾಳಿಯದೆ ದರ್ಬಾರು. ಬೆಟ್ಟ ಸಾಲಿನ ಮೇಲೆ ನಾವು ನಿಂತಿದ್ದೇವೆ ಗಟ್ಟಿ ನೀಲಿಯ ಗಗನ ಕೈಗೆ ಸಿಕ್ಕುವ ಹಾಗೆ. ಕೆಂಗದಿರ ಬರುವನೆಂದು ಹೋಗುವ ಮುಂಚೆ ಈಸಿ ಬಂದವು ತಾರೆ ನಮ್ಮ ತಲೆಗೆ. ಕಣ್ಣುಕಪ್ಪನು ಹಚ್ಚುವೀ ಹಸಿರು ಕಣ್ಕಟ್ಟು ಮಖಮಲ್ಲು, ಜಗ್ಗೆಂದು ದೀಪಗಳ ಹೊತ್ತಿಸಿದ ಕಾಲ ಕೆಳಗಿನ ಊರು- ನಾವಿದನು ಬಿಟ್ಟಿಲ್ಲ. ಮತ್ತೆ ಸೇರುವ ತಾಣ.

ನೀ ತಂದಿರುವ ಬುತ್ತಿ ಈ ಬೆಳಕೆ ಗೆಣೆಕಾತಿ
ಗಾಳಿ ಬಂಗಲೆಯಲ್ಲಿ ತಾರೆ ಮಹಡಿ
ನಾ ತಂದ ಉಪ್ಪನ್ನು ಕತ್ತಲನು ಬೆರಸಿಕೊ
ಈ ಸಂಜೆಯ ಹಾಗೆ ಕ್ಷಣದ ಸಂಗಾತಿ

ಈ ಕ್ಷಣ ಹಕ್ಕಿಗಳು ಹಾರಿಹೋಗದೆ ಇರಲಿ. ನಕ್ಷತ್ರಗಳು ಹಾಗೇ ಕಣ್ಣು ಹಾರಿಸದೇ ಇರಲಿ. ಗಾಳಿಯೂ ಇಲ್ಲೇನೆ ಕೈಕಟ್ಟಿ ಕೂರಲಿ. ರಾತ್ರಿರಾಣಿಯರು ಬರುವ ಗಂಧದ ಹೆಜ್ಜೆ.... ಈ ಕ್ಷಣ ನನ್ನ ಗಾಯದ ಮೇಲೆ ನಿನ್ನ ಹೂ ಬೆರಳುಗಳು....

ಸಂಜೆ ಹೆಸರೊಂದೇ ನಿನಗಿಲ್ಲ; ಉರಿತಂಪ ಬೆರೆಸಿ ಮೂಡಿದ ಚಹ; ನೆಲದ ತುದಿ ಗಗನ ತಾಕುವ ಜಾಗ.

ಮೂರು

ಕಟ್ಟಡಗಳ ನಡುವೆ ಸಂಜೆ ಕಳೆದುಹೋಗಿದ್ದಾಳೆ. ತಾರೆ ಮಂಡಲವನ್ನು ಟಾರುರೋಡಿಗೆ ಎಳೆಸಿ, ಗಗನಗಳ ನೆನಪಳಿಸಿ, ಈ ಭೂಮಿಯೆಲ್ಲಾ ಅಲ್ಲ, ಬೀದಿ ಕೊನೆ ಮನೆ ನಿನ್ನದೇ, ತೆಗೆಯಲಾಗದ ಕಿಟಕಿ ಕದ ನಿನ್ನದೇ, ಕುಸಿದಿರುವ ಕುರ್ಚಿ ನಿನ್ನದೇ- ಭ್ರಮೆಗಳ ಕಡ್ಡಿಗೀರುವ ಸಂಜೆ ನಗರದಲ್ಲಿ. ಏನೂ ಬೆಳೆಯದ ಇಲ್ಲಿ ಮಳೆ ಬಂತು ಅಂದುಕೊ; ಗಾಜು ಕಿಟಕಿಯ ಹಿಂದೆ ಲೈಟು ಕಂಬದ ಶೋಕ. ಪಕ್ಕದಲ್ಲೀಗ ಕೂತಿದ್ದವರು ಮಾತಾಡದೆ ಹೋಗಿ ನಿನ್ನ ಸ್ಮೃತಿ ಹುಟ್ಟುತ್ತದೆ. ವ್ಯರ್ಥ ಮಳೆ ಹೊಯ್ಯುತ್ತಿದೆ. ಕಡಿಯುತ್ತಿದ್ದೆ ಎಲ್ಲವನ್ನೂ ಕೊಡಲಿ ಇದ್ದಿದ್ದರೆ. ತಂದೆ ತಾತರ ಜೊತೆಗೆ ಹೂತು ಹಾಕಿದ ಕೊಡಲಿ ಇದ್ದಿದ್ದರೆ; ಕೊಡಲಿ ಕೈಯವರಿಲ್ಲ. ಕೋಟಿ ಯೋಜನದಿಂದ ಪಾನವನು ತಂದವನೆ, ನನ್ನ ತುಟಿ ಕಡಲುಪ್ಪು ರುಚಿಗಾಗಿ ಮನವಾರಿದೆ.

ನಾಲ್ಕು

ನೀನು ಕಡಲಿಗೆ ಸವತಿ. ತಲೆ ಬಿಸುಟು ಹೋದ ಮರಳ ಹಾಸಿನ
ಮೇಲೆ ಕಂಡೆ ಈ ಮಧ್ಯಾಹ್ನ:
ನನ್ನಂತೆ ಮುರಿದಿರುವ ದೋಣಿ ಹಡಗುಗಳ ಚೂರುಪಾರು
ಕಣ್ಣಿರದೆ ಮೂಗಿರದೆ ನರಳುವ ಎಲುಬುಗಳು ಸಾವಿರಾರು
ಜೊತೆಗೆ:

ಹಿಡಿದು ತಂದರು ಹಚ್ಚ ಸಹಸುಗೂಸುಗಳನ್ನು
ಮೀನುಗಳ ಜೊತೆಯಲ್ಲಿ ಬಲೆಗಳಲ್ಲಿ
ನಗರಗಳಿಗೊಯ್ಯಲು ಮಾರಾಟಕೆಂದು
ಒಣಗಿಸಿ ತುಂಬಿಕ್ಕಿದರು ಎಲುಬಿನಲ್ಲಿ

ಈ ಕ್ರೂರ ರೋದನದ ಹಗಲು ನೆಲದೆಡೆ ಧಸಕ್ಕೆಂದು ಕೃಷ್ಣ ಲೀಲೆಯ ಕಡಲು ಕಚ್ಚಿರುವ ಗಗನದ ಹೊಗೆಂಚ್ಚಲು. ನಿಲ್ಲಿಸಲೇ ಬೇಕಾಗಿದೆ ಕೂಸುಗಳ ಮಾರಾಟ, ಮರಳ ಭಿತ್ತಿಯ ಮೇಲೆ ಹೊಳೆದ ನಾಶದ ಚಿತ್ರ.

ಸತ್ತು ಹೋದರು ನಮ್ಮ ಮುಂದಿನ ಕಡಲು
ಎಲ್ಲ ನದಿಗಳನು ಸೆಳೆಯುವುವು ನಿನ್ನ ಕಣ್ಣು
ಬೂದಿಯಾದರು ಇಂಥ ದಿನಗಳ ಬಿಸಿಲು
ದಿನವಾಗಿ ಹುಟ್ಟುವವು ಈ ತುಟಿಗಳು.

ಕಡಲು ನಿನಗೇ ಸವತಿ. ನೆಲದ ಪಾಕಕೆ ಬೆರೆತ ಉಪ್ಪು ನೀನು.

ಐದು

ಕೆಂಡ ಮರಳಿನ ಮೇಲೆ ಹಪ್ಪಳವಾದ ಹೆಜ್ಜೆಗಳನ್ನು ಇಕ್ಕುವೆನು ಮಂಜಿನಿಬ್ಬನಿ ತಳೆದ ಹುಲ್ಲಮೇಲೆ. ತಂಪಾಗಿದೆ ಭೂಮಿ; ಮೆಲ್ಲಗಾಗಿದೆ ಗಾಳಿ. ಮಾತು ಕೇಳಲು ನೆಲಕೆ ಕಿವಿ ಕೊನರಿವೆ.

ರಾತ್ರಿಯೆಲ್ಲಾ ನೀನು ಇಟ್ಟ ಬಿಸಿಲಿನ ಬೆಂಕಿ, ಕೇಳಿಸಿದ ಕಡಲಿನ ಮೊರೆತ, ಅರಳಿಸಿದ ಕಾಡುಗಳು ಹಾಡಾಗಿ ಸುಳಿಯುತ್ತಿವೆ. ಈ ಕ್ಷಣದ ಸಂಗಾತಿ ನೀನೀಗ ಹೊರಟುಹೋದರೆ ಸಿಮೆಂಟು ದಿನಗಳ ಕಡೆಗೆ, ಹೋಗುವುದಿಲ್ಲ ನೀನು ನನ್ನ ಪಕ್ಕೆಲುಬುಗಳಿಂದ.

ಗಾಯಗಳ ತಾಯಿಮನೆ ನಾನು, ನನ್ನ ಭೂಮಿ;
ನಿನ್ನ ಬೆರಳೇ ಅವಕೆ ದಿವ್ಯೌಷಧಿ.
ಗುಬ್ಬಚ್ಚಿ ಕಚಕಚನೆಂದು ಹಾರಲಿಕೆ ತಯ್ಯಾರಿ
ಆ ರೆಕ್ಕೆಗಳಲ್ಲಿ ನಿನ್ನ ತುಡಿತ;

ಹೋಗದಿರು ಸಂಗಾತಿ ಕಳೆದ ಸಂಜೆಗಳಂತೆ.
ಕರಗದಿರು ಕಡಲಲ್ಲಿ ಕಂಡ ನೋಟಗಳಂತೆ.
ತಾರೆಯರು ಉಳಿದಿರುವ ಸೂರ್ಯನೂ ಬರಲಿರುವ
ಆಕಾಶದಲಿ ಹೊರಡಲಿದೆ ಮುಗಿಲ ಜಹಜು.

ತುಂಬಿಕೋ ಅದರಲ್ಲಿ ಇಬ್ಬನಿಯ ವಜ್ರಗಳ
ಸಂಪಿಗೆಯ ಮಲ್ಲಿಗೆಯ ಸುಗಂಧ ದ್ರವ್ಯಗಳ
ಹೋಗೋಣ ಉಕ್ಕಿನ ಹೊಸನಾಡಿಗೆ
ಚಿಗುರನ್ನು ಮುಡಿಸೋಣ ಯಂತ್ರಗಳಿಗೆ.

ಜನವರಿ, ೧೯೮೧

ಜೋಡಿಗವನ

೧. ನವಿಲು ಇಳಿಯಿತು

ಮಧ್ಯಾಹ್ನದ ಮಧ್ಯದಲ್ಲಿ
ಉದ್ಯಾನದ ನಗರಿಯಲ್ಲಿ
ಚಿಕ್ಕಪೇಟೆ ಚೌಕಕೊಂದು ನವಿಲು ಇಳಿಯಿತು.

ಅದರ ಬಣ್ಣ ಕಣ್ಣು ಹೊಡೆದು
ಅದರ ರೆಕ್ಕೆ ಬೀಸಿ ಕರೆದು
ಬಟ್ಟೆ ಗಿರವಿ ಅಂಗಡಿಗಳ ಮುಚ್ಚಿನಿಂತರು.

ಗಡಿಯಾರದ ಗೋಪುರದಲಿ
ಗಂಟೆಮುಳ್ಳು ದಿಕ್ಪಾಪಾಲು;
ಮಂಕು ಬಡಿದು ಜನರು ನವಿಲುಗಣ್ಣರಾದರು.

ಮಾರವಾಡಿಗಳೂ ಕವಿತೆ
ಹಾಡುವುದನು ಕೇಳಿ ಬೆವೆತೆ;
ನವಿಲುಗರಿಯು ಮಹಡಿಗಳನ್ನು ಕವಿದುಕೊಂಡಿತು.

ಕೆಳಗೆ ಕಾರು ಥಟ್ಟನಿಂತು
ಪ್ಲೇನು ಹಗಲ ಚಿಕ್ಕಿಯಾಯ್ತು;
ಅತಿಥಿ ನವಿಲ ಬೆರಗಿನಿಂದ ನಾನು ಕೇಳಿದೆ:

'ಇಷ್ಟು ಹೊತ್ತಿನಲ್ಲಿ? ಇಲ್ಲಿ?
ಗರಿಯ ನೋಟ ಸಿರಿವಂತನೆ
ನಿನ್ನ ಊರಿಗೆಷ್ಟು ಚಾರ್ಜು? ಹೇಗೆ?' ಅನ್ನುತ.

'ಪ್ರೀತಿ' ಅಂತ ಮುಗಿಲುನಕ್ಕ
ಮಿಂಚುನಡುವಿನವಳಿಗೊಲಿದು
ಗರಿಯು ಬಲಿದು ನವಿಲು ಲೋಕ ನೆಲಕೆ ತಂದೆನು.

೨. ಬೆಳಗು ಹೆದರಿತು

ನಗರದ ಹೊರವಲಯದಲ್ಲಿ
ಬೆಳಗಿನ ಎಳೆಜಾವದಲ್ಲಿ
ಹಗಲ ಮಹಲ ಕಡೆಗೆ ಹೆಜ್ಜೆ ಹಾಕುತಿದ್ದನು.

ಗಗನವನ್ನೇ ಸೀಳುವಂತೆ
ಮಹಡಿ ನೆಲದಲಡಗುವಂತೆ
ಚಳಿಯು ದಿಕ್ಕು ದಿಕ್ಕಿನಲ್ಲಿ ಮೊರೆಯುತಿದ್ದಿತು.

ಮುಸುಕುಗತ್ತಲಲ್ಲಿ ಕೊರಗು
ಕೇಳಿ ಹೆದರಿತೇನೊ ಬೆಳಗು;
ತರುಣನೊಬ್ಬ ಮುದುಕನಂತೆ ಕೊರಗುತ್ತಿದ್ದನು.

ಕೈಗಳನ್ನು ಗಗನಕೆತ್ತಿ
ಮೈಯಿ, ಮುಖ ಮಂಜುಗಟ್ಟಿ
ರವರವಷ್ಟೆ ನೆಲದಾಳಕೆ ಸೋರುತಿದ್ದನು.

ಗಾಳಿ ಕ್ಯಾರೇ ಅನ್ನಲಿಲ್ಲ
ನಾಯಿ ಕೂಡ ಬೊಗಳಲಿಲ್ಲ.
ನಾಲಗೆಯೇ ಸೇದಿದರೂ ಹೀಗೆ ಕೇಳಿದೆ:

'ಹೀಗೇಕೆ ಆಯ್ತು ತರುಣ?
ಮುಂಜಾವಿನ ಮಬ್ಬುಮರಣ?
ನಗರ ಬೆಳಕ ಹೆರುವ ಮುಂಚೆ ಮುಗಿದುಬಿಟ್ಟೆಯ!'

ಚಳಿಗೂ ಮಂಜು ಕರಗುತ್ತಿತ್ತು.
ಬೊಂಬು ಕೈಯಿ. ಕೊನೆಯ ಉಸಿರು;
'ಗಾಜು ಮೊಲೆಗಳವಳಿಗೊಲಿದು ವರಗಿಹೋದೆನು.'

ಜನವರಿ, ೧೯೮೨

ಸಮಗಾರ ಭೀಮವ್ವ

* ನವಲಗುಂದದ ನಾಗಲಿಂಗಪ್ಪ ಶಿಶುನಾಳ ಶರೀಫ ಮತ್ತು ಗರಗದ ಮಡಿವಾಳ ಯೋಗಿಯ ಸಮಕಾಲೀನ. ಚಿಕ್ಕಂದಿನಲ್ಲೇ ಮನೆಯನ್ನು ತೊರೆದು ಅಲೆಮಾರಿಯಾಗಿ, ಕೊನೆಗೆ ನವಲಗುಂದದಲ್ಲಿ ನೆಲೆಸಲು ಅಲ್ಲಿಗೆ ಬರುತ್ತಾನೆ. ಅಲ್ಲಿಯ ಮೌನೇಶ್ವರ ಮಠದಲ್ಲಿ ಆಶ್ರಯ ಪಡೆದಿದ್ದಾಗ ಭಯಂಕರ ಬೇನೆಯೊಂದು ತಗಲುತ್ತದೆ. ಆಗ ಆ ಮಠವನ್ನೂ ಅಲ್ಲಿದ್ದ ಆಲಯವನ್ನೂ ದಿನಾಲೂ ಒಪ್ಪಗೊಳಿಸುತ್ತಿದ್ದ ಸಮಗಾರ ಭೀಮವ್ವನೆಂಬ ಅಸ್ಪೃಶ್ಯ ಹೆಣ್ಣು ಅವಿವಾಹಿತೆಯಾದರೂ ತನ್ನ ಮೊಲೆಹಾಲನ್ನು ನೀಡಿ ನಾಗಲಿಂಗನನ್ನು ಉಳಿಸಿದಳು ಎಂಬ ದಂತಕಥೆಯಿದೆ. ಮುಂದೆ ತನ್ನ ಬದುಕಿನುದ್ದಕ್ಕೂ ನಾಗಲಿಂಗ ಆಕೆಯನ್ನು ತನ್ನ ತಾಯಿ, ಗುರು ಜಗದೀಶ್ವರಿಯ ಅವತಾರ ಎಂದು ಕರೆಯುತ್ತಿದ್ದನಂತೆ.

ಒಂದು

ಸಮಗಾರ ಭೀಮವ್ವ ಎದೆ ಹಾಲ ನೀಡವ್ವ
ನೆಲದೆದೆಯ ಹಾಲು ಹೀರಿ ನೆತ್ತಿಗೇರಿದ ಬಿಸಿಲು
ಕರಗಲಾಗದೆ ಬೀಳ್ಬಿಡುವ ನವಲಗುಂದದ ಗುಡ್ಡ
ಅತ್ತ ಇತ್ತ ಸುಡುವೆಲರ ಸುಯ್ಲು ಊರು.....

ಎರಡು

ನಡುಹಗಲಿನಲ್ಲೇ ಗವ್ವಿರುಳು ಕಣ್ಣಿಗಿಳಿಯಿತು ತಾಯಿ
ನಿಂತನೆಲ ಒಮ್ಮೆಗೇ ಚಿಮ್ಮಿ
ಪುಟಿಯಿತು ಮೇಲೆ ಕೆಳಗೆ
ಎಡಗಡೆಗೆ ಬಲಗಡೆಗೆ
ಕಿಕ್ಕಿರಿದು, ತಾರೆ ಸಂಕುಳ ದಿಕ್ಕೆಟ್ಟ ಹಾಗಾಗಿ
ಸ್ವಪ್ನ ಬಂದೆರಗಿತ್ತು; ಗಿರಿಗಟ್ಟಲೆ ಜಗದ ಮಧ್ಯ
ಕಾಯುವ ಗುಡ್ಡದ ಮೇಲೆ ಬೇಯುವ ಜ್ವರದ
ಮೈಯಾರಿ ಬಾಯೇಹಾರಿ
ಹೋಗುವ ಮುನ್ನ
ಸಮಗಾರ ಭೀಮವ್ವ ಎದೆ ಹಾಲ ನೀಡವ್ವ

ಮೂರು

ಅಜಾತನಾದವನಿಗೆ ಜಾತಿ ಯಾವುದೆ ತಾಯಿ?
ಹೊಟ್ಟೆಯಲ್ಲಿಟ್ಟುಕೊಂಡದ್ದಕ್ಕೆ ತಾಯಿ ನೋವಿಗೆ ತೊತ್ತು:
ತಂದೆ ಹಾಕುವ ತುತ್ತು: ಸುತ್ತು ಮುತ್ತು ಊರು ಕೇರಿ
ದಿಕ್ಕು ದೇಶ ಹರಿದು
ಜ್ಯೋತಿಯನ್ನರಸುತ್ತ
ಬಿಸಿಲು ಮಳೆ ಗಾಳಿ ಮಾಗಿ ಮಂಜಿನಿಬ್ಬನಿ ತೊಟ್ಟ
ನಾಗಲಿಂಗನ ಮೈಯಿ ಇಂದು ಕೆಂಡ
ಒಡಲು ಹಸಿವಿನ ಕುಂಡ, ಹಾಲು ಸುರಿಯೇ ತಾಯಿ
ಸಮಗಾರ ಭೀಮವ್ವ ಎದೆಹಾಲ ನೀಡವ್ವ

ನಾಲ್ಕು

ಏನಾಯ್ತು ನಿಟಲ ಭ್ರೂಮಧ್ಯದ ಸ್ಫಟಿಕ ವರ್ಣದ ದೀಪ್ತಿ
ಮೇರುದಂಡದಿ ಹರಿದ ತಿಳಿಬೆಳಕಿನ ಹಾದಿ
ದಾಟಿ ಕದಳಿ ಶಿಖರ ಮೀರಿ ಹಾರಿ
ಅಂಬರದಲ್ಲಿ ತೇಲಾಡಿ ನನ್ನ ಆತ್ಮದ ಪಕ್ಷಿ
ಯಾಕೆ ನಾಟಿತೋ ಯಾವ ಬಾಣವೋ ಏನೋ......
ನಿನ್ನ ಕಾಲಡಿ ಬಿದ್ದ ಹಸಿವು ಜ್ವರಗಳ ಮುದ್ದೆ
ಸೀದ ಕಿರುಮರಿ ಹಕ್ಕಿ
ಎದೆಗುಟುಕ ನೀಡವ್ವ ಸಮಗಾರ ಭೀಮವ್ವ
ಸಮಗಾರ ಭೀಮವ್ವ ಎದೆಹಾಲ ನೀಡವ್ವ

ಐದು

ಈ ರೀತಿ ಲಕ್ಷಯೋಜನದಾಚೆ ಕೋಟಿಯೋಜನೆಯಾಚೆ
ನೀ ಯಾಕೆ ಕುಳಿತಿರುವಿ?
ಬಂಜೆಗಂಬನಿ ಮಣಿಯ ಯಾಕೆ ಪೋಣಿಸುತಿರುವಿ?
ಮೌನದೆಳೆ ಎಳೆ ಎಳೆಯ ರಾಟೆಯ ಸುತ್ತಿ ಬಿಚ್ಚಿ
ಮತ್ತೆ ಸುತ್ತುತ್ತಿರುವಿ?

ನೆಲದ ಕಸವನು ಗುಡಿಸಿ ಕಸವ ಗೊಬ್ಬರ ಮಾಡಿ
ಬೀಜಬಿತ್ತುವ ಕೈಯೆ,
ದೇಸಾಯಿ ಪಾಟೀಲ ಕುಲಕರಣಿಗಳ ಕಾವು
ಕಡಿಯಲಾಗದ ಮರವೆ, ಕಡಿದರೂ ಹೊಲೆ
ಹೊಲೆಯೆಂಬ ಒಲೆಯಲ್ಲಿ ಸುಟ್ಟರೂ

ರೊಟ್ಟಿಯಾಗುವೆ ಬಾಯ್ಗೆ.
ಮೊಲೆಬರದ ಕೊಡಗೂಸೆ
ಮದುವೆಯಾಗದ ತಾಯೆ
ಮೊಲೆಹಾಲು ಬೇಡವ್ವ ಎದೆಹಾಲ ನೀಡವ್ವ
ಸಮಗಾರ ಭೀಮವ್ವ

ಆರು

ತಂದಿರುವೆ ನಿನಗೆಂದು
ಗದಗುಡುವ ಗದಗ ಬೀದಿಗಳ ಪ್ಲೇಗನ್ನು;
ವಿಕ್ಟೋರಿಯಾ ರಾಣಿ ನಾಣ್ಯದ ಬೆಳಕು
ಕಮರಿಸಿದ ಸೂರ್ಯರನು;
ಹಸಿರು ಜಗ್ಗನೆ ಉರಿವ ಹೊಲದ ಆಳಗಳಲ್ಲಿ
ಬಸಿರು ಮಕ್ಕಳ ಹೂತು ಕೊಯ್ಲಾದ
ತೆನೆ ತೆನೆ ಜೋಳಗಂಬನಿಯನ್ನು;
ಬ್ರಾಹ್ಮಣರ ಕೇರಿಯಲಿ ಕಾಲರದ ಹೊಲೆಯ
ಕೂಸು ಮಕ್ಕಳನೊಯ್ದು ಸಿದಿಗಿ ಬೊಂಬುಗಳನ್ನು;
ಕಿತ್ತೂರ ವಂಶವನು ಕಿತ್ತೆಸೆದ ಕಡುಗೋಪಿ
ಹುಚ್ಚ ಮಡಿವಾಳನ ಕಣ್ಣುಗಳನು;
ತೊಲೆಬಿದ್ದ ಯಮನ ಮನೆಯಲ್ಲಿ
ಉಳುಹಿಕೊಳ್ಳದೆ ಮಡದಿಯ
ಕಳುಹಿಕೊಟ್ಟಿರುವ ಶಿಶುವಿನ ಹಾಳು
ಶರೀಫನ ಕರುಳ ಹುಣ್ಣುಗಳನು.

ಏಳು

ಯಾವ ಗುಡಿಸಲಿನಲ್ಲಿ ಯಾವ ಆಕಳು ಬರಡು
ಯಾರ ಕಾಲಿಗೆ ಕುತ್ತು
ಕ್ಷಾಮಲಕ್ಷ್ಮಿಯ ಸಿಟ್ಟು ಯಾರ ಹೊಲದಲಿ ಬಿತ್ತು
ಊರಸೀರೆಗೆ ಹಿಗ್ಗಿ ಹೀರೆಯಾಗುವ ಅಗಸ
ಯಾರ ಚಿನ್ನಕೋ ಕೊಬ್ಬಿದ ಪತ್ತಾರಣ್ಣ;
ಕೂಸುಗಳ ಕದಪು ಎಷ್ಟೊಂದು ಕೆಂಪು
ಯಾವ ಹೂವಿನ ಕಂಪು......
ಕೂಳುಂಡು ಬದುಕಲಾರದೆ ಹೇಲುಂಡು ಬದುಕೇನೆಂಬ
ಈ ಚಿಂತೆಗಳ ಹುಲುಗೂರ ಸಂತೆ
ಹರಿಯುವ ಮೊದಲು
ಸಮಗಾರ ಭೀಮವ್ವ ಎದೆಹಾಲ ನೀಡವ್ವ

ಎಂಟು

ಎಳೆಗೂಸು ನೀನು ಮುದಿಗಣ್ಣೀರನೊರೆಸವ್ವ
ಕೊಡುಗೂಸು ಗೆಳತಿ ಕೈಹಿಡಿದು ನಡೆಸವ್ವ
ತಾರವ್ವ ಮಳೆಯ ಎಳೆಎಳೆಯ ಎದೆಹಾಲ
ಸಿಂಪಡಿಸು ಗುಡ್ಡಕ್ಕೆ ನವಲಗುಂದಕ್ಕೆ
ಗದಗಕ್ಕೆ ಗಿರಣಿಗಳು ಕಿರುಗುಡುವ ಹುಬ್ಬಳ್ಳಿ ನಗರಕ್ಕೆ
ತಾರೆಮಂಡಲ ಬುಗುರಿ ಕೆದರಿರುವ ವ್ಯೋಮಕ್ಕೆ
ತಾರವ್ವ ಚಂದ್ರವ್ವ ಮುಗಿಲವ್ವ ಭುಗಿ ಭುಗಿಲವ್ವ
ಎದೆಯಲ್ಲಿ ಕರುಳಲ್ಲಿ ನೆಲದಲ್ಲಿ....

ಏಸು ಕಾವಿತ್ತವ್ವ ಮಳೆಬಿದ್ದ ನೆಲದಲ್ಲಿ?
ಕಾವು ತಡೆಯದೆ ಹಾವೇಸು ಹುತ್ತವ ಬಿಟ್ಟು
ನೆಲದುದ್ದ ನೆಲದಗಲ ಹೊರಳಿದುವವ್ವಾ.....

ಸಮಗಾರ ಭೀಮವ್ವ ಎದೆ ಹಾಲ.....

ಸೆಪ್ಟೆಂಬರ್, ೧೯೮೨

ನಕ್ಷತ್ರ ಯಾತ್ರಿಕರು

ಹುಡುಗನಾಗಿದ್ದಾಗಿಂದ ಹೀಗೆ

ಕತ್ತಲಿನಲ್ಲಿ ಕುಪ್ಪಳಿಸುತ್ತಿರುವ ರೈಲಲ್ಲಿ
ನಿದ್ದೆಬಾರದೆ ನಾನು ಎದ್ದು ಕೂತಿದ್ದಾಗ
ಎಡೆಬಿಡದ ಗಾಲಿಗಳ ಸದ್ದು ಕೇಳುತ್ತ
ಪಯಣಿಗರೆಲ್ಲಾ ನಿದ್ದೆ ಹೋಗಿದ್ದಾಗ
ಅಥವಾ ಕನಸು ಕಾಣುತ್ತಿದ್ದಾಗ

ಕತ್ತಲು ದೀಪ ನಕ್ಷತ್ರ ಚಳಿಗೆ
ತೆರಕೊಂಡ ಕಿಟಕಿ ಪಕ್ಕ
ಕೂತು ಯೋಚಿಸುತ್ತೇನೆ

ಈಗ ತಾನೇ ಹಿಂದಕ್ಕೋಡುತ್ತ ಹೋದ
ಆ ಸೇತುವೆ.....
ಯಾವ ನದಿಯಿತ್ತು
ಅದರ ಕೆಳಗೆ ಕತ್ತಲಲ್ಲಿ
ಯಾವ ಊರಿತ್ತು
ಅದರ ಪಕ್ಕದಲ್ಲಿ
ಇಲ್ಲಾ ದೂರದಲ್ಲಿ
ಕತ್ತಲಲ್ಲಿ

ಅರ್ಧ ನಿದ್ದೆ ಅರ್ಧ ಎಚ್ಚರದಲ್ಲಿ
ತೇಲುತ್ತ ಬಂತು
ದೀಪಗಳ ಗುಂಪು
ಕಿಟಕಿ ಕಡೆಗೆ.
ಇನ್ನೂ ಯಾಕೆ ಉರಿದಿದೆ
ಆ ಮಹಡಿಮನೆಯಲ್ಲಿ ಲೈಟು?
ಯಾವ ಕೂಸೋ ಎದ್ದು ಅಳುತ್ತಿರಬೇಕು

ಯಾವುದೋ ಜೀವ ಕಾಯಿಲೆ ಬಿದ್ದಿರಬೇಕು
ಕುಲುಕುತ್ತ ಗಡಬಡಿಸಿ
ಕತ್ತಲಿನ ನಡುವೆ ದೀಪಗಳ ದ್ವೀಪ ಹೊಕ್ಕಾಗ ರೈಲು
ನಿಧಾನವಾಗಿ
ಕಂಬಿ ಪಕ್ಕ ಕುಂಟುತ್ತ ಹೋದ ಜೋಪಡಿಯಲ್ಲಿ
ಯಾಕೆ ಇನ್ನೂ ಸಣ್ಣ ಲಾಟೀನು ಬೆಳಕು
ವಿದ್ಯುತ್‌ದ್ದೀಪ್ತ ಪಟ್ಟಣದ ಮಧ್ಯೆ;
ಎಣ್ಣೆಯಾದರೂ ಅದರಲ್ಲಿ ಸಾಕಷ್ಟು ಇದೆಯೊ
ಮುಗಿಯುತ್ತಿದೆಯೊ ಇನ್ನಷ್ಟು ಬೇಕಿದೆಯೊ
ಪರೀಕ್ಷೆಗೋಸ್ಕರ ಎದ್ದು ಓದುವವರಿಗೆ
ಇರುಳಿಡೀ ನರಳುವ ರೋಗಿಗಳಿಗೆ

ಈ ಚಿತ್ರಗಳು ಚಿಂತೆಗಳು
ಮತ್ತೆ ಕತ್ತಲು
ಕಿಟಕಿ ತುಂಬಾ ಚಂದ್ರ
ಮರಳಿದ ಮತ್ತೆ
ಚಿಕ್ಕೆ ಬಳಗದ ಜೊತೆಗೆ

ಈ ಬೋಗಿಯಲ್ಲಿ ಮಲಗಿ
ಗೊರಕೆ ಹೊಡೆಯುತ್ತಿದ್ದಾರೆ
ಹಲುಬುತ್ತಿದ್ದಾರೆ ಬಡಬಡಿಸುತ್ತಿದ್ದಾರೆ ಕನಸಲ್ಲಿ
ರಾತ್ರಿಯಾತ್ರಿಕರು

ಪ್ರಯಾಣಿಕನಂತೆ ಒಳನುಗ್ಗಿ
ಹೀಗೆ ಮಲಗಿದ್ದ ಯಾವನದೋ ಜೇಬು ಕತ್ತರಿಸಿ
ಅಲ್ಲಿದ್ದ ಪೇದೆ ಕೈಯಲ್ಲಿ ಸಿಕ್ಕಿಬಿದ್ದವನೊಬ್ಬ
ಮೊರೆಯಿಕ್ಕುತ್ತಿದ್ದಾನೆ
ಕೊಯ್ಯೋ ಮರ್ರ್‍ರೋ ಅಂತ;
ಉಚ್ಚೆಹೊಯ್ದು ಹಿಂದಕ್ಕೆ ಬರುವಾಗ
ಬರ್ತಿನ ಮೇಲೆ ಮಲಗಿದ್ದ
ಮುದ್ದು ಮೊಗದವಳ ಕಂಡೊಬ್ಬ
ಮರೆತ ಸಿನಿಮಾ ಹಾಡು ಗುನುಗುತ್ತಾನೆ;
ಇನ್ನೊಬ್ಬ ಟಿಕೆಟ್ಟಿರದ ಪ್ರಯಾಣಿಕ
ಟೀಸಿ ಬಂದಾನೆಂದು

ಕಕ್ಕಸ್ಸು ಸೇರಿದ್ದಾನೆ;
ಈ ಸದ್ದು ಗೊರಕೆಗಳ ಮಧ್ಯ
ಅರೆನಿದ್ದೆಯಲ್ಲೊಬ್ಬ ಮಾರಮಾಡಿ:
'ಮಿಲ್‌ಗಯಾ ಥೈಲಿ..... ಮಾದರ್‌ಛೋದ್'

ಕಿಟಕಿ ಪಕ್ಕ ಕೂತು
ಯಾಕೋ ಕೊರಗುತ್ತೇನೆ ಒಳಗಿದ್ದ ಇವರಿಗೆ
ಯಾಕೋ ಮರುಗುತ್ತೇನೆ ಹೊರಗಿದ್ದ ಅವರಿಗೆ
ನಕ್ಷತ್ರ ಚಂದ್ರ
ಕತ್ತಲೆ ಬೆಳಕು
ನಿದ್ದೆ ಎಚ್ಚರಗಳೇ ಸಾಕ್ಷಿಯಾಗಿ

ಇನ್ನೊಂದು ನಿಲ್ದಾಣ ಓಡೋಡಿ ಬಂದಾಗ
ನಿಧಾನವಾದರೂ ನಿಲ್ಲಲಿಲ್ಲ ರೈಲು
ಇನ್ನ್ಯಾವುದೋ ರೈಲು ಬರುವ ಖಾತ್ರಿಯ ಮೇಲೆ
ಪ್ಲಾಟ್‌ಫಾರಮ್ಮಿನಲ್ಲಿ ಪೆಟ್ಟಿಗೆ ಹಾಸಿಗೆ ಕಟ್ಟಿಕೊಂಡು
ನಿಂತು ಕುಂತು ಒರಗಿದ್ದ ಗುಂಪನಾವರಿಸಿದ್ದ
ಆ ಭವ್ಯ ನಿರೀಕ್ಷೆ
ಆ ದಿವ್ಯ ನಿರಾಶೆ......

ಯಾಕೋ ಹೇಗೋ ಏನೋ
ಕತ್ತಲಲ್ಲೆದ್ದು ಕೂತವರು ನಾವು
ನಿದ್ದೆ ಕನಸುಗಳಿಂದ ವಂಚಿತರು ನಾವು
ದಿಕ್ಕುಗೆಟ್ಟವರು
ಈ ಬೋಗಿಯೊಳಗೆ
ಹಾಗೆಯೇ ಹೊರಗೆ
ಹಾಡತೊಡಗುತ್ತವೆ ಕಿಟಕಿ ಪಕ್ಕ ಬಂದು
ಹನ್ನೆರಡು ರಾತ್ರಿ ನಕ್ಷತ್ರ:

'ನಿಂತಂತೆ ಕಂಡರೂ ನಿರಂತರ ಯಾತ್ರಿಕರು
ಕತ್ತಲಿನ ಸೀಮೆಯಲಿ ಬೆಳಕುವಾಡಿಗಳಂತೆ
ಗುಂಪಿನಲ್ಲಿದ್ದರೂ ಒಂಟಿಯಾಗಿ
ಮೈಯೆಲ್ಲ ಬೆಂಕಿ ಬೆಳಕಾಗಿ ಹೋಗಿ
ದಿಕ್ಕುಗಳ ಹಿಡಿದರೂ

ದಿಕ್ಕುಗೆಟ್ಟವರು
ದಿಕ್ಕು ತೋರುವ ನಾವು........'

ಯಾತ್ರೆಗಳು....... ಕಂಬಿಗಳು.....
ಯಾತ್ರಿಕರು..... ಕತ್ತಲು......
ನಕ್ಷತ್ರಗಳು..........

ಒಂಟಿ ಹಡಗು ಯಾತ್ರಿ ಕನಸು

ನಮ್ಮೀ ಲೋಕದ ಉಪ್ಪು ಕಡಲ ಮೇಲೆ
ಒಂಟಿ ಹಡಗು ಯಾತ್ರಿ ಕನಸು ಕಂಡ
ಕೈಲಾಸ ಪರ್ವತದ ಬುಡದ ದಂಡೆಯಲ್ಲಿ
ನಿದ್ದೆ ತಿಳಿದೆದ್ದವನೆ ಬೆರಗುಗೊಂಡ

ಹಾಲ್ಗಡಲ ಪಕ್ಕ ಮರಳ ದಂಡೆ ತುಂಬ
ಮರಳಿಗೆ ಬದಲಿಗೆ ಜೋಡಿ ರತ್ನ
ಉದ್ದಮುಳಕ ಆಳ ಕಡಲಲ್ಲಾಡಿವೆ
ತಬ್ಬಿ ತೆಕ್ಕೈಸಿ ಮೀನಮಿಥುನ

ಜ್ಯೋತಿಯೊಂದರ ಜೀವ ಬತ್ತಿ ಎರಡರಲ್ಲಿ
ದೀಪವೊಂದರಲ್ಲಿ ಬೆಳಗುವಂತೆ
ಮಾತಿನಾಚೆ ಅರ್ಥ ಮಾತಿನ ಜೊತೆ ನೆರೆದು
ಸರಸ ಸಲ್ಲಾಪ ನಡೆಸುವಂತೆ

ಬಿಚ್ಚಿದರೂ ಕಟ್ಟಿರುವೀ ದೇಹನೇಹ
ಇಹಲೋಕ ಕಡಲಲ್ಲಿ ಕಾಣಲಿಲ್ಲ
ಕಿತ್ತು ಬೇರ್ಪಡಿಸಿದರು ಆ ರತ್ನ ಜೋಡಿ
ಅರೆಚಣವೂ ದೂರ ಉಳಿಯುತಿಲ್ಲ

ಖಾಲಿ ಹೃದಯದ ತುಂಬ ತುಂಬಿಕೊಳುವಾಗ
ಜೋಡಿ ಮೀನು ರತ್ನಗಳನು
ಏಕೋನಿಷ್ಠೆಯ ಬೆರಗ ಭೂಲೋಕಕೊಯ್ದು
ಮಾರುಕಟ್ಟೆಯಲ್ಲಿ ಮಾರಲೆಂದು

ಹಾಲ್ಗಡಲ ತೆರೆತಂದೆಸೆದ ಮೀನಮಿಥುನ
ಆಕಾಶ ಭೂಮಿಗೆ ಬೆಳೆದು ನಿಂತು

‘ಬೇಡ ಮಗು, ಒಯ್ಯದಿರು ನಮ್ಮ ಸಂಪತ್ತ
ಲೋಭಿಗಳ ಲೋಕಕ್ಕೆ’ ಅನ್ನುವಾಗ

ಅರ್ಧನಾರೀಶ್ವರ ಪೂರ್ಣರೂಪ ಪಡೆದು
ಬೊಬ್ಬೆಯಿಟ್ಟಿತು ಉಧಧಿಘೋಷದಲ್ಲಿ
ಜೀವವೊಂದಾದರೆ ದೇಹ ಬೆರೆಯಬೇಕು
ಹಿರಿಯ ಕಟ್ಟಳೆ ಹರನ ಲೋಕದಲ್ಲಿ

ಬೇರ್ಪಟ್ಟ ಜೀವಗಳ ಕಾಯಗಳ ಕೂಡಿಸುವ
ಕಾದಾಟ ನಿಮ್ಮ ನರಲೋಕದಲ್ಲಿ
ಅಲ್ಲಿಂದ ಇಷ್ಟು ದೂರ ನೀ ಬಂದೆ
ನಿನ್ನ ಬಯಕೆಗಳಿಂದ ಸಿಡಿದು ಹೋಗಿ

ಬಿರಿದ ತಾರೆ ಹಾಗೆ ಕನಸು ನನಸು
ಒಂದರಿಂದಿನ್ನೊಂದು ಬೇರೆಯಾಗಿ
ಮೀನ ಮಿಥುನದಲ್ಲಿ ವಜ್ರಲಗ್ನದಲ್ಲಿ
ಕಂಡಿತು ಶಿವಶಿವೆಯ ಸಂಯೋಗ ರೂಪ

ಕಂಡುಕೊಳ್ಳುವ ಮೊದಲು ಬಯಲಲ್ಲಿ ಎಲ್ಲಾ
ಮಾಯ, ಇದು ಯಾವ ಶಾಪ?
ಅಂದಿಂದ ಹಡಗನ್ನು ಒಡೆದ ಜೀವಗಳಿಂದ
ತುಂಬಿ ಆ ನಾವಿಕ ನಡೆಸುತಿರುವ

ಕಂಡೂ ಕಾಣದ ಕೈಲಾಸ ಲೋಕದಲಿ
ಒಂದು ಮಾಡಲು ಎಂದು ಕನಸುತಿರುವ
ಅರ್ಧನಾರೀಶ್ವರ ಪರ್ವತವೆಲ್ಲಿದೆ
ರತ್ನಗಳ ಮೀನುಗಳ ಕೇಳುತಿರುವ

ಅರ್ಥವಾಯಿತೆ ನಿಮಗೆ ಈ ಕವಿತೆ ಎನ್ನುತ
ನಿಮ್ಮೆದೆ ಕದಗಳ ತಟ್ಟುತಿರುವ

ಎರಡು ಹೂಗಳು

ಯಾರೋ ಹಾಡುತ್ತಿರುತ್ತಾರೆ ಕನಸುಗಳಲ್ಲಿ

ಇವನು ಹೋಗಲೇಬೇಕಾಗಿರುವ ತೋಟದಲ್ಲಿ
ಒಂದೇ ಒಂದು ಗಿಡ
ಅದರಲ್ಲಿ
ಎರಡು ಹೂಗಳು

ಒಂದು ಬಾಡದ ಹೂವು - ಮಣ್ಣಿಗೆ
ಇನ್ನೊಂದು ಬಾಡುವ ಹೂವು - ಇವನಿಗೆ

ಮಾರ್ಚ್, ೧೯೮೮

ನಿದ್ದೆ ಬಾರದ ರಾತ್ರಿ ಕೊನೆಗೆ.......

ನಿದ್ದೆ ಬಾರದ ರಾತ್ರಿ
ಮಲಗಿಕೊಂಡಿದ್ದೆ ಎಚ್ಚರದಲ್ಲಿ
ಮುಳ್ಳು ತುಂಬಿದ ಹೂವು ಹಾಸಿಗೆ ಮೇಲೆ
ಒಮ್ಮೆ ಬೆಂಕಿಯ ಕಡೆಗೆ
ಒಮ್ಮೆ ನೀರಿನ ಕಡೆಗೆ
ಹೊರಳುತ್ತಿತ್ತು ನಕ್ಷತ್ರ ಹೊದ್ದ ಕಪ್ಪನೆ ಜಗತ್ತು

ನಿದ್ದೆ ಬಾರದ ರಾತ್ರಿ
ಮಲಗಿದ್ದೆ ಎಚ್ಚರದೊಳಗೆ
ನಿದ್ದೆ ಹೋಗಿದ್ದ ಬೀದಿಗಳ ನಿಯಾನ್ ಬೆಳಕಲ್ಲಿ
ಧ್ಯಾನಕ್ಕೆ ಕೂಡಿಸಿದ್ದೆ ಅಲೆಮಾರಿ ಮನಸ್ಸನ್ನು
ಯಾಕೆ ಇರುಳಲ್ಲಿ ಸೂರ್ಯನ ಕಾಟ
ಹಗಲಲ್ಲಿ ಸೆಳೆಯುವುದು ಚಿಕ್ಕೆ ಚಂದ್ರನ ತೋಟ
-ಇಂಥ ಚಿಂತೆ ಅಲೆಗಳ ಮೇಲೆ
ದೇಕುತ್ತ ಬರುವ ಈ ನಾವೆ
-ಗೆಲ್ಲಿ ಇದೆ ದಂಡೆ,
ನಾವಿಕರಿಗೆಲ್ಲಿ ಮನೆ,
ಮನೆಗೆ ಎಲ್ಲಿದೆ ಊರು,
ದೇಶ, ರಾಷ್ಟ್ರ,
ನೆಲ, ಜಲ, ಆಕಾಶ,
ಕ್ಷಣ, ನಿಮಿಷ, ಶತಮಾನ, ಯುಗ, ಕಲ್ಪ?

ಈ ಪ್ರಶ್ನೆ ತುಂಬುವುವು ಮೈಯೆಲ್ಲ ಉಸಿರಿನ ಹಾಗೆ
ಖಾಲಿಯಾಗುವುವು ಮತ್ತೆ
ಆ ಮೌನದಲ್ಲಿ
ಯಾವುದೋ ಒಂದು ಲಯ
ಹಿಡಿಯುವುದರಲ್ಲಿ

ಆ ಕ್ಷಣವನ್ನು ಛಿದ್ರಿಸಲು ಬರುವ
ಪಕ್ಕದ ಬೀದಿ ನಾಯಿಗಳ ಬೊಗಳಾಟ
ಬೇಸಿಗೆಯ ಬಾಣಲಿಯಲ್ಲಿ ಚಂದ್ರನ ಮಾಟ

ನಿದ್ದೆ ಹೋಗಿರುವ ಈ ನಗರದಾತ್ಮದ ಹಾಗೆ
ಇತ್ತಿಂದ ಅತ್ತ
ಅತ್ತಿಂದ ಇತ್ತ
ಗಡಿಯಾರ ಲೋಲಕ
ವಾಹನ ಸದ್ದುಗಳು
ಉಚ್ವಾಸ ನಿಶ್ವಾಸ
ಎದೆಯ ಡವಡವ

ಯಾವುದೋ ಬಿಳಿ ಕುದುರೆ ಅಡ್ಡಾಡುತ್ತಿದೆ
ಕಪ್ಪುಹುಲ್ಲುಗಾವಲುಗಳಲ್ಲಿ
ದೆವ್ವಗಳು ಝಾಂಡ ಊರಿರುವ ನೆಲದಲ್ಲೂ

ಅಡ್ಡಾಡುತ್ತಾರೆ ಸಂತಸಿದ್ಧರುಸೂಫಿಗಳು
ನಮ್ಮ ಮನದ ಕೊಳಕು ಗಲ್ಲಿಗಳಲ್ಲಿ

ನನಗೆ ಗಂಟಲ ಬೇನೆ
ಹಗಲಿನ ಅಪೂರ್ಣ ಚಿತ್ರಗಳ
ಚೆಲ್ಲಾಪಿಲ್ಲಿ ಕೋಣೆ
ಕಿಟಕಿ ಮುಚ್ಚಿದ್ದರೂ ಬಾಗಿಲು ಗೋಡೆಯಾಗಿದ್ದರೂ
ಗೋಡೆಯೊಳಗಿನ ಇಟ್ಟಿಗೆಯ ಸಣ್ಣ ತೂತುಗಳಾಸಿ
ತೂರಿ ಬರುತ್ತಿವೆ ಬೆಳಕಿನ ಕಿರು ಹೆಜ್ಜೆಗಳು
ಹೃದಯಸ್ಪಂದನದಲ್ಲಿ ಉಸಿರ ಲಯದಲ್ಲಿ
ಉಲಿಯ ತೊಡಗುತ್ತವೆ ಮರೆತಿದ್ದ ಗೆಜ್ಜೆಗಳು

ಏನು ಕಳಕೊಂಡೆವು ನಾವು ನೆನ್ನೆ ಹಗಲು?
ಏನು ಬಳಕೊಳ್ಳುವೆವು ನಾವು ನಾಳೆ ಹಗಲು?
ಮಲಗಿರುವ ಎಚ್ಚರದಲ್ಲಿ
ಓಲ್ಗಾ ನದಿ ತಾನ ಬದಲಾಗಿದೆ
ಕೆಂಪು ಹೂಗಳ ಬಣ್ಣ ಮಾಸುತ್ತದೆ
ಸ್ವಪ್ನ ಮೂರ್ತಿಗಳು ಒಡೆಯುತ್ತಿವೆ

ಸುಳ್ಳು ಈ ಎಲ್ಲ
ಕತ್ತಲಿನ ಬಾವಿತಳದಲ್ಲಿ ಕೂತ ಕಪ್ಪೆಯ ಹಾಗೆ

ಬೆಳಕಿನ ಗುಣಾಕಾರ ಭಾಗಾಕಾರವಷ್ಟೇ
ಸತ್ಯ ನಿತ್ಯ

ತಲೆಗೆ ಪಿಸ್ತೂಲ್ ಹಿಡಿದು
ಅರೆಗಳಿಗೆ ಜಯವನ್ನು ಗಳಿಸಿಕೊಳ್ಳುವುದಷ್ಟೇ
ಸತ್ಯ ನಿತ್ಯ

ತಿಂದಿದ್ದ ನೋವನ್ನೋ ಸುಖ ಸುಖ ಎಂದು
ಕತ್ತುಮಟ ತಿಂದು ಮತ್ತೆ ಕಕ್ಕುವುದೊಂದೇ
ಸತ್ಯ ನಿತ್ಯ

ನಿಮಿಷಗಳ ಚಿಟ್ಟೆ ಹಿಂಡಲ್ಲಿ ಒಂದನ್ನು ಹಿಡಕೊಂಡು
ಟೇಬಲ್ಲ ಮೇಲಿಕ್ಕಿ ಭೂತಕನ್ನಡಿಯೊಳಗೆ ಕಂಡಂತ ದೃಶ್ಯವೇ
ಸತ್ಯ ನಿತ್ಯ

ಸತ್ತ ತಾರೆಗಳು ನಿರ್ಜೀವ ಚಂದ್ರ
ಹತ್ತಿರ ಬಂದದ್ದನ್ನು ಆವಿ ಮಾಡುವ ಸೂರ್ಯ
ಈ ಎಲ್ಲ ಹೆಣಗಳು
-ಇಷ್ಟು ಮಾತ್ರ ಸತ್ಯ ನಿತ್ಯ

ಈ ರೀತಿ
ಬೋಧಿಸುತ್ತಿವೆ ಅಶರೀರವಾಣಿಗಳು
ಈ ಯುಗದ ಬ್ರಹ್ಮಸೂತ್ರದ ನೂರು ಭಾಷ್ಯಗಳನ್ನು
ಒಕ್ಕೊರಲಿನಲ್ಲಿ
ಆದರೂ ಉಸಿರು
ತುಂಬುತ್ತಿದೆ ಮೈಯೆಲ್ಲ
ಉಸಿರಾಡಿವೆ ಹಾಗೆ ಹೇಳುವ ಬಾಯಿ
ಉಸಿರು ಹಿಂಗುತ್ತಿದೆ
ಉಸಿರು ತುಂಬುತ್ತಿದೆ
ಪ್ರತಿ ಉಸಿರಿನಲ್ಲಿ ಚೌರಾಶಿ ಜೀವರಾಶಿಗಳ
ಆದಿಲಯ

ಚಲನೆ ನಿಶ್ಚಲತೆ
ನಿಶ್ಚಲತೆ ಚಲನೆ
ಜೀವ ನಿರ್ಜೀವ
ನಿರ್ಜೀವ ಜೀವ

ಸೂರ್ಯ ಚಂದ್ರ
ಚಂದ್ರ ಸೂರ್ಯ

ಪ್ರತಿ ಉಸಿರ ಕೊನೆಗೆ
ಹಿಂತಿರುಗುತ್ತಾಳೆ ವಸಂತಸೇನೆ ವಧಾಸ್ಥಾನಕ್ಕೆ
ಕೊಡಲಿ ನೆರಳಲ್ಲಿ ತುಸುಕಾಯಿ
ಓ ಚಾರುದತ್ತ

ನಿದ್ದೆ ಬಾರದ ರಾತ್ರಿ ಕೊನೆಯಲ್ಲಿ ಮೊದಲ ಕಿರಣಕೆ ಮೊದಲು
ಅಡ್ಡಾಡಹೊರಟಿದೆ ಜೀವ
ಉರಿಯುತ್ತಿದ್ದ ಕಂಗಳಿಗೆ ನೆಲವೆಲ್ಲ ನಂದಬಟ್ಟಲು ಹೂವು
ಸಾವುವಾಸನೆಗೆ ರೋಸಿದ್ದ ಮೂಗೊಳಗೆ ಜಾಲಗಿರಿಗಂಧ.
(ಇನ್ನೇನು ಶಿವರಾತ್ರಿ)
ಸದ್ದುಗಳು ಗುದ್ದಿದ್ದ ಕಿವಿಯ ತಮಟೆಗೆ ಈಗ ಹಕ್ಕಿಗಳ ಇನಿವಾತು

ನಿದ್ದೆ ಬಾರದ ರಾತ್ರಿ ಕೊನೆಯಲ್ಲಿ

ಕೂಲಿಗಳೆ ನಿಮ್ಮನ್ನು ಕಾಯುತ್ತಿವೆ ಯಜಮಾನಿಕೆ
ಯಜಮಾನರೆ ನಿಮ್ಮನ್ನು ಕಾಯುತ್ತಿವೆ ಕೂಲಿಗಳು
ಸ್ವಾತಂತ್ರ ಪ್ರೇಮಿಗಳೆ ನಿಮ್ಮನ್ನು ಕಾಯುತ್ತಿವೆ ಸಂಕೋಲೆಗಳು
ಸರ್ವಾಧಿಕಾರಿಗಳೆ ನಿಮ್ಮನ್ನು ಕಾಯುತ್ತಿವೆ ಬಂದೂಕಗಳು

ನಿದ್ದೆಯಿಲ್ಲದ ರಾತ್ರಿ ಕೊನೆಗೆ
ಎಚ್ಚರವಿರದ ಹಗಲಿಗೆ ಮೊದಲು
ಎರಡು ಅಲೆಗಳ ನಡುವೆ
ಎರಡು ಉಸಿರಿನ ನಡುವೆ
ಎದೆಯ ಬಡಿತದ ನಡುವೆ
ಈ ಕ್ಷಣದ
ಅನಂತ
ನೀಲಿ ಜ್ಯೋತಿ

ಏಪ್ರಿಲ್, ೧೯೯೦

ರತ್ನಶೆಟ್ಟಿ

ಹೊತ್ತು ಮುಳುಗುವ ಮುಂಚೆ
ಹತ್ತು ಬೀದಿಗಳಿರುವ
ಪಟ್ಟಣಕೆ ಬಂದ್ಯಲ್ಲೋ ರತ್ನಶೆಟ್ಟಿ।

ಹತ್ತು ಹೊನ್ನಿಗೆ ಒಂದು
ರತ್ನ ಮೂಗುತಿ ಎಂದು
ಸುತ್ತ ಸಾರುತ ಬಂದೆ ರತ್ನಶೆಟ್ಟಿ।

ಹತ್ತು ಜಲುಮದ ಧನವ
ಕಟ್ಟಿ ಮಡಗಿದ್ದವಳು
ತೆತ್ತು ಕೊಂಡೆನು ಒಂದ ರತ್ನಶೆಟ್ಟಿ।

ಕತ್ತಲಿಳಿದ ಮೇಲೆ
ಮುತ್ತಿದವು ಸ್ವಪ್ನಗಳು
ತೊಟ್ಟು ಮೆರೆದೆನು ಅದನು ರತ್ನಶೆಟ್ಟಿ।

ಹೊತ್ತು ಮೂಡಿದ ಮೇಲೆ
ಹೊತ್ತಿನಯ್ಯನ ಮುಖಕೆ
ಎತ್ತಿ ನೋಡಿದೆನು ಅದನು ರತ್ನಶೆಟ್ಟಿ।

ರತ್ನಗಿತ್ನವು ಅಲ್ಲ
ಗೊತ್ತಾಯ್ತು ನನಗಾಗ
ಅಪ್ಪಟ ಗಾಜ್ಹರಳು ರತ್ನಶೆಟ್ಟಿ।

ಈ ಪಾಟಿ ಬೆಲೆ ತೆತ್ತು
ಒಪ್ಪತ್ತೂ ಸುಖವಿಲ್ಲ
ಎಪ್ಪ ನೀ ಬಲು ಖಳನೊ ರತ್ನಶೆಟ್ಟಿ।

ಹಿಡಕೊಂಡು ಗಾಜ್ಹರಳ
ಹುಡುಕುತ ರತ್ನಗಳ
ಬಡವಿ ನಾ ಹೊರಟಿರುವೆ ರತ್ನಶೆಟ್ಟಿ।

ನವೆಂಬರ್, ೧೯೯೦

ಮತ್ತೆ ಹಾಯುತ್ತಿದೆ ಲೋಕ ಅಗ್ನಿಯೊಳಗೆ

ಮತ್ತೆ ಹಾಯುತ್ತಿದೆ ಲೋಕ ಅಗ್ನಿಯೊಳಗೆ
ಮತ್ತೆ ಹಾಯುತ್ತಿದೆ ಅಗ್ನಿ ಲೋಕದೊಳಗೆ
ಮತ್ತೆ ಕುಸಿಯುತ್ತಿವೆ ಪರ್ವತದ ನೆತ್ತಿಗಳು
ಮತ್ತೆ ಚಿಮ್ಮುತ್ತಿವೆ ಪಾತಾಳದಾಳಗಳು
ಮತ್ತೆ ಇರುಳು ಹಬ್ಬಿದೆ ಹಾಡಹಗಲಲ್ಲಿ
ಮತ್ತೆ ಕೆಂಡದ ಸೂರ್ಯ ಅಮವಾಸೆ ಇರುಳಲ್ಲಿ
ಮತ್ತೆ ಸ್ವಪ್ನವಾಗುತ್ತಿದೆ ಸತ್ಯ
ಮತ್ತೆ ಸತ್ಯವಾಗುತ್ತಿದೆ ಸ್ವಪ್ನ
ಮತ್ತೆ ರಾಹುಗ್ರಹಣ ಚಂದ್ರನಿಗೆ
ಮತ್ತೆ ಚಂದ್ರಗ್ರಹಣ ರಾಹುವಿಗೆ
ಮತ್ತೆ ಹಾಯುತ್ತಿದ್ದೇನೆ ನಾನು ನಿನ್ನೊಳಗೆ
ಮತ್ತೆ ಹಾಯುತ್ತಿದ್ದೀಯ ನೀನು ನನ್ನೊಳಗೆ
ಮತ್ತೆ ಹಾಯುತ್ತಿದೆ ಲೋಕ ಅಗ್ನಿಯೊಳಗೆ
ಮತ್ತೆ ಹಾಯುತ್ತಿದೆ ಅಗ್ನಿ ಲೋಕದೊಳಗೆ

ಮಾರ್ಚ್, ೧೯೯೦

ನೊರೆಹಾಲು

ನಟ್ಟ ನಡು ರಾತ್ರಿಯಲಿ
ತಟ್ಟನೆ ಕಿರುಚುವ
ಪುಟ್ಟ ಕಂದಮ್ಮಾ ಅಳಬೇಡ

ಕೊಟ್ಟಿಗೆ ಕತ್ತಲಲಿ
ಕಟ್ಟಿಗೆ ಕೊರಡಂತೆ
ಕಟ್ಟಿಹಾಕಿರುವಂಥ ಕರಿಗೋವು

ಹೊತ್ತು ಮೂಡುತ್ತಲೆ
ಕೊಟ್ಟೇ ಕೊಡುವವು ನಿನಗೆ
ಕೆಚ್ಚಲು ತುಂಬಾ ನೊರೆಹಾಲು

ನಟ್ಟ ನಡು ರಾತ್ರಿಯ
ಕತ್ತಲೆ ಕೊನೆಯಲ್ಲ
ಪುಟ್ಟ ಕಂದಮ್ಮಾ ಅಳಬೇಡ

ಮೇ, ೧೯೮೮

ಹೊತ್ತಿನ ದೇವ

ಏಳು, ಎದ್ದೇಳು ಹೊತ್ತಿನ ದೇವ
ಕತ್ತಲು ನಿದ್ದೆ ಹೆಬ್ಬಾವುಗಳ ತೆಕ್ಕೆಗಳಿಂದ
ಸುತ್ತಲೂ ಹೆಣೆದುಕೊಂಡಿರುವ ನಕ್ಷತ್ರಚಂದ್ರಮರ
ಮಹೇಂದ್ರಜಾಲದಿಂದ

ಹೀಗೆ ಕತ್ತುಮಟ ಕತ್ತಲಿದ್ದ
ಯಾವನೋ ಬಡಪಾಯಿ
ಕೂಗುತ್ತ ನಿದ್ದೆಯಿಂದೆದ್ದು
ಕೂಗಿ ಎಬ್ಬಿಸದಿದ್ದಾಗ ನಿನ್ನನ್ನು
ಏಳುವುದಿಲ್ಲ ನಮ್ಮ ಹೃದಯ ಸೂರ್ಯರು
ಹೆಬ್ಬಾವು ತೆಕ್ಕೆಯಿಂದ
ಕಳ್ಳ ಬೆಳಕಿನ ಇಂದ್ರಜಾಲದಿಂದ

ಜಾಡಿಸಿ ಒದ್ದು
ಜಾಲಜಾಲಗಳನ್ನು
ಎದ್ದು ಬಾ
ರಕ್ತವಾಗುತ್ತಿರುವ ಕಪ್ಪುಸಾಗರದಿಂದ
ಹತ್ತಿ ಬೆಳಕಿನ ರತ್ನರಥವನ್ನು ಬಾ
ಹಸಿರು ತೊಟ್ಟುಕೊಳ್ಳುತ್ತಿರುವ
ಮಣ್ಣು ಹಾಸಿನ ಮೇಲೆ
ಏರಿ ಬಾ
ಮುಚ್ಚು ನಮ್ಮ ಕಣ್ಣು ಚುಚ್ಚುವ
ಎತ್ತರದ ಬೆಟ್ಟ ನೆತ್ತಿಗಳನ್ನು
ಅಲ್ಲಿಂದ ಇಳಿದು ಬಾ

ಬೆಳಗು
ಆಳದ ಕೆಳಗೆಲ್ಲೋ ಕದ್ದುಕೂತಿರುವ
ಹೂವರಳುತ್ತಿರುವ ಕಣಿವೆ ಕೊಳ್ಳ ಕೊರಕಲುಗಳನ್ನು
ಕರಿಯುತ್ತ

ಹಗಲು ಕಡುನೀಲಿ ನೆತ್ತಿಯ ಮೇಲೆ
ನನಸು ಬೆಳಕಲ್ಲಿ
ನಿನ್ನ ಬರವಿಗಾಗಿ ಕಾದಿರುವ
ಪಡುವಣದ ದಿಸೆಯನ್ನು
ಮಿಂದು ದಣಿವಾರಿಸಿಕೋ
ಪಶ್ಚಿಮ ಸಮುದ್ರ ಕ್ಷಿತಿಜದಲ್ಲಿ

ಈ ಎಲ್ಲಕ್ಕೂ ಮೊದಲು
ಏಳು ಎದ್ದೇಳು ಹೊತ್ತಿನ ದೇವ
ನಿನಗಿಂತಾ ಮೊದಲು ಮೇಲೆದ್ದು
ಕೂಗಿ ನಿನ್ನನ್ನೆಬ್ಬಿಸುತ್ತಿರುವ
ಈ ಬಡಪಾಯಿ ಮನದ ಮನೆಯಲ್ಲಿ
ಹೆಣೆದುಕೊಂಡಿರುವ
ದುಃಖ ದುಮ್ಮಾನ ದುಃಸ್ವಪ್ನಗಳ ದುರ್ಭೇದ್ಯ ಜಾಲದಿಂದ
ಈ ಅಧೋಮಾಯೆಯಿಂದ
ಆ ರುಧಿರ ಸಾಗರದಲ್ಲಿ ಉಪ್ಪವಡಿಸುವ ಮೊದಲು
ಏಳು ಎದ್ದೇಳು
ನನ್ನೊಳಗಿನಿಂದ
ನನ್ನೊಡಲ ಕೆಂಪಾಂಬುಧಿ ಕೆರೆಯ ಕೊಳಕು ನೀರಿಂದ
ಏಳು ಎದ್ದೇಳು
ಹೊತ್ತಿನ ದೇವ

ಜುಲೈ, ೧೯೮೮

ಸದಾಶಿವ ಸಾಗರದಲ್ಲಿ

ಇಡೀ ರಾತ್ರಿ ನೀರಲ್ಲಿ ತಪಸ್ಸು ನಿಂತಿದ್ದೀರಿ
ಇಡೀ ರಾತ್ರಿ ಎಲ್ಲ ನೋವುಗಳನ್ನು
ಮಿದುಪಕಳೆಗಳಿಂದ ಮುಚ್ಚಿ ಮಡಗಿದ್ದೀರಿ
ಬೆಳಗಲ್ಲಿ ಕಣ್ಣು ತೆರೆಯುತ್ತಿರುವ ಕಮಲಗಳೆ
ಮೇಲೆ ಸೂರ್ಯನ ಮುಖವ ನೋಡಿ
ಕೊಳ್ಳಿ

ಇಡೀ ಹಗಲು ಉರಿಮೈಯ ತೊಡಲಿರುವ ಸೂರ್ಯನೆ,
ಈಗ ನಿನಗೆ
ಕೊಳದ ನೀರಮನೆಯಲ್ಲಿ ತಣ್ಣನೆ ಮಂಚ
ಮೈಯೆಲ್ಲಾ ಕಮಲಗಳು

ಡಿಸೆಂಬರ್, ೧೯೮೮

ಓ ಪ್ರಾಣಶಕ್ತಿದೇವಿ

ಯಾಕೆ ಈ ಥರ ತಿರೆತುಂಬ ತಿರುಗುತ್ತೀಯ
ತರತರ ನಡುಗುವುದಕ್ಕೂ ಸಾಧ್ಯವಾಗದ ಈ ಕೊರೆವ ಚಳಿಯಲ್ಲಿ
ನಿದ್ದೆಯೊಳಗದ್ದಿ ಹೋಗಿದ್ದ ಬೀದಿಗಳಲ್ಲಿ

ಪ್ರಾಣಶಕ್ತಿದೇವಿ

ಯಾಕೆ ಸುರುಳಿ ಸುತ್ತುತ್ತೀಯ
ಹೊರಳಿ ನಿನ್ನೊಳಗೆ ನೀನೇ
ನಿನ್ನ ಜೊತೆ ನೀನೇ ಉರುಳಿ
ಹೆಡೆ ತುಳಿಸಿಕೊಂಡ ಉರುಗನ ಹಾಗೆ
ನರಳುತ್ತೀಯ
ಬುಸಬುಸನೆ ನಿಟ್ಟುಸಿರನ್ನು
ಒಳಕ್ಕೆ ಹೊರಕ್ಕೆ ತಳ್ಳುತ್ತೀಯ

ಪ್ರಾಣಶಕ್ತಿದೇವಿ

ರಕ್ತ ಕೊಳದ ಕೆಂಪು ತಾವರೆಯ ತಿರುಮಗಳೆ
ಆರು ಕೈಗಳ ನೀನು
ಒಂದೇ ಕೈ ತಳೆದು
ಆ ಕೈಯಲ್ಲಿ ತಲೆಬುರುಡೆ ಕಪ್ಪರ ಹಿಡಕೊಂಡು
ಯಾಕೆ ಒರಲುವೆ
ಬೀದಿ ಬೀದಿಗಳ
ನಗರ ನಗರಗಳ ಹೊರಳು ಕಲ್ಲುಗಳಲ್ಲಿ
ರಾತ್ರಿಗಳಲ್ಲಿ
ಸ್ವಪ್ನಗಳಲ್ಲಿ

ಪ್ರಾಣಶಕ್ತಿದೇವಿ

ಹೇಳು, ಒಕ್ಕಣ್ಣಳಾದ ಮುಕ್ಕಣ್ಣೆ:
ನಿಲ್ಲುವುದು ಎಂದು ಈ ಹಲ್ಲೆಗಳು

ನಿಂತು ಮಲಗಿ ಕೂತುಕೊಂಡಾಗ
ನಿಂತು ಮಲಗಿ ಕೂತುಕೊಳ್ಳಲೂ ಬಿಡದಂಥ
ಹಲ ಬೇಗೆಗಳು ಹಲ್ಲೆಗಳು
ಮೊದಲ ಪ್ರಳಯದ ಮೊದಲ
ಭೋಗ್ಯ ಹಾಕಿಸಿಕೊಂಡ ಭೋಗ ಭೂಮಿಯ ಭೋಗಗಳು
ಕೊನೆಯ ಪ್ರಳಯದ ಕೊನೆಗೆ
ಎಲ್ಲ ಹಲ್ಲೆಗಳಾಚೆ
ತನ್ನೆಲ್ಲ ಬೆಳಕನ್ನು ತನ್ನೊಳಗೆ ಕಟ್ಟಿಟ್ಟ
ಹೊನ್ನ ಪುತ್ಥಳಿಯಂಥ ಯೋಗಿಗಳ ಸಮಾಧಿಗಳು

ಗಳಿಗೆಗಳಿಗೆಗಳ ಈ ಹಲ್ಲೆಗಳಿಗೆ
ಕೊನೆಗಳಿಗೆ ಎಂದು ಹೇಳೆ
ಓ ಪ್ರಾಣಶಕ್ತಿದೇವಿ

ಹೇಳು
ಎಂದು ಬಂದಾಗುವುದು ಭೂತ ಭೂತದ ಕಾಟ
ಒಂದರಮೇಲಿನ್ನೊಂದು
ಪೃಥ್ವಿ ಅಪ್ಪುವಿನ ಮೇಲೆ
ಅಪ್ಪು ಅಗ್ನಿಯ ಮೇಲೆ
ಅಗ್ನಿ ವಾಯುವಿನ ಮೇಲೆ
ವಾಯು ಆಕಾಶದ ಮೇಲೆ
ನಾ ಮೇಲೆ
ನೀ ಮೇಲೆ
ಎಂದು ನಡೆಸುವ ಹಲ್ಲೆ
ಪ್ರತಿಹಲ್ಲೆಗಳಿಗೆ ಎಲ್ಲೆ ಎಲ್ಲೆ

ತನಗೆ ತಾನೇ ಹಗೆಯಾದ
ರಾಕ್ಷಸರ ನಕ್ಷತ್ರ ಸಾಮ್ರಾಜ್ಯದಲ್ಲಿ ಶೋಕವನದಲ್ಲಿ
ವಿದೇಹ ಬಹುದೇಹವಾದ ದೇಹದಲ್ಲಿ
ಮರಣಕಣೆಯಾದ ಧರಣೆಯಲ್ಲಿ
ಎಂದು ಮರಣ ಮಹಾನವಮಿ ಮರುಜನುಮ

ಎಂದು ಸಂಭ್ರಮ ಕರುಣೆ ವರುಣನ ವರ್ಷ
ಎಂದು ಎಂದಿನವರೆಗೆ
ಇಂದಿನ ಹಾಗೆ
ತಿರುತಿರುಗಿ ತಿರುಗುತ್ತ ತಿರೆಹಾಗೆ
ಹೊರಳುತ್ತಿರುವೆ
ನರಳುತ್ತಿರುವೆ ಹೊರದಾರಿ ಇರದ ಈ ಕವಿತೆ ಚರಣಗಳಲ್ಲಿ
ಶಬ್ದ ಲಯಗಳ ಅರ್ಥ ಸಮರಗಳಲ್ಲಿ
ಧಮನಿಧಮನಿಗಳಲ್ಲಿ
ಕೂಡಿ ಕಾಯುವ ವಿಶ್ವಗಳ
ಈಡೆ ಪಿಂಗಳೆಯಲ್ಲಿ
ಓ ಪ್ರಾಣಶಕ್ತಿದೇವಿ

ಹೀಗೆ ಹೇಳುತ್ತಿರುವುದು ಕೇಳಿದರೂ ಕೇಳದ ಹಾಗೆ
ಅಗಳಿ ಜಡಿದು
ಕಿಟಕಿ ಕದ ಕಿಂಡಿ ಒಂದಾಗುವಂತೆ ಮೊಳೆ ಬಡಿದು
ಒಳಗೆ
ಒಡೆಯಲಾಗದ ಒಡಪಿನ ಹಾಗೆ
ಕಡಿದು ಬಿದ್ದಿದ್ದಾವೆ ದೇಹಗಳು
ಪೂರ್ವ ಪಶ್ಚಿಮವಾಗಿ
ಭೋಗ ರೋಗಗಳಲ್ಲಿ

ಹೀಗೆ ನೀನು ಹೊರಳುತ್ತ ನರಳುತ್ತ
ಕೆರಳಿಸಬೇಕೆಂದು ಮಲಗಿರುವ ದೇಹಗಳನ್ನು
ಬಿದ್ದು ಹೋಗುವವರೆಗೆ ಎರಡೂ ಕೈಯಿ
ಗುದ್ದುತ್ತ ಕುಟ್ಟುತ್ತ ಬಾಗಿಲುಬಾಗಿಲುಗಳನ್ನು
ಹೊಯ್ದುಕೊಳ್ಳುತ್ತ
ಗಾಳಿಯ ಹಾಗೆ
ದಾಳಿ ಮಾಡುತ್ತಿದ್ದರೂ ಪ್ರತಿಕ್ಷಣ
ಯಾಕೆ ಒಡೆದು ಬಿದ್ದಿವೆ
ಈ ಜೀವರಾಶಿ
ಹೆಪ್ಪುಗಟ್ಟುತ್ತಿರುವ ಗೋಡೆಗೋಡೆಯ ಮಧ್ಯ
ನಿರ್ಜೀವವಾಗಿ
ನೀರವವಾಗಿ

ನಿನ್ನನ್ನು ಹೊರಗಿಟ್ಟ ಮಸಣಮಸಣಗಳಲ್ಲಿ
ಜೀವಂತ ಮರಣಗಳಲ್ಲಿ
ಓ ಪ್ರಾಣಶಕ್ತಿದೇವಿ

೨

ಬೇರುಗಳು ಸತ್ತು ಬೇರು ಬೇರಾದ ಜೀವಿಗಳ ಕಂಡು
ಹಾಕುತ್ತಲೇ ಇರು ಕೂಗು
ಇನ್ನೂ ಜೋರಾಗಿ

ಈ ಲೋಕದ ಲೌಕಿಕ ವ್ಯವಹರಣೆ ಬಗ್ಗೆ
ದೂರ ಒಂದರಿಂದೊಂದು ದೂರ
ದೂರು ನೀಡುತ್ತ
ಜೊತೆಗಾರ ಕತ್ತಲೆಗೆ
ಭಾರಿ ಬೆಳಕಲ್ಲಿ ಬಂದಿಯಾಗಿ
ಒಂದೊಂದೂ ಒಂಟಿಯಾಗಿ
ನಿಂತಂಥ ನಕ್ಷತ್ರಗಳ ವಿರುದ್ಧ
ಈ ಶಬ್ದಧ್ವನಿಗಳ ಯುದ್ಧ
ಈ ಜಡ ಬ್ರಹ್ಮಾಂಡ ಜೀವಂತ ಸಿಡಿಯುವವರೆಗೆ
ಬಿಡಿಯಾದ ತಾರೆಗಳ
ಇಡೀ ಇಡೀ ಬೆಳಕು
ಒಂದಾಗಿ ಬೆದರಿ
ನಿನ್ನ ಕಣ್ಣುಗಳಿಂದ
ಜ್ಯೋತಿವರ್ಷದ ಹಾಗೆ ಸುರಿಯುವವರೆಗೆ
ಮುಕ್ಕಳಿಸು ತೆರೆಸು ಮುಚ್ಚಿದ್ದ ಕಣ್ಣುಗಳನ್ನು
ಓ ಮುಕ್ಕಣ್ಣೆ

ನೆಲದ ಈ ಇರುಳು
ಇರುಳಲ್ಲವಿತು ಮಲಗಿರುವ ಹಗಲು
ಈ ಎರಡೂ ಹುಟ್ಟಿಸಿದ ದಿಗಿಲು
ಸಿಗಿದಿರುವ ಒಡಲು
ಹಂಚಿಹೋಗುತ್ತಿರುವ ಪಂಚಭೂತಗಳು

ವಿಶ್ವ ಭಂಡಾರಗಳಲ್ಲಿ ಲೋಕಗಳ ಹಣಬರಹ
ಅಚ್ಚೊತ್ತಿ ಬಚ್ಚಿಕ್ಕಿರುವ ಹಣದ ಬೆಟ್ಟಗಳು

ಸತ್ಯತತ್ತ್ವಗಳ ಶೋಕಾಕ್ಷರಗಳಂತೆ
ಶ್ವೇತಪುಸ್ತಕಶಯನ
ಕಪ್ಪು ಅಕ್ಷರಗಳು
ನಪುಂಸಕತೆ ಶಾಶ್ವತ ಪುರುಷಾರ್ಥವಾದಂತೆ
ಕುಗ್ಗುತ್ತಿರುವ ಧಾನ್ಯಗುಡ್ಡದ ಮುಂದೆ ಹಿಗ್ಗಿ ಬೆಳೆಯುತ್ತಿರುವ
ನವನವೀನಾಸ್ತ್ರ ಶಸ್ತ್ರ ಶಾಸ್ತ್ರ ಪರ್ವತಗಳು
ಎಲ್ಲವೂ ಜ್ಯೋತಿವರ್ಷದ ಬೆಳಕಲ್ಲಿ
ಬೆಳಕಾಗಿ ಬೆಳೆದು ಬದಲಾಗುವವರೆಗೆ
ಲೋಕಗಳನ್ನು ಬೆಳಗಿಸುವವರೆಗೆ
ಬೆಳಗಾಗಿಸುವವರೆಗೆ
ಬೆಳಕಾಗುವವರೆಗೆ

ಹಾಕುತ್ತಲೇ ಇರು ಕೂಗು
ಕೂಗು ಕೂಗುಗಳನ್ನು
ಕೂಗುಗಳು ಕೂಗಿ ಕರೆಯುವವರೆಗೆ
ಕೂಗುಗಳು ತಾವೇ ಕರೆಯುವವರೆಗೆ

ಓ ಪ್ರಾಣಶಕ್ತಿದೇವಿ.

ಅಕ್ಟೋಬರ್, ೧೯೮೮

ಹೊನ್ನ ಗಂಗಾಧರ

ಹೊನ್ನಾದೇವಿ:

ತಿರುತಿರುವಿ ನೀಲಿ ಛತ್ರಿ
ಬಾರಿಸಿ ಬುಡುಬುಡಿಕೆ
ಕುಣಿಸಿ ಕಾಲಿನ ಗೆಜ್ಜೆ
ಕಿವಿಯ ಮೌನ ಕೆಣಕಿ
ಯಾರು ಬಂದರು ಕದ
ನಿನ್ನ ಕಡೆಗೆ
ನನ್ನ ಕಂಗಳ ಕದ
ನಿನ್ನ ಕಡೆಗೆ

ಹಣೆಗಣ್ಣು ಉರಿದಾಗ
ಹೇಗೆ ಉಳಿದ ಸೂರ್ಯ
ಅಗ್ನಿಸ್ಫೋಟದ ದಿಗಿಲು
ಈ ಹಗಲು
ಊರಿಗೂರೇ ಕರಗಿ
ಕೇರಿ ಪೂರಾ ಆವಿ
ನೀನು ಬರಿ ಹೇಗುಳಿದೆ
ನನ್ನ ಕೈಯೇ
ಮೈಯೇ
ಈ ಶಾಖ ಸನಿಹದಲಿ
ಜೀವ ವೈಶಾಖದಲಿ

ಕತ್ತಲೆ ಕೂರುವ ಕಣ್ಣುಗಳ ತಿರುವೆಗೆ
ಯಾಕೆ ಬಂದೆ ದೊರೆಯೆ
ನಾ ನಿನಗೆ ಸರಿದೊರೆಯೆ

ಮಣ್ಣು ಮನೆ ಬಾಗಿಲಿಗೆ
ಹುಳ ತಿಂದ ಹೊಸ್ತಿಲಿಗೆ
ತಂದೆಯಿಲ್ಲದ ಗಂಡನಿಲ್ಲದ
ಮಕ್ಕಳ ಕಿಲ ಕಿಲ ಕುಕಿಲು ಕೇಳದ ಮನೆಗೆ
ಎಡಗೈಲಿ ಬುಡಬುಡುಕೆ ಆಡಿಸುತ
ನನ್ನೆದೆಯನಾಡಿಸುತ
ಬಲಗೈಲಿ ಗುಂಡಿಗೆ ಕಪ್ಪರ ಒಡ್ಡುತ್ತ
ಒಡಕು ಮಡಕೆ ತಳದ ಕರುಕಲ್ಲಿ
ಅಂಟಿರುವ
ನನ್ನ ಹಿಡಿಜೀವ.
ಬೇಕೆಂದು ಬೇಡಿ ತಿರುಕನೆ ದೊರೆಯೆ
ಯಾಕೆ ಬಂದೆ ಹೇಳು
ತಂದು ಸುರಿಯುವೆ ತಾಳು
ಅನ್ನುವದರಷ್ಟಕ್ಕೆ
ಸೂರ್ಯ ಚಂದ್ರರ ಕಳಚಿ
ಬೆಳಕ ಗಟಗಟ ಕುಡಿದು
ಜೋಳ ಹಿಟ್ಟಿನ ಹಾಗೆ
ಜೋಳಿಗೆ ತುಂಬ ತಾರೆಗಳ ಸುರಿದು
ಕೊಂಡು ಹೊರಟೆ
ತಾವರೆ ಕೊಳದಾಚೆ ಯಾವ ಕೊಂಡಕೆ
ಯಾವ ಲೋಕದ ಯಾವ ಖಂಡಕೆ
ಏನು ಗತಿ ಇನ್ನು
ಕೊತ ಕೊತ ಕುದಿಬಂದ ಮೈಮಾಂಸ ಖಂಡಕೆ

ಕವಿದಿರುವ ಕತ್ತಲೆ
ಮೌನ ನೀನು ಯಾಕಿಷ್ಟು ಬತ್ತಲೆ
ಅತ್ತ ಇತ್ತಲೆಯಾಗಿ
ಹತ್ತು ನೂರು ಸಾವಿರ ತಲೆಹೊತ್ತು
ಮೈಯ ರೋಮದ ಸಣ್ಣ ಸಣ್ಣ ರಂಧ್ರಗಳಲ್ಲಿ
ಒಂದೊಂದರಲ್ಲೂ ಪಂಜಿನ ಹಾಗುರಿವ
ಕೋಟಿ ಕಣ್ಣು ತಲಾಶು

ಎಲ್ಲಿ ಆ ತಿರುಕ
ಬುಡುಬುಡಿಕೆ ಬೂದಿ ಬುಡುಕ

ಬತ್ತಲಿಗ ಮನೆಮುರುಕ
ಸಂಜೆ ಕಣ್ಣಿಗೆ ಕಾಮನ ಬಿಲ್ಲು
ಹುಬ್ಬನೊಂದೇ ಕ್ಷಣ
ಬರೆದು ಮರುಕ್ಷಣ ಅಳಿಸಿ
ಕಸಿದುಕೊಂಡೋಡಿದವ

ಓಡಿದ್ದ ಕಂಡಿರಾ
ಕದ್ದು ಇಣಕುವ ಮಿಂಚಿ
ಗುಡುಗುವ ಪ್ರಪಂಚಿ
ಅವನ ಹೆಜ್ಜೆ ಗುರುತು ನಿನ್ನೆದೆ ಬಿರಿಯುತಾ
ಅವನ ಗೆಜ್ಜೆ ಉಲಿವು ಮತ್ತು ಹತ್ತಿಸುತಾ
ಹೇಳು ನೆಲ
ಕೇಳು ಮೊರೆವ ಸಾಗರವನ್ನು
ಹೂಳು ಇಲ್ಲದಿದ್ದರೆ ನನ್ನನ್ನು
ನನ್ನೊಡಲು ಮಣ್ಣಲ್ಲಿ
ನೆಲದಾಳ ಕಾವಲ್ಲಿ
ಚಟ್ಟ ಕಟ್ಟಿ ನನಗೆ
ಮೃತ್ಯುವಿನ ಪಟ್ಟ ಕಟ್ಟಿ ನನಗೆ

ಗಂಗಾಧರ:

ಮಣ್ಣು ನೀನಲ್ಲ ಕಣೆ
ನನ್ನ ಜೀವದ ಕಣ್ಣೇ
ಮರೆತೆಯಾ ನಿನ್ನ ಹೆಸರು ಹೊನ್ನಾದೇವಿ
ಅಗಸರ ಸೊಗಸು ಕುಲದಲ್ಲಿ ಬೆಳೆದವಳೆ
ಅಗಸೆ ಹೂಗಳ ಬೊಗಸ ಕಣ್ಣಲ್ಲಿ ಬಿರಿದವಳೆ

ಕಾರ್ಮೋಡ ಜಡೆಯಲ್ಲಿ ಒಡಕು ಚಂದ್ರನ ತಳೆದು
ಮೇರೆವರಿದ ಗಂಗೆಯ ಹಿಡಿದು
ಮೇರೆದಪ್ಪದೆ ಕಟ್ಟಿ
ನಾನು ಇದ್ದೇನಲ್ಲೆ
ನಿನ್ನ ಮೈ ಮಣ್ಣಲ್ಲೆ ಹೊನ್ನಾದೇವಿ
ಹೊನ್ನಿನದುರಿನ ಹಾಗೆ
ಬಳ್ಳಿ ಬೇರಿನ ಹಾಗೆ
ನಾ ಬಂದು ನಿನ್ನಿಂದ

ಅಗೋ ಮೋಡಗಳ ಕೋಡು
ಹೇಗೆ ಕುಣಿದಿದೆ ಸೋಗೆ
ಕಿವಿ ಪಡೆದು ನಿನ್ನಧರ ಅದುರುವ ಹಾಗೆ
ಗಂಗಾಧರನ ಹೆಸರಿಗದುರಿ

ಬಳುಕತೊಡಗಿದೆ ಚಿಗುರು
ಹರಡಿಕೊಂಡಿದೆ ಹೊಗರು
ಕೋ ನಿನ್ನ ಸೂರ್ಯ
ಕೋ ನಿನ್ನ ಚಂದ್ರಾಮ
ಎದೆಯ ಡಮರುಗ ಬಡಿದು
ಇರುಳು ಬೆಳಕಿನ ಜೋಡಿ
ಜೋಗಿ ಜೋಗಿತಿ ಹಾಗೆ
ನನ್ನ ನಿನ್ನ ಹಾಗೆ

ಸೆಪ್ಟೆಂಬರ್, ೧೯೮೬

ಮತ್ತೆ ನೀ ಹುಟ್ಟುವುದು

ಹೋಗು ದಕ್ಷನ ಮಗಳೆ
ನೀನು ತಿರುಗಿ ಬರುವೆ ಅಂತ
ಕರಗದೆ ಕಾಯುತ್ತವೆ ಈ ನೂರು ಮಂಜಿನ ಬೆಟ್ಟ
ಅಲ್ಲಿ ಕೊರೆವ ಗವಿ ಕತ್ತಲಿನಲ್ಲಿ
ಅರಳುತ್ತಲೇ ಇರುತ್ತವೆ ನೀಲಿ ಮಂಜು ತಾವರೆ

ಕೈಯ ಕೊಳ್ಳಿ ಮಾಡಿ
ಜೀವದೆಣ್ಣೆ ಬತ್ತಿ ದೀಪಗಳ
ಉರಿಸುತ್ತ ಕಣ್ಣಲ್ಲಿ ಸುತ್ತ
ನಿನ್ನ ಬರವಿನ ಹಗಲು ಇರುಳಿನ
ಗೆಜ್ಜೆಯುಲಿವಿಗೆ ಹೆಜ್ಜೆಗಳನಿಕ್ಕುತ್ತ
ಹೊಟ್ಟೆ ಎದೆಗಳ ಡೊಳ್ಳು ಬಾರಿಸುತ
ಪಾತಾಳ ಮೆಟ್ಟಿ
ಗೌರಿಶಂಕರ ನೆತ್ತಿ ನಡುಗುವ ಹಾಗೆ
ಆಗಸದ ವಿಶಾಲ ಭಿತ್ತಿ ಹರಿಯುವ ಹಾಗೆ
ನೆಗೆನೆಗೆದು ಕುಪ್ಪಳಿಸಿ ಬೆವಬೆವತು
ದಣಿದುರುಳಿ ಮತ್ತೆದ್ದು
ಕುಣಿಯುತ್ತಲೇ ಇರುತ್ತಾರೆ
ಈ ನಂದಿ ಆ ಭೃಂಗಿ
ಭೂತಗಣಗಳ ಮಧ್ಯ

ದೇವಪುತ್ರಿಗೂ ಅಜೀವ ತಿರುಕನಿಗೂ
ಯಾವ ಯಾತರ ನಂಟು?
ಹೊತ್ತಾಯಿತು ಹೊರಡು
ಕಟ್ಟಿಕೋ ನೆನಪಿನ ಗಂಟು
ಮುತ್ತುಗಳ ಸರ ನತ್ತು ಬೆಂಡೋಲೆ

ಅಪ್ಪುಗೆ ಸೋಕುಗಳ ಜರತಾರಿ ಸೀರೆ
ಕಟ್ಟಿಕೋ ಕಟ್ಟಿಕೋ ನೆನಪಿನ ಗಂಟು

ಒಡಲ ಸುಡುಗಾಡಲ್ಲಿ
ಎಲುಬು ಚೂರು ಕರುಕು ಬಾಡು
ಬಿಸುಟ ವಿಮಾನಗಳ
ನಡುವೆ ನಾನಿಲ್ಲಿ ಒಬ್ಬೊಂಟಿ
ಪಕ್ಕ ಈ ಮುದಿಯೆತ್ತು

ನೀ ಬರುವೆ ಬರುವೆ ಎಂಬ ಕನಸಿನ
ಇರುವೆ ಕಚ್ಚಿದರೂ
ಮರೆತು ಒರಗಿರುವ ಭೂತಗಣಗಳ
ನಡುವೆ

ಶಕ್ತಿಯಿಲ್ಲದೆ ಶಿವನ ಮೈಯೆಲ್ಲ ಶವವಾಗಿ
ಬತ್ತುವಳು ಗಂಗೆ ತಲೆಯಲ್ಲಿ
ಕಂದುವನು ಚಂದ್ರ ಮುಡಿಯಲ್ಲಿ

ನನ್ನ ಎದೆಗೊರಗಿ ಹಗಲುಗನಸುತ್ತಿದ್ದ
ನಿನ್ನ ಹೆರಳುಗಳ ಕಪ್ಪು ಹೊಳಪಲ್ಲಿ
ಹೊಕ್ಕು ಬಾಗಿದ ಸೂರ್ಯ ಕಿರಣಗಳ ಬಿಲ್ಲು
ಒಡೆದು ಕಾಮನಬಿಲ್ಲು
ಎಷ್ಟು ಕಾಮನಬಿಲ್ಲು ಲೋಕಗಳು
ಭೂತಗಳ ಬೂದಿಬುಡುಕನ
ಬುಡುಬುಡುಕೆಯವನ
ಸುಡುಗಾಡು ಮೈಯಲ್ಲಿ

ಹೋಗು ದಕ್ಷನ ಮಗಳೆ
ದಶದಿಕ್ಕುಗಳ ಜ್ವಾಲೆ ಕರೆಯುತ್ತಿದೆ ನಿನ್ನ
ಮೂಲೋಕಗಳ ಯಜ್ಞಶಾಲೆ ಕರೆಯುತ್ತಿದೆ ನಿನ್ನ
ಮರೆತ ವಿಲಯದ ಧೂಮಮಾಲೆ ಕರೆಯುತ್ತಿದೆ ನಿನ್ನ
ಬಾರೆ ಸತಿ ಬಾಯೆಂದು
ಪತಿಯಿದ್ದರೂ ನಿನಗೆ ಸತಿಯೆಂದು

ಕ್ಷಾಮ ಡಮರ ಢಮರು ತೊಗಲು ಹರಿಯುವ ಹಾಗೆ
ಕ್ರೂರ ಕರ್ಕಶ ಮೊರೆತ ಹಾಡು ಅನ್ನುವ ಹಾಗೆ
ಅಸುರರೆ ಸುರರಾಗಿ ಸುರರೆ ಅಸುರರ ಹಾಗೆ

ಕೇಕೆ ಕೇಳಿ ನಡುವೆ
ಮಂತ್ರ ಘೋಷಣೆ ನಡುವೆ
ನರರ ನರಕಿಗರ ಮಾಂಸ ಭಕ್ಷಣೆ ನಡುವೆ

ನೀ ಹೋಗಿ
ಶಿವನೆಲ್ಲಿ ಭವನೆಲ್ಲಿ
ಅಂತ ಬಿದ್ದಾಗ ಉರಿಯಲ್ಲಿ
ನಿನ್ನ ಜೊತೆ ಬೂದಿ
ಸುರಭೂಜಧೇನುಗಳು
ಚಿಂತಾಮಣಿಗಳು

ಕೇಕೆ ಕೇಳಿಯ ನಡುವೆ
ಮಂತ್ರ ಘೋಷಣೆ ನಡುವೆ
ವರವರಗುಟ್ಟಿ ನರಕ ನನ್ನೊಳಗೆ
ನಾನು ನರಕಗಳೊಳಗೆ
ಒಡಲು ಸುಡುಗಾಡೊಳಗೆ
ಎಲುಬು ತುಣುಕುಗಳೊಳಗೆ
ಜೀವ ಸಂಚಾರಗಳು

ಹುಳುಗಳೂ ಫಣಿಯಾಗಿ
ಹೆಡೆಯೆತ್ತಿ
ಒಲೆದು ನೋವು ಪುಂಗಿಗೆ
ಅಚರವೂ ಚರವಾಗಿ
ಸಿಡಿಲು ಡಮರುಗ ಅಗೋ
ನರರೂಪಿ ಮಿಂಚುಬಳ್ಳಿ ಸಂಚಯ ಇಗೋ

ಕಡಲೆಲ್ಲ ಬಡಬಾನಲದ ತವರಿನ್ನು
ಇನ್ನು ರಕ್ತದ ವರ್ಷಾಕಾಲ
ಮಲಯ ಮಾರುತ ಇನ್ನು
ಪ್ರಳಯ ಜಂಝಾವಾತ
ಇನ್ನು ತಾಂಡವ ನೃತ್ಯ

ಅಗೋ ಬಂದ
ಇಗೋ ನಿಂದ
ಭೂತಗಣಗಳ ನಾಥ

ವೀರಭದ್ರ
ಆಹಹಾ ಕರುಣಾ ಸಮುದ್ರ

ದೇವಿಯರ ಅಳಲು ಮುಟ್ಟಿದರು ನಭವನ್ನು
ಕಿವುಡಾಗಿ ಕುರುಡಾಗಿ ಕಡಿಯುವನು
ದೇವದೇವರ ರುಂಡ
ಕೆಡಹುವನು ಸ್ವರ್ಗ ವೈಭವ ಸ್ತಂಭ

ಕೇಕೆಕೇಳಿಗಳೆಲ್ಲಿ
ಮಂತ್ರಘೋಷಣೆಯೆಲ್ಲಿ

ಅವನಿಕಾಂತನೆ ಅವನೆ ಬೇಕೆಂದು ಎಂದು
ಭವಭವದಿ ಬೆಂದು
ಮತ್ತೆ ನೀ ಹುಟ್ಟುವುದು ಬೆಟ್ಟಗಳ ಮಗಳಾಗಿ
ಘಟ್ಟಗಳ ಬದಿಯಲ್ಲಿ
ಬಯಲು ಬಟ್ಟೆಗಳಲ್ಲಿ
ಕಾಡುಗಳ ಒಡನಾಡಿ ಬಾನಾಡಿ ಕೋಗಿಲೆ ಗಿಳಿಯ
ಜೊತೆ ಮಾತಾಡಿ
ಸಿಂಹಶಾರ್ದೂಲಗಳ ಜೊತೆ ಆಟಗಳಾಡಿ
ಬೆಳಕು ಬೇಡರ ರಸಸಿದ್ಧಯೋಗಿಗಳ
ಜೊತೆ ಜೊತೆ ಅಲೆದಾಡಿ
ಹೊಸಜಗದ ಕಡಲ ಕರೆ
ನದೀ ತೀರಗಳ ಪಕ್ಕ
ಹಸಿರಾದ ನಗರಗಳ
ಹಸಿವಿರದ ಹಳ್ಳಿಗಳ ಗಲ್ಲಿ ಬೀದಿಗಳಲ್ಲಿ
ಅರಸಿ ಅರಸುತ ಬರುವೆ
ಕೋಟಿ ದೇಹಗಳಲ್ಲಿ
ಕೋಟಿ ಕೊರಳುಗಳಲ್ಲಿ
ಬೆಳದಿಂಗಳೆ ಬಿಸಿಲೆ
ಕೋಗಿಲೆಯೆ ಮಾಮರವೆ
ಹೇಳಿ ಎಲ್ಲಿದೆ ಹಾದಿ
ನಾ ತೊರೆದು ಬಂದ ಭವಹರನ ಭವನಕ್ಕೆ

ಕಾದಿರುವೆ ಕಾದಲೆ ನಾನು ನಿನಗಾಗಿ
ಮರುಭೂಮಿ ಹಿಮರಾಶಿ ಸುಡುಗಾಡುಗಳ ಜೊತೆಗೆ
ಯೋಗಮುದ್ರೆ ತಳೆದು

ದೇವ ಮಾನವನಾದ ಆ ಯುಗದ ಮೊದಲು
ನೀನು ನನ್ನ ಇಹಗಳ ಒಡತಿ
ನಾನು ನಿನ್ನ ಮಹಗಳ ಒಡೆಯ

ಬೆಸೆದು ಅರೆಚಣ
ಬಿರಿಸಿ ಮರುಚಣ ಬಿಡಿಸುವ
ಅಪ್ಪುಗೆಯೆ ಸಿಹಿಮುತ್ತೆ
ಈ ಕ್ಷಣ
ನಮಗೆಲ್ಲ

ತೀಡಿಕೋ ಮುಂಗುರುಳು
ಹೋಗು ಹೋಗಿ ಬಾ
ದಕ್ಷನ ಮಗಳೆ

ಆಗಸ್ಟ್, ೧೯೮೮

ವಿಧವೆ ಹೊಟ್ಟೆಯಲ್ಲಿ ಸತ್ತು ಹುಟ್ಟಿದವನ ಬಾಲಲೀಲೆಯ ಕಬ್ಬ

ಪಾತ್ರಗಳು : ೧. ಹೆಂಡಿರು ಮಕ್ಕಳು ಇಲ್ಲದವನು
೨. ಗಂಡ ಮಕ್ಕಳು ಸತ್ತವಳು

ಎರಡನೇ ಪಾತ್ರ ಉದ್ದಕ್ಕೂ ಮೌನ

೧

ಮಿಂಚುಗಳೆ
ಹಾಗೇ ಇರಿ ನೀವು ಕೊಂಚಹೊತ್ತು
ನಿಮ್ಮ ಬೆಳಕಲ್ಲಿ
ನೆಲದ ನಿದ್ದೆ ಮುಸುಕು ತೆಗೆಯಬೇಕು
ಕಂಬನಿಯ ಮೂಲಗಳನ್ನು ಕಾಣಬೇಕು

ಮಳೆಹನಿಗಳೆ
ಸುರಿಯುತ್ತಿರಿ ನೀವು ಕೊಂಚ ಹೊತ್ತು
ನಿಮ್ಮ ನೀರಲ್ಲಿ
ಮುಚ್ಚಿಟ್ಟ ಗಾಯಗಳನ್ನು ತೊಳೆಯಬೇಕು
ಜ್ವರದ ಕಿಚ್ಚುಗಳನ್ನು ತಣಿಸಬೇಕು

೨

"ಚಂದ್ರ ಸೂರ್ಯರ ರಾವು ಕಚ್ಚಿತಲ್ಲಾ
ಹಾಲ್ಗೂಸುಗಳಿಗೆ ನಂಜೇರಿತಲ್ಲಾ

ಹಾಬೇನೆ ಕರುಳಿಗೂ ತಾಕಿತಲ್ಲಾ
ಬುಸಬುಸಾ ಉಸಿರಲ್ಲೂ ಹೊರಳಿತಲ್ಲಾ

ಮದುವೆಮನೆಯನ್ನು ಯಮನ ಮನೆ ಮಾಡಿಟ್ಟೆ
ಬಸಿರ ಕುಡಿಮೇಲೆ ಬರಸಿಡಿಲು ಬಡಿಸಿದೆ

ಯಾಕೆ ಉಳಿಸಿದ್ದೀಯ ನನ್ನನ್ನ ಇನ್ನೂ
ನಕ್ಷತ್ರಖಚಿತ ಜಗತ್ತೇ"
ಎಂದು ನೀನು ಗೋಳಾಡುತ್ತಿದ್ದೆ. ಅಲ್ಲಿ
ಹಾಲಾಹಲ ಕಡಲಾಸಿ ಎಲುಬುತೆಪ್ಪ ಹಿಡಿದು
ನಾನು ಬಂದೆ
ನಿನ್ನ ಶೋಕ ಸರ್ಪದ ಬಾಯ್ಗೆ ಹೃದಯ ಕೊಟ್ಟೆ
ಬಿದ್ದು ಸತ್ತೆ, ಮತ್ತೆ ಹುಟ್ಟಿ ಬಂದೆ,
ನಿನ್ನ ಮಗನಾಗಿ ಬೆಳೆದೆ
ತಂದೆ ಇಲ್ಲದೆ, ನೀ ತಿರುಗಿ ತಾಯಿಯಾದೆ
ಗಂಡನಿಲ್ಲದೆ

ಚಂದ್ರ ಸೂರ್ಯರ ರಾವು ಬಿಟ್ಟಿತಲ್ಲಾ

೩

ಹಾಳು ಪ್ರೀತಿಯೇ ಹಾಗೆ
ಕೊಚ್ಚು ಈ ಕೊಂಬೆಯನ್ನು ಹುಚ್ಚಾಗಿ
ಇನ್ನೆಲ್ಲೋ ಚಿಗುರುವುದು

ಬೋಳು ಗುಡ್ಡದ ಮೇಲೂ
ವೃಥಾ ಸುರಿಯುವುದು

ತಲೆಸಿಡಿಸೋ ತಮಟೆಗಳ ನಡುನಡುವೆ
ಓಲಗದ ಇನಿಗಾನ .....

ಹಾಳು ಪ್ರೀತಿಯೆ ಹಾಗೆ
ಕೆದರುಗೂದಲು ಹಣೆ ಖಾಲಿ ಮೋಡ ಮೋರೆಗೆ
ಬರೆದ ಮಿಂಚಿನ ಸೋಗೆ
ನೀನು ಬಂದೆ
ಬಸಿರ ಬಂಜೆತನ ಹೃದಯ ಕಂದದ ತುಂಬ
ಫಲ ನೀಡಿತು
ಫಲದ ರಸ ಹಸಿವಿಗಾಯ್ತು

೪

ಯಾತಕ್ಕಾಗಿ ತಪಸ್ಸು ಹಿಡಿದು ನಿಂತಿದೆ ಲೋಕ ;
ನರಕುಳದ ಕಿರುಕುಳ ಕಿಕ್ಕಿರಿದ ಕೈದು ಪಾಳೆಯಗಳಲ್ಲಿ ;

ಉತ್ತುತ್ತು ಮೊಂಡಾಗುತ್ತಿರುವ ನೇಗಿಲು ಕುಳಗಳಲ್ಲಿ ;
ಉತ್ತುತ್ತೆ ಮರಬೆಳೆವ ಮರುಭೂಮಿಯಲ್ಲಿ;
ಕ್ರೂರ ವಸಂತಗಳಲ್ಲಿ ಕಲ್ಲಾಗುತ್ತಿರುವ ದೇವಮೂರ್ತಿಗಳಲ್ಲಿ ;
ಮುರಿವ ಮಾಗಿಯ ಎಲುಬುಮನೆ ಬಿರುಕಲ್ಲಿ
ಹೊಮ್ಮುತ್ತಿರುವ ತುಂಡುಗಾರಿಕೆಯ ತುತ್ತತುದಿ ಧೂಳುಕಣಗಳಲ್ಲಿ ;
ರಸದ ಬಾವಿಗಳಿಂದ ಸೇದಿದ್ದನ್ನೆಲ್ಲ ವಿಷದ ಗದ್ದೆಗೆ ಬಿಟ್ಟು
ಈನಾಡಿ ನೆತ್ತರಿನ ಮಾನಾಡಿ ಫಸಲು ತೆಗೆದು
ಕಣ್ಣು ಬಾಯಿ ಬಿಡುತ್ತ ಬಡಬಡಿಸುತ್ತಿರುವವರ ಮುಖಭಾವದಲ್ಲಿ ;
ಕುಬೇರನೊಡನೆ ಕಿತ್ತಾಡಿ ಹಸಿವಿನ ಮಾರಿ ಮಾರಾಮಾರಿ
ಹಂಚಿಕೊಳ್ಳುತ್ತಿರುವ ಸುಟ್ಟ ನೆಲದ ಮುತ್ತೈದೆ ಕತ್ತಲ್ಲಿ
ಹೊನ್ನ ಮಾಂಗಲ್ಯದಂತೆ ಕೊರೆಯುತ್ತಿರುವ ಟಂಕಸಾಲೆಗಳಲ್ಲಿ ;
ಪ್ರತಿನಿತ್ಯವೂ ಪಾಪಗಳ ಗಡ್ಡ ಕೆರೆದೂ ಕೆರೆದು
ಮತ್ತೊಬ್ಬ ಸೂರ್ಯನಿಗೆ ನಿದ್ದೆಗೆಟ್ಟು ಕಾಯುತ್ತಿರುವ ಚೌರಕತ್ತಿಯಲ್ಲಿ ;
ಶಿವಶಕ್ತಿ ಸಾಧನಗಳಾದ ಯಂತ್ರ ತಂತ್ರಗಳಲ್ಲಿ ;
ಸೂಜಿಗಣ್ಣು ಹುಡುಕುತ್ತಿರುವ ಸೂತ್ರದಲ್ಲಿ ;
ಯೌವನದ ಮುಪ್ಪಲ್ಲಿ, ಮುಪ್ಪ ಯೌವನದಲ್ಲಿ ;
ತಿಥಿ ಮದುವೆ ಕದನ ಶಾಂತಿ ಒಪ್ಪಂದ ಗಿಪ್ಪಂದ
ಯಾವುದಿದ್ದರೂ ಹುಚ್ಚನ ಹಾಗೆ ಅಚ್ಚ ಹಸಿರು ಹಚಡ
ಹೊಚ್ಚಿಕೊಂಡಿರುವಂಥ ಬೇವಿನಮರ ತೋಪುಗಳಲ್ಲಿ ;
ಕಣ್ಣುಗಳನ್ನು ಚಂದ್ರ ಸೂರ್ಯರ ಮಾಡಿ
ಎಲುಬು ನೆತ್ತರಿನ ಕತ್ತಲೊಡಲಲ್ಲಿ
ಶುದ್ಧ ಬೆಳಕಿನ ಬುಗ್ಗೆ ಅರಸುತ್ತಿರುವ
ಯೋಗಿಗಳ ಭೋಗಿಗಳ ರೋಗಿಗಳ ಹಗಲಿರುಳ ಪ್ರಯತ್ನಗಳಲ್ಲಿ ;
ಕೈಯ್ಯ ಸೌದೆಗಳಲ್ಲಿ ;
ಕೆಂಡ ನಾಲಿಗೆಯಲ್ಲಿ ;

ತಪಸು ಹಿಡಿದಿದೆ ಲೋಕ ಯಾತಕಾಗಿ?
ನೆನಪಾದ ಬಯಕೆಗಳಲ್ಲಿ
ಬಯಕೆ ನೆನಪುಗಳಲ್ಲಿ
ಪಾಪ ಪುಣ್ಯಗಳಲ್ಲಿ
ಅಗ್ನಿಕೊಂಡ ಹಾದು ಬಂದಿದೆ ಸಾಗಿ
ಈ ಗಳಿಗೆಗಾಗಿ

ಹೇಳಿದೆ ನೀಲಿ ನಡುನೆತ್ತಿಗಣ್ಣ ಕೆಂಡದುಂಡೆಗಳಿಂದ
ಇನ್ನೂ ಮುಂದೆ ಹೋಗಿ

೫

ಹೀಗಾಗಿ
ಈ ಮೃತ್ಯುವಿನ ಗಳಿಗೆ ಶುಭಗಳಿಗೆ
ಮರುಜನ್ಮಗಳಿಗೆ

ಬರದ ನಾಡಿಗೆ ಬರುವ ನವವಸಂತನ ಹಿಂದೆ
ನೀನು ಹೊರಡುತ್ತೀಯ
ಬಸಿರ ಕುದಿಯಲ್ಲಿ ಮರಳಿ ನಿನ್ನನ್ನು
ಅವಿಸಿಟ್ಟುಕೊಂಬ ರುದ್ರಭೂಮಿಗಳೊಳಗೆ

ನೀಲಿಗೊರಳಿನ ಕಪ್ಪುಮೋಡಗಳೊಳಗೆ
ಶಿವಗಂಗೆ ಜಲವನ್ನು ಹೊರಿಸಿ ಹೋಗುತ್ತೀಯ

ಮುರುಕು ಮನೆ ದೀಪ ಉರಿಸುವ ಭೂಪ
ನಿನಗೀವ ಜರತಾರಿ ಸೀರೆ ಮಾರಿ
ನಾನು ನನ್ನದೆನ್ನುವ ಸಂತೆ ಜವಳಿಯಂಗಡಿಯಲ್ಲಿ
ಬಯಲಲ್ಲಿ ನನಗೊಂದು ಮನೆ ಕಟ್ಟಿಸಿದ್ದೀಯ

ಸಾಯುತ್ತ ನನ್ನನ್ನುಳಿಸಿದ್ದೀಯ
ಬದುಕುತ್ತ ನನ್ನ ಕೊಂದಿದ್ದೀಯ
ನನಗೆ ನಾನು ನಿನಗೆ ನೀನು
ಲೋಕಕ್ಕೆ ಲೋಕ
ಪರಲೋಕಕ್ಕೆ ಪರಲೋಕ
ಸಿಕ್ಕುವ ಹಾಗೆ ಮಾಡಿದ್ದೀಯ

ಕಿಕ್ಕಿರಿದ ಒಬ್ಬೊಂಟಿತನದಲ್ಲಿ
ಬಿಕ್ಕಲರ ಹುಚ್ಚು ಹಾಡುಗಳಲ್ಲಿ
ಈ ಮೃತ್ಯುವಿನ ಯುಗದಲ್ಲಿ
ಮರುಜನ್ಮವಿರದ ಮರುಜನ್ಮದಲ್ಲಿ
ಸತ್ತು ಬದುಕಿದ್ದೀಯ
ಕೊಂದು ಉಳಿಸಿದ್ದೀಯಾ

ಆದ್ದರಿಂದ
ಸಿಹಿಗಳಿಗೆ ವಿಷಗಳಿಗೆ ಇಗೊ ಇದೇ
ಶುಭಗಳಿಗೆ
ಮರುಜನ್ಮಗಳಿಗೆ

೬

ಮಿಂಚುಗಳೇ
ಹಿಂತಿರುಗಿರಿ ಇನ್ನು
ನಿಮ್ಮ ಥಾಳಾದ ಬೆಳಕಲ್ಲಿ
ನೆಲದ ನಿದ್ದೆ ಮುಸುಕು ತೆಗೆದುದಾಯ್ತು
ಕಂಬನಿಯ ಮೂಲಗಳ ಕಂಡುದಾಯ್ತು

ಮಳೆಹನಿಗಳೇ
ಹೋಗಿ ಬನ್ನಿ ಇನ್ನು
ನಿಮ್ಮ ತಿಳಿನೀರಲ್ಲಿ
ಮುಚ್ಚಿಟ್ಟ ಗಾಯಗಳನ್ನು ತೊಳೆದುದಾಯ್ತು
ಜ್ವರದ ಕಿಚ್ಚುಗಳನ್ನು ತಣಿಸಿಯಾಯ್ತು

ಫೆಬ್ರವರಿ, ೧೯೮೯

ಕೆಂಪು ಗುಲಾಬಮ್ಮ

"ಹೇಗಮ್ಮ ಬಾಳಿದೆ ಕೆಂಪು ಗುಲಾಬಮ್ಮ
ಈ ಪಾಟಿ ಮುಳ್ಳಿನ ರೆಂಬೆಗಳ ನಡುವೆ
ಬಿಸಿಲು ಗಾಳಿ ಮಳೆಯ ದರ್ಬಾರಲ್ಲಿ
ಈ ದರ್ವೇಶಿ ಗಿಡದ ಮೇಲೆ?"

"ಈ ರೆಂಬೆಗಳ ಮುಳ್ಳಿಗೂ ಚೂಪಾದ
ನಿನ್ನ ಉಗುರು ಮೊನೆಯ ದಿಗಿಲಿನಲ್ಲಿ
ಉಗುರಿಗಿನ್ನಾ ನೀಟಾಗಿ ಚಿವುಟುವ
ನಿನ್ನ ಕತ್ತರಿಗಳ ನೆರಳಿನಲ್ಲಿ"

ಮಾರ್ಚ್, ೧೯೮೮

ಚಿಟ್ಟೆ

ತೋಟದಲ್ಲೆಲ್ಲ ಒಂದು ಚಿಟ್ಟೆ ಹಾರುತ್ತಿತ್ತು
ಚಿಟ್ಟೆಯೊಳಗೂ ಒಂದು ತೋಟ ಹಾರುತ್ತಿತ್ತು
ತೋಟ ಇದ್ದ ಹಾಗೇ ಇತ್ತು
ಹೂವು ನಲುಗದಂತಿತ್ತು

ಎಲ್ಲವನ್ನೂ ಹೀರಿ ಚಿಟ್ಟೆ ಹಾರಿಹೋಗಿತ್ತು

ಆಟಕ್ಕೆಂದು ಚಿಟ್ಟೆ ಹಿಡಿಯುವ ಚಿಕ್ಕವರೆ
ಲಾಭಕ್ಕೆಂದು ತೋಟ ಬೆಳೆಸುವ ದೊಡ್ಡವರೆ
ಈ ವಿಷಯ ನಿಮಗೇನು ಗೊತ್ತು

ಮಾರ್ಚ್, ೧೯೮೮

ಗುಬ್ಬಚ್ಚಿ

ಗುಬ್ಬಚ್ಚಿ ಹಾರಿಹೋದಾಗ
ಬಳ್ಳಿ ಕೆಡವಿದ
ಎರಡು ಹೂವು

ಮಾರ್ಚ್, ೧೯೮೮

ನ್ಯಾಷನಲ್ ಪಾರ್ಕ್‌ನಲ್ಲಿ

'ಮಿಸ್, ಆ ಬಕಕ್ಕೆ ಏನಾಗಿದೆ
ಅದು ಯಾಕೆ ಹಾಗೇ
ನಿಂತ್ಕೊಂಡಿದೆ?'

'ಬಕ ಧ್ಯಾನದಲ್ಲಿದೆ'

'ಓಹ್! ಒಂಟಿಕಾಲಲ್ಲೆ ನಿಂತಿದೆ
ನೀವು ಇಂಪೊಸಿಷನ್ ಕೊಟ್ಟ ಹಾಗೆ'

'ನಾನ್ಸೆನ್ಸ್! ಬಕ ಧ್ಯಾನದಲ್ಲಿದೆ'

'ಅದರ ಮೈಯಿ ರೆಕ್ಕೆ ಎಷ್ಟು ಬೆಳ್ಳಗಿದೆ,
ರಾಣಿಪಾಲ್‌ನಲ್ಲಿ ತೊಳೆದ ಹಾಗೆ'

'ನಿಮ್ಮ ಯೂನಿಫಾರಮ್ಮೂ ಬೆಳ್ಳಗಿರಬೇಕು,
ಅದರ ಹಾಗೆ'

'ಮಿಸ್, ಅದರ ಕಣ್ಣು ಏನು ನೋಡ್ತಿದೆ?'

'ಒಳಗೆ.
ಬಕ ಧ್ಯಾನದಲ್ಲಿದೆ'

'ಇಲ್ಲ, ಈಗ ಹೊರಗೆ.
ಯಾವುದೋ ಹುಳವನ್ನು ಕೊಕ್ಕಿನಿಂದ ಹೆಕ್ಕಿ
ಲಬಕಾಯಿಸ್ತಿದೆ'

'ಧ್ಯಾನದಲ್ಲಿದ್ದರೆ ಇದು ಹೇಗಾಗುತ್ತೆ?
ಹೇಗೆ ಹಸಿವಾಗುತ್ತೆ?'

'ಹೇಗೋ ಆಗುತ್ತೆ
ಈಗ ನೋಡಿ, ತಿರುಗಿ
ಬಕ ಧ್ಯಾನದಲ್ಲಿದೆ
ಎಷ್ಟು ಬೆಳ್ಳಗಿದೆ!
ಎಷ್ಟು ಮೌನವಾಗಿದೆ!'

ಸೆಪ್ಟೆಂಬರ್, ೧೯೮೮

ಕುಬೇರ ರಾಜ್ಯದ ಕುರುಡನನ್ನು ಕುರಿತ ಲಾವಣಿ ಪದ

ಕುಬೇರ ರಾಜನ ದುಬಾರಿ ರಾಜ್ಯದ
ಭಿಕಾರಿ ಕುರುಡನ ಕಥೆ ಕೇಳಿ।
ಕುರುಡನ ಕಥೆ ಎಂದು ಕಿವುಡಾಗದಿರಿ
ಕೇಳುವವರೆಗೂ ಮುದ ತಾಳಿ॥

ಹುಟ್ಟು ಭಿಕಾರಿ ಹುಟ್ಟು ಕುರುಡನು
ಮಿತ್ರನೊಬ್ಬನನು ಕೇಳಿದನು।
ಹಾಲು ಹಾಲು ಎಂದು ಜನ ಹೇಳುವರು
ಹಾಲು ಅನ್ನುವುದು ಅದು ಏನು॥

ಹಾಲು ಅನ್ನುವುದು ಬಿಳುಪಾಗಿರುವುದು
ಎಂದು ಬಣ್ಣಿಸಿದ ಆ ಮಿತ್ರ।
ಆವತ್ತಿಂದಲೇ ಕುರುಡ ಎಣಿಸಿದನು
ಹಾಲೆಂಬುದು ಬರಿ ಬಿಳಿ ಮಾತ್ರ॥

ಎಷ್ಟೋ ದಿನಗಳ ಕಷ್ಟ ಬವಣೆಗಳ
ದಾಟಿ ಇನ್ನೊಬ್ಬನ ಕೇಳಿದನು।
ಎಷ್ಟು ಆಲೋಚಿಸಿದೆ ತಿಳಿಯಲೆ ಇಲ್ಲ
ಬಿಳಿ ಅನ್ನುವುದು ಅದು ಏನು॥

ಇನ್ನೊಬ್ಬ ಹೇಳಿದ ಬಲು ಆಲೋಚಿಸಿ
ಬಿಳಿ ಎಂಬುದು ಕೊಕ್ಕರೆ ಬಣ್ಣ।
ಅಂದಿನಿಂದಲೂ ಕೊಕ್ಕರೆ ಹಾಲು
ಎಂದು ತಿಳಿದ ನಮ್ಮ ಕುರುಡಣ್ಣ॥

ಹಿಟ್ಟೂ ಸಿಕ್ಕದ ಎಷ್ಟೋ ದಿನಗಳ
ಬಿಟ್ಟು ಕುರುಡನು ಕೇಳಿದನು।
ಕೊಕ್ಕರೆ ಬಿಳಿ ಎಂದು ಕೇಳಿ ಬಲ್ಲೆ ಸರಿ
ಕೊಕ್ಕರೆ ಅಂದರೆ ಅದು ಏನು॥

ಕೊಕ್ಕರೆ ಅಂದರೆ, ಸಿಕ್ಕನು ಗೆಳೆಯ
ಸಿಕ್ಕು ಸಿಕ್ಕಾದ ಗೋಜಿನಲಿ।
ಕೊನೆಗೆ ಕೈ ಬಾಗಿಸಿ ಕುರುಡನಿಗಂದನು
ಕೊಕ್ಕರೆ ಹೀಗೆ ಮುಟ್ಟಲ್ಲಿ॥

ಮಡಚಿದ ಕೈಯೇ ಹಾಲಂತ ತಿಳಿದ
ಕುರುಡ ತಿರುಕ ಆವತ್ತಿಂದ।
ಕುರುಡು ನೀಗಿಸುವ ಅರುಹಿನ ಮಹಂತ
ಕೊನೆಗೆ ಅವನ ಬಳಿ ನಡೆತಂದ॥

ಮಡಚಿದ ಕೈಯೇ ಹಾಲೆಂದು ಬಗೆದು
ಮಣ್ಣು ಮುಕ್ಕಬೇಡ ನೀ ಕೋಣ।
ಎಲ್ಲಕೂ ಮೊದಲು ಕಣ್ಣು ಪಡೆಯಬೇಕು
ಇದ ತಿಳಿದಾಗು ನೀ ಮುಕ್ಕಣ್ಣ॥

ಇಲ್ಲಿಗೆ ನಿಂತ ಕುರುಡನ ಕಥೆಗೆ
ಬಲ್ಲವರ್‍ಹೇಳಿ ಮುಂದೇನು।
ಹಾಲು ಕುಡಿಯುವವನೆ ಕುರುಡನೆಂದಾದರು
ಹೇಳಿ ಪಡೆಯುವನೆ ಕಣ್ಣನ್ನು॥

ಅಂಥಾ ಕಥೆಗಳು ಅನಂತ ಅಸಂಖ್ಯ
ಕುಬೇರನಲಕಾವತಿಯಲ್ಲಿ।
ಹುಲುಸಾಗಲಿ ಅಲ್ಲಿ ಹುಲ್ಲುಗಾವಲು
ವರ್ಧಿಸಲಿ ಗೋಸಂಪತ್ತಿ॥

ಮಾರ್ಚ್, ೧೯೮೮

ಒಗ್ಗಟ್ಟಿನ ಹಾಡು
(ಒಂದು ವೃಂದಗಾನ)

ತೋಟದಲ್ಲಿನ ಮರಗಳು ಒಟ್ಟಾಗಿ ಹಾಡುತ್ತಿವೆ:

ಕೊಂಬೆ ರೆಂಬೆ ಬೇರೆ ಬೇರೆ
ಕಾಂಡ ಮಾತ್ರ ಒಂದೆ
ಬೇರು ಬೊಡ್ಡೆ ಬೇರೆ ಬೇರೆ
ಮರವು ಮಾತ್ರ ಒಂದೆ
ಬೇರೆ ಬೇರೆ ಮರದ ಜಾತಿ
ಬೇರೆ ಬೇರೆ ಗಾತ್ರ ರೀತಿ
ಮಣ್ಣು ಮಾತ್ರ ಒಂದೆ

ಬೇರೆ ಬೇರೆ ಥರದ ಮರವ
ಸಾಫು ಮಾಡಲೆಂದು ಬರುವ
ಕೊಡಲಿ ಮಾತ್ರ ಒಂದೆ
ಕಾವು ಮಾತ್ರ ಒಂದೆ
ಐದು ಬೆರಳು ಹಿಡಿವ ಕೈಗೆ
ಹಿಡಿತ ಮಾತ್ರ ಒಂದೆ
ಹೊಡೆತ ಮಾತ್ರ ಒಂದೆ
ನಾವೆಲ್ಲರೂ ಒಂದೆ

ಅದನ್ನು ಕೇಳಿಸಿಕೊಂಡು ಪಕ್ಷಿಗಳು ಹಾಡತೊಡಗಿವೆ:

ಬೇರೆ ಬೇರೆ ಪಕ್ಷಿ ಕೋಟಿ
ಪಕ್ಷ ಮಾತ್ರ ಒಂದೆ
ದನಿ ರಾಗ ಬೇರೆ ಬೇರೆ
ವೃಂದಗಾನ ಒಂದೆ

ನಮ್ಮೆಲ್ಲರ ಹಿಡಿಯಲಿಕ್ಕೆ
ಬೀಸುವಂತ ಲೋಹ ಬಲೆಗೆ
ಭಿನ್ನ ಭೇದ ಏನೂ ಇಲ್ಲ
ನಾವೆಲ್ಲರೂ ಒಂದೆ
ಬಲೆಯು ಕೂಡ ಒಂದೆ

ಮರಗಳು ಮತ್ತು ಹಕ್ಕಿಗಳು ಒಟ್ಟಾಗಿ ಹಾಡತೊಡಗಿವೆ:

ಬೇರೆ ಬೇರೆ ಮರ ಹಕ್ಕಿ
ತೋಟ ಮಾತ್ರ ಒಂದೆ
ಒಂದೆ ನೆಲ ಒಂದೆ ಗಾಳಿ
ಮಣ್ಣು ಕೂಡ ಒಂದೆ

ಬೇರೆ ಬೇರೆ ಬಲೆ ಕೊಡಲಿ
ಅವುಗಳೆರಡು ಒಂದೆ

ಕೂಡಲೆ ನೀವು ಮರ ಮತ್ತು ಹಕ್ಕಿಗಳ ಜೊತೆಗೆ ದನಿಗೂಡಿಸಿದ್ದೀರಿ:

ಬೇರೆ ಬೇರೆ ಅವು ನಾವು
ಆದರೂನು ಒಂದೆ
ನಾವೆಲ್ಲರೂ ಒಂದೆ
ಎಲ್ಲವೂನು ಒಂದೆ

ಜನವರಿ, ೧೯೮೮

ದೆಮಾಕ್ರಿತೂಸ್‌ನ ಸೇಬು

ಕ್ರಿ.ಪೂ. ೭೦೦; ಅಯೋನಿಯಾ ದ್ವೀಪ:

ಹುಟ್ಟಾ ತತ್ವಜ್ಞಾನಿ ದೆಮಾಕ್ರಿತೂಸ್
ಕೈಯಲ್ಲಿ ಒಂದು ಸೇಬು ಹಿಡಕೊಂಡು
ಒಂದೇಸಮನೆ ಧ್ಯಾನಿಸುತ್ತಿದ್ದ:

'ಎಷ್ಟು ಚೂರು ಮಾಡಬಹುದು ಈ ಸೇಬಿನಿಂದ?
ಎಷ್ಟು ಇರಬಹುದು ಆ ಚೂರುಗಳ ಸಂಖ್ಯೆ?
ಆ ಸಂಖ್ಯೆ
ಪರಿಮಿತವೋ? ಅಪರಿಮಿತವೋ?'
ಆ ಅಪರಿಮಿತ ಪ್ರಶ್ನೆಗೆ
ಪರಿಹಾರ ಸದಾ ಹುಡುಕುತ್ತಲೇ ಇದ್ದು
ವಿಫಲನಾಗಿ ಸತ್ತಾಗ
ಯಾವ ಫಲವನ್ನೂ ತಿಂದಿರಲಿಲ್ಲ ಆತ

ಅವನ ಮುಂದಿನ ಕತೆ
ಒಲಿಂಪಸ್‌ನಲ್ಲಿ ಜೆಯಸ್‌ನ ಒಡ್ಡೋಲಗದಲ್ಲಿ ;
ಆ ಪ್ರಶ್ನೆಯಲ್ಲಿ ತಲ್ಲೀನನಾಗಿ
ಅಲ್ಲಿ ಬಂದಾಗ ದೆಮಾಕ್ರಿತೂಸ್
ಕೂಗಿ ಹೇಳಿದ ವಜ್ರಧಾರಿ ಜೆಯಸ್-
'ದಬ್ಬಿ ಈ ಮೂರ್ಖನನ್ನು ಹೊರಗೆ!'

ಯಾಕೆ ಎಂದು ಕೇಳಲಾಗದಷ್ಟು
ಬೆಬ್ಬೆರಗಾಗಿದ್ದ ಆ ತತ್ವಜ್ಞಾನಿಗೆ
ಮತ್ತೆ ಗುಡುಗಿ ಹೇಳಿದ:
'ಮೂರ್ಖ, ಸೇಬು ಹಣ್ಣಿರುವುದು ಹಾಗೆ ಯೋಚಿಸುವುದಕ್ಕಲ್ಲ ,
ತಿನ್ನುವುದಕ್ಕೆ'

ಆಗಸ್ಟ್, ೧೯೮೮

ಬಂದೆಯಾ ವಸಂತ

ಕೊನೆಯ ಗೆಳೆಯರು ಮಾತೆ ಆಡದೆ ಹೊರಟು ಹೋದರು ಈ ದಿನ
ಕೊನೆಯ ಕವಿತೆಯ ಶಬ್ದ ಸಂಪದ ಲೂಟಿಯಾಯಿತು ಈ ದಿನ

ಪಾಪ ಕೋಗಿಲೆ ಕ್ರೂರ ಚೈತ್ರದ ಕೆಂದಳಿರನು ಕಚ್ಚುತ
ಕೊನೆಯ ಹಾಡಲಿ ಮನವ ಕರಗಿಸಿ ಘೂಕ್ಕನೆಂದಿತು ಈ ದಿನ

ನನ್ನ ತಲೆ ನೇವರಿಸುವಂತೆ ತೇಲಿ ಬಂದ ಮೇಘವು
ಮಳೆಯ ಕರೆಯದೆ ಗಾಳಿ ಹೊಡೆತಕೆ ತೂರಿಹೋಯಿತು ಈ ದಿನ

ಎದೆಯ ಪೆಟ್ಟಿಗೆಯಲ್ಲಿ ಬಚ್ಚಿದ ಹಳೆಯ ನಂಬಿಕೆ ನಾಣ್ಯವ
ಕಳವು ಮಾಡಿದ ಚೂರಿ ತೋರಿಸಿ ಚೋರನೊಬ್ಬನು ಈ ದಿನ

ವರ್ಷಗಟ್ಟಲೆ ಪೂಜೆಮಾಡಿದ ಕನ್ಯೆ ದೇವತೆ ಅಂಗಕೆ
ಮಂಗನೊಬ್ಬ ಕೈಯ ಹಾಕಿ ಕೊಳಕು ಮಾಡಿದ ಈ ದಿನ

ಕೊನೆಯ ಕದನದ ಬಳಿಕ ಶಾಂತಿಯ ಭುವಿಯಲುಳಿದ ಇಬ್ಬರೆ
ಒಬ್ಬರೊಬ್ಬರ ಇರಿದು ಕೊಂದು ಮಡಿದುಬಿದ್ದರು ಈ ದಿನ

ಎಲ್ಲ ನೋವನು ತಿಂಬ ಲೋಕಕೆ ಕವಿಯ ಜೀವದ ಗೆಳೆಯನು
ಮಾತನಾಡದೆ ಹೊರಟುಹೋದ ಹೇಳಕೇಳದೆ ಈ ದಿನ

ನಂಜು ಬೆರಸಿದ ಕಲ್ಲು ಮಣ್ಣಿನ ಬಂಜೆ ವನಗಳ ಬಿರುಕಲಿ
ಬಂದೆಯಾ ವಸಂತ ಎಂದು ಯಾರು ಕಾವರು ಈ ದಿನ

ಕೊನೆಯ ಗೆಳೆಯರು ಮಾತನಾಡದೆ ಹೊರಟುಹೋದರು ಈ ದಿನ
ಕೊನೆಯ ಕವಿತೆಯ ಶಬ್ದಸಂಪದ ಲೂಟಿಯಾಯಿತು ಈ ದಿನ

ಮಾರ್ಚ್, ೧೯೮೯

ಸಿಂಹಾವಲೋಕನ

ಒಂದು ಸಿಂಹ ಕನ್ನಡಿಯೊಳಗೆ ಇಣುಕಿತು
ಅಂದಿತು: ನೋಡಿ, ಕನ್ನಡಿ ನನ್ನ ಹಾಗೆ

ಒಂದು ಮೊಲ ಕನ್ನಡಿಯೊಳಗೆ ಇಣುಕಿತು
ಅಂದಿತು: ನೋಡಿ, ಕನ್ನಡಿ ನನ್ನ ಹಾಗೆ

ಒಂದು ಬೆಕ್ಕು ಕನ್ನಡಿಯೊಳಗೆ ಇಣುಕಿತು
ಅಂದಿತು: ನೋಡಿ, ಕನ್ನಡಿ ನನ್ನ ಹಾಗೆ

ಒಂದು ಇಲಿ ಕನ್ನಡಿಯೊಳಗೆ ಇಣುಕಿತು
ಅಂದಿತು: ನೋಡಿ, ಕನ್ನಡಿ ನನ್ನ ಹಾಗೆ

ಕನ್ನಡಿ ನನ್ನ ಹಾಗೆ, ಕನ್ನಡಿ ನನ್ನ ಹಾಗೆ
ಅನ್ನುವ ಗಂಭೀರ ವಾಗ್ವಾದ
ಶುರುವಾಗಿ ಈ ನಾಲ್ವರಲ್ಲಿ
ನಾಲ್ವರೂ ಒಂದಾಗಿ ಕನ್ನಡಿಯೊಳಗೆ ಇಣುಕಿದರೆ
ಅರೆ,
ಕನ್ನಡಿ ಎಲ್ಲರ ಹಾಗೂ ಇತ್ತು
ಯಾರ ಹಾಗೆಯೂ ಇರಲಿಲ್ಲ

ಎಲ್ಲರಿಗೂ ಸಿಟ್ಟು ಬಂತು
ಒಬ್ಬರೊಬ್ಬರ ಮೇಲೆ ಕನ್ನಡಿಯ ಮೇಲೆ
ಯುದ್ಧ ಶುರುವಾಗಿ
ಬೆಕ್ಕು ಇಲಿಯನ್ನು ತಿಂದು ಹಾಕಿತು;
ಸಿಂಹ ಮೊಲವನ್ನು ತಿಂದುಹಾಕಿತು;
ಕೊನೆಗೆ ಸಿಂಹ ಬೆಕ್ಕಿಗೆ ಹತ್ತಿಕೊಂಡಿತು;
ಸಿಂಹ ಬೆಕ್ಕನ್ನು ತಿಂದು ಹಾಕಿತು

ಕೊನೆಯ ಯುದ್ಧಕ್ಕೆ
ಕನ್ನಡಿ ಮತ್ತು ಸಿಂಹ ಸಿದ್ಧವಾದವು
ತಾನು ಅಂದಂತೆ ಅಂಬ
ಆಡಿದಂತೆ ಆಡುವ
ಕೂಗಿದರೆ ಕೂಗುವ
ಕನ್ನಡಿಯೊಳಗಿನ ಸಿಂಹದ ಬಗ್ಗೆ
ಕನ್ನಡಿ ಹೊರಗಿನ ಸಿಂಹಕ್ಕೆ
ಬ್ರಹ್ಮಾಂಡದ ಸಿಟ್ಟು ಬಂತು
ಸಿಂಹ ಕನ್ನಡಿಯನ್ನು ಒಡೆದು ಹಾಕಿತು
ಕನ್ನಡಿ ಚೂರಾಯಿತು

ಚೂರು ಚೂರಲ್ಲೂ ಸಿಂಹ ಚೂರು ಚೂರಾಗಿ ಕಂಡಾಗ
ಕಿರುಚಾಡಿ ಹೊರಳಾಡಿ ಚೂರುಗಳ ಮೇಲೆ
ಸಿಂಹ ಕೂಡ ಸತ್ತು ಹೋಯಿತು

ಜೂನ್, ೧೯೮೯

ಕಲ್ಲುಕುಟಿಗರು

ನನ್ನ ಬಾಡಿಗೆ ಮನೆ ಪಕ್ಕ
ಯಾವನೋ ಯಜಮಾನ ಬಾಡಿಗೆಗೆ ತಕ್ಕೊಂಡ
ಖಾಲಿಸೈಟಲ್ಲಿ ಕೂಲಿಗೆಂದು
ಇಡೀ ದಿವಸ- ರಜಾ ದಿನ ಕೂಡ-
ಚಿಟಚಿಟ ಎಡೆಬಿಡದೆ ಬಡಿಯುತ್ತಿದ್ದ
ಕಲ್ಲುಕುಟಿಗರ ನಿತ್ಯ ಕರ್ಮಕ್ಕೆ
ನನ್ನ ಸುಕುಮಾರಹೃದಯದ ಲಯ
ಎತ್ತೆತ್ತಲೋ ಹೋಗುತ್ತಿತ್ತು
ಹಾಳಾಗಿಹೋಗ ಈ ಶನಿಗಳು
ಅನಿಸುತ್ತಿತ್ತು
ಆದರೆ
ಈ ಬಾಡಿಗೆ ಮನೆಗಳು
ನಮ್ಮಿಂದ ಕರವಸೂಲಿ ಮಾಡುವ ನಗರಗಳು
ಹೀಗೆ ತಲೆಯೆತ್ತಿ ನಮ್ಮ ತಲೆ ಮೆಟ್ಟ ಬೇಕಾದರೆ
ಅದೆಷ್ಟು ಕೈಗಳು ಸುತ್ತಿ ಹಿಡಿದು
ಚಿಟಚಿಟ ಕಲ್ಲು ಹೊಯ್ಯಬೇಕಾಗಿತ್ತು
ಎಷ್ಟು ಹೃದಯಗಳು ಆ ಲಯಕ್ಕೆ ತಕ್ಕಂತೆ
ರಕ್ತ ಸರಬರಾಜು ಮಾಡಬೇಕಾಗಿತ್ತು
-ಇದು ಗೊತ್ತಾದಾಗಿಂದ
ನನ್ನ ಎದೆಬಡಿತಗಳು
ನನ್ನ ಕವಿತೆಗಳು
ಹೊಂದಿಕೊಳ್ಳುತ್ತಿವೆ, ಒಗ್ಗುತ್ತಿವೆ
ಕಲ್ಲುಕುಟಿಗರ ಎಡೆಬಿಡದ ಸುತ್ತಿ ಬಡಿತಕ್ಕೆ
ಅವರ ನೆತ್ತಿಗೆ ಬಡಿವ ಬಿಸಿಲಿಗೆ
ಕೂಲಿಗೆ ಬಾಡಿಗೆಗೆ
ಹೀಗೆ ತಲೆಯೆತ್ತಿ ತಲೆ ಮೆಟ್ಟುತ್ತಿರುವ ನಗರದಲ್ಲಿ

ಸೆಪ್ಟೆಂಬರ್, ೧೯೮೯

ತಂದೆ ಮತ್ತು ಮಗ

ತಂದೆ ಮಗನನು ಕೈ ಹಿಡಿದು ನಡೆಸುವನು
ನಗುವ ನಂದನದಲ್ಲಿ ಕೊರಕಲಲ್ಲಿ
ಮುಂದೆ ಹೊಗೆ ನಗರ: ಅಲ್ಲಿಯೂ ಕೈಬಿಡದೆ
ಎಂದೆಂದು ಕಾಯುವನು ಗಲ್ಲಿಯಲ್ಲಿ.

ತಾಯಂಥ ತೋಪುಗಳ ನೆರಳಲ್ಲಿ ಹೂವುಗಳ
ಪಕಳೆ ಪಕಳೆ ಕಿತ್ತು ಚೆಲ್ಲವರಿದ
ಹಾದಿ ತೋರುವ ದೆಸೆಗೆ ನೋಟ ನೆಡಿಸಿದ
ಆಮೇಲೆ ಅತ್ತಿತ್ತ ನೋಟಗಳು ಮನ್ನಾ ಅಂದ

ದಟ್ಟ ಹಲಸಿನ ಮರದ ಬುಡದಲ್ಲಿ ಸತ್ತಿದ್ದ
ಹೆಬ್ಬಾವುಗಳ ತೋರಿ ಬೆಚ್ಚಿಸಿದನು
ಚೆಲ್ಲಿದ್ದ ಅಂಗನೆಯರಂಗರಚನಾಶಾಸ್ತ್ರ ಕಲಿಸಿ
ಬೆತ್ತಗಳಿಂದ ಶಿಕ್ಷಿಸಿದನು.

ಜೇನು ದುಂಬಿಗಳನ್ನು ಮಗನತ್ತ ಛೂ ಬಿಟ್ಟು
ಏನೂ ಆಗದ ಹಾಗೆ ತಲೆಗಾಯ್ದನು
ನಿನ್ನ ಕಣ್ಣಿಗೆ ಮಬ್ಬು ಬಂತೆಂದು ಕನ್ನಡಕ
ರೋಮಕೂಪಗಳಲ್ಲಿ ಧರಿಸೆಂದನು

ಮೈಯೆಲ್ಲ ಕಣ್ಣಾದ ಮಗನಿಗೆಲ್ಲೆಲ್ಲೂ ಸೊರಗಿ
ಸಾಯುವ ತಂದೆ ಮುಂದೆ ಬಂದ
ಕೈಯಾರ ಕೊಂದ ಮಗ ತನ್ನ ಹೆತ್ತವನನ್ನ
ಎಲ್ಲಿ ನೋಡಿದರಲ್ಲಿ ಕಡಿದ ರುಂಡ

ಮಗನು ತಂದೆಯ ತಿಂದು ತಂದೆಯೇ ತಾನಾಗಿ
ನಗುವ ನಂದನದಲ್ಲಿ ಕೊರಕಲಲ್ಲಿ
ಭುಗಿಲೆದ್ದ ನಗರದಲ್ಲಿ ಗಗನದಲ್ಲಿ ಮಗನ
ಕೈ ಹಿಡಿದು ನಡೆಸುವನು ಹಿಂದಕೆಲ್ಲಿ?

ಆಗಸ್ಟ್, ೧೯೮೩

ಹೆಬ್ಬಾಳು

ಕಣ್ಮರೆಯಾದ ಹೆಬ್ಬಾಳದ ಶಿವಯೋಗಿ ಅಸದುಲ್ಲಾ ಖಾದ್ರಿ ವಲಿ ಅವರಿಗೆ:

ಮಸಣದಲ್ಲಿನ ಗೋರಿ ಕಲ್ಲುಗಳ ನಡುವೆಯೇ
ಈ ಹೂವು ಅರಳುವುದು
ಗುಡ್ಡಗಳ ಮೇಲೆ ಸೂರ್ಯ ಸೀಳಿದ ಬಂಡೆ
ಬಿರುಕಿನ ಮಧ್ಯ ತುಂಬಿದ್ದ ಮಣ್ಣಲ್ಲೇ
ಈ ಬೀಜ ಮೊಳೆಯುವುದು
ಹಾವು ಬಾವಲಿ ಚೇಳು ತವರು
ಕಾರಿರುಳ ಗವಿಯಲ್ಲೇ
ಈ ದೀಪ ಉರಿಯುವುದು

ಬಂಡೆಗಾನಿಸಿದ ನಿರ್ಜೀವ ಏಕತಾರಿಗೆ
ಆ ಬೆರಳ ಸ್ಪರ್ಶವೇ ಸಾಕು
ಗಾಂಜ ಹೊಗೆ ತಿಂದು ಹಾಕಿದ್ದ ಕೊರಳಿಗೆ
ಎದೆ ತುಂಬಿ ಬಂದ ಭಾವಸ್ಪರ್ಶವೇ ಸಾಕು
ಆ ನಾದ ನವಿರು
ಲಯ ಹೃದಯ ಉಸಿರು
ನಾರೇಯಣ ವಾಣಿ
ಬ್ರಹ್ಮಯ್ಯಗಳ ತತ್ವ
ಸರ್ಪಸದೃಶ ಮನವ ಪುಂಗಿಯೂದುತ ನಿಲಿಸಿ
ಸ್ವರ್ಗನರ್ತಕಿ ಹಾಗೆ ಕುಣಿಸುವ ಪ್ರವೀಣತ್ವ

ಹಾಡೊಂದಕ್ಕೇ ಇಲ್ಲ ಭಾವ ಚಿಮ್ಮುವ ಶಕ್ತಿ
ಮಾತಿಗೂ ಅಷ್ಟೇ
ಕಿವಿಯ ತಂತಿ ಮಾಡಿ ಒಡಲು ದಂಡಿಗೆ ಮಾಡಿ
ತೆತ್ತೀಸ ರಾಗಗಳು
ಭುವಿ ತನಗೆ ಕೊಟ್ಟ ಅನ್ನ ನೀರು ನಗೆ ಕಣ್ಣೀರು

ಗುರು ಕೊಟ್ಟ ಬಗೆಬಗೆ ಕಷ್ಟ
ತರು ಕೊಟ್ಟ ನೆರಳು
ಉರುಲಾಗದಂತೆ ತರುಣಿಯರೊಲವು
ಮರುಳು ಹಿಡಿಸದ ಹಾಗೆ ಮರುಜನುಮ ಕೊಟ್ಟದ್ದು
ವೇದವೆಂದರೆ ಸತ್ತ ಸಂಸ್ಕೃತದ ಮೊರಡಿಯೇ?
ವೇದವೆಂದರೆ ನಾಲ್ಕೇ?
ವೇದವೆಂದರೆ ಎಲ್ಲ ಭಾಷೆಗೂ ಮೀರಿದ್ದು
ಗೀತೆಯೆಂದರೆ ಅದೇ ಭಾವಕ್ಕೆ ಜಾರಿದ್ದು
ಅದೇ ಬೈಬಲ್ಲು ಅದೇ ಖುರಾನು

ಹಸಿರು ಝುಂಡಾ ಕೆಳಗೆ
ಶಿವನುಗ್ರ ತಪಸ್ಸು ಕೃಷ್ಣಲೀಲೆಯ ನೆನಪು
ಖಂಡಿತಾ ಅಲ್ಲ
ಬರೀ ಪುರಾಣದ ಕಂತೆ

ಇದೋ ಇಲ್ಲಿ ಖಗೋಳ ಭೂಗೋಳಗಳಾಚೆ ಚರಿತೆ
ನೆನಪಿನೊಂದೊಂದೂ ಕಣದೊಳಗೆ ಮೈತಳೆದ ಮಿಲಿಕ್ಷಣದ ಚರಿತೆ
ಕತ್ತಲಿನ ಕಾಡು ಕಂಡಕಂಡಂತೆ ನಗರವಾಗರಳಿದ್ದು
ಎಣ್ಣೆದೀಪದ ಉರಿ ಬಲ್ಬಾಗಿ ಉರಿದದ್ದು
ದೇವತೆಗಳ ಜೊತೆಗೆ ಕಾಡು ಮೃಗಗಳು ಕೂಡ
ಕಾಲೆರಡು ಧರಿಸಿದ್ದು
ಕಾರ್ಖಾನೆ ಹೊಗೆ ಕತ್ತಲಲ್ಲೇ
ರೊಕ್ಕ ಹೊನ್ನಿನ ರಾಶಿ ಕಣ್ಣುಗಳ ಕುಕ್ಕಿದ್ದು
ನಂದನಗಳಲ್ಲಿದ್ದು ಕಣ್ಣೀರನುಂಡದ್ದು
ಮರುಭೂಮಿಯಲ್ಲಲ್ಲೊಂದು ಇಲ್ಲೊಂದು
ಓಯಸಿಸ್ ಕಂಡಿದ್ದು
-ಎಲ್ಲವೂ ಗುರುಚರಿತೆ

ಸ್ವಿಚ್ಚಿನಲ್ಲೂ ಗುರು ಬಚ್ಚಲಲ್ಲೂ ಗುರು
ಕಾರು ಏರೋಪ್ಲೇನು ರಾಕೆಟ್ಟು
ನೂರು ಲೋಕಗಳ ಸಂಪುಟದ ಪುಟಪುಟಗಳಲ್ಲಿ
ಅಕ್ಷರದ ಗೆರೆಗೆರೆಯ ಬಿಂದು ಬಿಂದುವಲ್ಲೂ ಗುರು
ಆ ಬಿಂದುವಿನಲ್ಲಿ ಸಿಡಿದು ಹೋಗುವುದಕ್ಕೆ
ಕಲಿ ಬರಲಿ ಎಂದು
ಕಾಯುತ್ತಿದ್ದ ಬಾಂಬಿನಲ್ಲೂ ಗುರು

ಈ ಬ್ರಹ್ಮಾಂಡ ನಾಟಕದ ಕೆಂಪು ಪರದೆಯ
ಗುರು ಎಳೆದು ಬಿಡುವನೆನ್ನುತ್ತಲೇ
ಯಾವ ಜಾದುವೋ ಏನೋ
ಈ ಕಾಯಕ್ಕೀ ಬೇನೆ
ಕೊರಗುತ್ತಲೇ ಕರಕರಗಿ ಮರೆಯಾಯ್ತು
ಖುರಾನಿನ ಪ್ರಾಣ
ಮಕ್ಕಾದ ಮೈಯಿ
ಹಸಿರುಡುಗೆ ಪೇಟ
ಗೋಪುರದ ಹಾಗೆ ಮಿನಾರುಗಳ ಹಾಗೆ
ಗಾಳಿಯೊಳಗೆ

ಮರೆಯಾಗುವುದಿಲ್ಲ ಆದರೂ
ಮರೆಯಾದ ಮೋರೆಯ ಮರೆಯಲಾಗದ ನಗು
ನರ ಜನುಮಕ್ಕೆ ಗುರು ಕೊಟ್ಟ ಅತ್ತರಿನ ಹಾಗೆ

ಕಾದು ಕುದಿ ಬಂದದ್ದು
ಆರಿ ಆವಿ ಮೇಲೇರಿ ಸೇರಿದ್ದು
ದಟ್ಟೈಸಿ ಹೃದಯಾಕಾಶದುದ್ದಗಲ
ಅಗೊ ಮಿಂಚು ಮಹಮದರ ಬೆಳಕು
ಗುಡುಗು ಬಡಿವಾರ ಮಳೆ ಪ್ರೀತಿ
ಥರ ಥರ ಮೊಗ್ಗು ಹೂ ಮನದ ನಂದನ
ನರತನುವೆ ಗುಲಿಸ್ತಾನ ಬೃಂದಾವನ

ಫೆಬ್ರವರಿ, ೧೯೮೮

ನದಿಯ ನಾಡಿನಲ್ಲಿ

ಗೋರಕ್ಷ ನಾಥಪಂಥದ ಮೂರನೆಯ ಮಹಾಯೋಗಿ ಮತ್ಸ್ಯೇಂದ್ರನ ಶಿಷ್ಯ. ಹಿಂದಿಯಲ್ಲಿರುವ 'ಗೋರಖವಾಣಿ', ಸಂಸ್ಕೃತದಲ್ಲಿರುವ 'ಸಿದ್ಧ ಸಿದ್ಧಾಂತ ಕೌಮುದಿ' ಮುಂತಾದ ಅನೇಕ ಗ್ರಂಥಗಳು ಅವನವೆಂದು ಹೇಳಲಾಗಿದೆ.

ಗೋರಕ್ಷನ ಗುರು ಒಮ್ಮೆ ಹಠಾತ್ ಕಾಣೆಯಾಗುತ್ತಾನೆ. ಗುರುವಿನ ಹುಡುಕಾಟದಲ್ಲಿ ಗೋರಕ್ಷ ಊರೂರು ಅಲೆಯುವ ಮತ್ತು ಕೊನೆಯಲ್ಲಿ ಅವನನ್ನು ಮತ್ತೆ ಪಡೆಯುವ ಕತೆ ಉತ್ತರದ ಭಾಷೆಗಳ ಅನೇಕ ಶಿಷ್ಟ ಮತ್ತು ಜಾನಪದ ಕಾವ್ಯಗಳಲ್ಲಿ ವರ್ಣಿತವಾಗಿದೆ. ಈ ಕವಿತೆಯೂ ಇದೇ ಘಟನೆಯ ಸುತ್ತ ಕಟ್ಟಿದ್ದು. ಗುರು ಕಳೆದುಹೋಗಿದ್ದಾನೆ, ಗೋರಕ್ಷ ಹುಡುಕಾಡುತ್ತಿದ್ದಾನೆ.

ಒಂದು:

ಎಲ್ಲಿ ನಿನ್ನ ನಗೆ

ವಿಂಧ್ಯ ಶಿಖರ ಸಂಧ್ಯೆ ಕಳಶಗಳು ಜಾರಿ
ತಿಂಗಳು ತಂಪು ಮಿಣಕು ತಾರೆಗಳು ಆರಿ
ಅಗೋ ಹಾರಿ ಹಾರಿ ಕಣಿವೆ ಕಣಿವೆಗಳ
ಮುಂಜಾವು ಕೆಂಪು ಹೋರಿ
ಒಂದು ಹೋಯ್ತು ಇನ್ನೊಂದು ಬಂತು
ಬೂದಿ ಇಲ್ಲದೆ ಸೂರ್ಯ ಉರಿದು
ಹುಣ್ಣಿಮೆ ಚಂದ್ರ ಸಣ್ಣಾಗಿ ಸೊರಗಿ
ಅಮವಾಸೆ ತಮರಾಸಿಯಲ್ಲಿ ಕರಗಿ

ವರ್ಷ ವರ್ಷ ಉರುಳಿ ಯುಗ ಯುಗದ ಸುರುಳಿ
ಬಿಚ್ಚಿ ಬಿಚ್ಚಿ ಎವೆ ಮುಚ್ಚದಂತೆ
ಹುಡುಕಿ ಹುಡುಕಿ ದಣಿದೆ

ಎಲ್ಲಿ ನಿನ್ನ ನಗೆ

ಮರಳುಗಾಡು ಧಗೆಯಲ್ಲಿ ಬೆವತು ಬಂದ
ಗಿರಿಯೆದೆಗೆ ಎದೆಯ ಡಿಕ್ಕಿ ಹೊಡೆದ ಮೋಡಗಳ
ಬಿಳೀ ತಂಪು ಉಂಡೆ
ನದಿಮೂಲದಲ್ಲಿ ಮೈಯ್ಯಿ ದಣಿಯ ಮಿಂದೆ

ಬಂಡೆಗಳ ಜಾರಿ ಸಮನೆಲವ ಸಾರಿ
ಆ ಕಣಿವೆಯಾಸಿ ಕಾನನ ಬಳಸಿ
ಕಿರಿದಾಗಿ ಇಲ್ಲಿ ಅಲ್ಲಿ ಹಿರಿದಾಗಿ ಹರಡಿ
(ಏಕತನವಿದ್ದೂ ಏಕತಾನತೆಯಿರದೆ)
ನಿದ್ದೆಯಿರದೆ ನಲುಗಿದ್ದ ನಗರಗಳ
ಇನ್ನೂ ಎದ್ದೇ ಇರದಿದ್ದ ಗ್ರಾಮಗಳ
ದಡದುದ್ದ ದುಡುಕಿ ದಡದಡನೆ ಕಡಲ ಕಡೆ
ದೌಡಿಟ್ಟ ನದಿಯ ನೀಲಿ ಸೆರಗನ್ನು
ಜಗ್ಗಿ ಕೇಳಿದೆನು
ಎಲ್ಲಿ ಅವನ ನಗೆ

ಬಾಂದಳದ ಗುಂಟ ಕುಂಟುತ್ತ ನಡೆದ ಹಸಿರು ಹೊಲದ ಸಾಲು
ಹೊಮ್ಮಿರುಗು ತಾಕಿ ಬೂದಿ ಮೋಡ ತಾಲು
ನಡುವೆ ಗಾಳಿಗೇ ರೆಕ್ಕೆಯೊಡೆದು
ಬಿಳಿ ಬಣ್ಣ ತಳೆದು
ಬೆಳ್ಳಕ್ಕಿ ಚಿಮ್ಮಿದಂತೆ
ಹೊಮ್ಮಿತ್ತು ಅವನ ನಗೆ

ಸ್ವಪ್ನಗಳ ಪಕ್ಕ ಪಕ್ಕಂತ ಮೈಯ್ಯಿ ತಾಳಿತ್ತು
ಸ್ವಪ್ನ ಬಾರದ ಹಗಲ ಭಾರವ ತಾಳಿಸಿತ್ತು
ಕ್ಷಾಮಡಾಮರದಲ್ಲಿ ಕ್ಷಯಿಸಿ ಹೋಗದ ಹಾಗೆ
ಪ್ರವಾಹ ಪೂರಗಳಲ್ಲಿ ಕೊಚ್ಚಿ ಹೋಗದ ಹಾಗೆ ಪಾಲಿಸಿತ್ತು

ನನ್ನೊಳಗೆ ಇತ್ತು
ನನ್ನೊಡನೆ ಇತ್ತು
ಈಗ ಎಲ್ಲಿ ಹೋಯ್ತು
ಎಲ್ಲಿ ನಿನ್ನ ನಗೆ

ಎರಡು:

ನಿನ್ನ ಮುಗುಳು ನಗೆ ಅರಳಿ ಬೆಳಕು
ದಿಕ್ಕುಗಳೆ ಪಕಳೆ ಅದಕೆ

ತಮದ ದುಂಬಿ ಮಕರಂದ ಹೀರಿ
ಕಟ್ಟಿತು ಜೇನುಗೂಡು

ಆ ಬೆಳಕುಂಡು ಬೆಳೆದ ಕೂಸು ನಾನು
ನನ್ನ ಜೊತೆಗೆ ನಲಿದ ಜಗವೂ ಒಂದು ಕೂಸು
ಕಾಲ ಅನ್ನೋ ಮಣ್ಣು ಗಾಡಿ ಆಟಿಕೆ ನನಗೆ ಅದಕೆ

ಖೊಟ್ಟಿಯಾಯಿತು ನೀ ಕೊಟ್ಟ ಮಂತ್ರ
ಕಿತ್ತುಹೋಯ್ತು ನೀ ಕೊಟ್ಟ ಜಪ ಮಣಿ
ಮಣ್ಣುಗೂಡಿತು ಮಣ್ಣುಗಾಡಿ

ಜೇನು ಖಾಲಿ ಬೆಳಕು ಹಿಂಗಿ
ನಟ್ಟಿರುಳೆ ತುಂಬಿ
ಲೋಕಗಳು ಕರೆದಿವೆ ನಂಬಿ

ಎಲ್ಲಿ ನಿನ್ನ ನಗೆ

ಮೂರು:
ನಿನ್ನ ಹುಡುಕಾಟದಲ್ಲಿ ನಿನ್ನ ನೆನಪೇ ಮುಳ್ಳು
ಹುವ್ವ ಇನ್ನೊಂದು ಸಲ
ಇನ್ನೊಂದು ಸಲ ಹಣ್ಣು ಜೋತು ಕೊನೆತುಂಬ
ಕೊನೆಗೆ ಕೊನೆಯೇ ಮಾಯ

ಕರಕ್ಕಿಲ್ಲ ಅಧರಕ್ಕಿಲ್ಲ
ಉದರಕ್ಕೆ ಮೊದಲೇ ಇಲ್ಲ
ಹೃದಯಕಮಲದ ತುಂಬ ನಿನ್ನ ನೆನಪು

ನೀನಿಲ್ಲ

ನಾಲ್ಕು:
ಗುರುವೆ ನಾನು ಹುಟ್ಟಿದೆ ನಿನ್ನ ಕೈಯಲ್ಲಿ
ಗುರುವೆ ಶಬ್ದ ಹುಟ್ಟಿತು ನಿನ್ನ ಬಾಯಲ್ಲಿ
ಗುರುವೆ ಬೆಳಕು ಹುಟ್ಟಿತು ನಿನ್ನ ಕಣ್ಣಲ್ಲಿ
ಗುರುವೆ ಸ್ಪರ್ಶ ಹುಟ್ಟಿತು ನಿನ್ನ ಸನಿಹದಲ್ಲಿ

ನೀನು ಮರೆಯಾದ ದಿನದಿಂದ
ನಾನು ನನ್ನ ಕಿವಿ ಕಣ್ಣು ಚರ್ಮ

ಹೊರಟು ಬಿಟ್ಟವು ನಿನ್ನ ಬೆನ್ನಲ್ಲಿ
ಉಳಿದಿವೆ ಈ ಎರಡು ಕಾಲುಗಳು
ನೂರಾರು ದಾರಿಗಳು

ಐದು:

ದಾರಿ ತುದಿಗೆ ಬೇರೊಂದು ದಾರಿ
ಹಿಂತಿರುಗಿದರೆ ಮೊದಲಿಗೆ
ಅಲ್ಲೆರಡು ದಾರಿ
ದಾರಿ ದಣಿವಿಗೆ ಹೌಹಾರಿ
ಇರುಳ ದಾರಿ ಹಗಲ ದಾರಿ
ಹಕ್ಕಿಗಳ ಹಾಗೆ ಹಾರಿ
ಹಾರಿ ಹೋಗುತಿವೆ
ಕಿಕ್ಕಿರಿದು ದಿಕ್ಕಿರದ ಗಗನದಲ್ಲಿ

ದಿಕ್ಕುಗೆಟ್ಟು ಗೋರಕ್ಷ ಲಕ್ಷ ಯುಗ
ನಿದ್ದೆಹೋಗಿ
ಹೊಸ ಸ್ವಪ್ನದಲ್ಲಿ
ಮಿನುಗುವುವು ಇರುಳ ದಾರಿ
ಬೆಳಗುವುವು ಹಗಲ ದಾರಿ

ಬೆಟ್ಟಗಳ ದಾರಿ ಕಣಿವೆಗಳ ದಾರಿ
ಸಮತಟ್ಟು ನೆಲದ ದಾರಿ
ನದಿಯ ದಾರಿ ನದಿ ದಂಡೆ ದಾರಿ
ಮುಗಿಲ ಜೊತೆ ಹಕ್ಕಿ ದಾರಿ
ಉಲ್ಕೆಗಳ ದಾರಿ ತಾರೆಗಳ ದಾರಿ
ಎಲ್ಲೆಲ್ಲು ದಾರಿ ದಾರಿ

ನಿನ್ನ ಮುಗುಳು ನಗೆ ಅರಳದಿರುವ ದಾರಿ

ಆರು:

ದಾರಿ ಹೋಕರೆ ನಿಮ್ಮ ಕಾಲುಗಳು ಬರೀ ಎರಡು
ಎಣಿಸಬಲ್ಲಿರಿ ನೀವು
ದಾರಿ ಎರಡೇ ಮೂರೇ ನಾಲ್ಕೇ ಕೋಟಿಯೇ
ಎಣಿಸಬಲ್ಲಿರಾ ನೀವು

ದಾರಿ ತುದಿಗೇನು ಬೆಳಕೋ ಕತ್ತಲೋ
ಹೇಳಬಲ್ಲಿರಾ ನೀವು
ಗೋರಕ್ಷ ಸವೆದ ಹಾದಿಗಳೆಷ್ಟು
ಹೇಳಲಾರಿರಿ ನೀವು

ನೂರಾರು ಊರೂರು ಅಲೆಅಲೆದು ದಣಿದು
ಗೋರಕ್ಷ ನಿನಗೆ ಕಣ್‌ಮಾಯ ಕಿವಿ ಮಾಯ
ಆದರೂ
ದಾರಿಗಳ ತುದಿಗೆ
ದಾರಿ ಮೀರಿದ ಅವನು ಒಮ್ಮೆ ನಕ್ಕರೆ ಸಾಕು
ಕಾಲೇ ನೋಡುವುವು
ಕಾಲೇ ಕೇಳುವುವು

ಏಳು:
ನದಿಯ ನಾಡಲ್ಲಿ ನಿನ್ನ ನೆನಪು ಬಂತೋ ತಂದೆ
ಸೇತುವೆ ಹಾಗೆ ದಡದಿಂದ ದಡಕೆ
ಕೊಳದ ತಾವರೆಯಲ್ಲಿ ಅರಳಿ ಕೆಂಪಾಗಿತ್ತು
ಭಟರ ಕುದುರೆಗಳು ಖುರಪುಟ ಧೂಳೆತ್ತಿ ಉರದೆತ್ತರ
ರಾಚಿಸಿದವು ತಾವರೆಯ ಮೋರೆಗಳಿಗೆ

ಮಲೆನಾಡ ಕೊಳ್ಳದಲಿ ನಿನ್ನ ನೆನಪಾಯಿತು
ಅದರಾಚೆ ತೊಯ್ದು ತಪ್ಪಲಿನಲ್ಲಿ ಮನೆ ಮಾಡಿದೆ
ಸಂಪಿಗೆಯ ತೋಪಲ್ಲಿ ಗಂಧವತಿ ಸೆಳೆದು ನನ್ನನ್ನು
ಅವಳೊಡನೆ ಇರುಳು ಬೆಳಕುಗಳಲ್ಲಿ
ಕಳೆದೆ ಸಿಕ್ಕಿದೆ ಮತ್ತೆ ಕಳೆದು ಹೋದೆ
ಗಂಟೆ ಘೋಷ ಝಣ ಝಣತ್ಕಾರ

ಮುಚ್ಚಿರುವ ಬಾಗಿಲು ತೆರೆಯದ ಕಿಟಕಿಗಳು
ಕವಿದ ಕತ್ತಲು
ನಮ್ಮನ್ನು ಸತ್ತವರ ಸರಣಿಯಲಿ ಎಬ್ಬಿಸಿದವು

ಅಲ್ಲಿ ಕಂಡೆನು ರಾಟೆಯಲ್ಲಿ ಸಿಕ್ಕಿ ಸತ್ತವರನ್ನು
ನೇಗಿಲ ಕುಳಕ್ಕೆ ಸಿಕ್ಕಿ ಸತ್ತವರನ್ನು

ರಥದ ಗಾಲಿಗೆ ಅಪ್ಪಚ್ಚಿಯಾದವರನ್ನು
ಇಟ್ಟಿಗೆ ಗೂಡಲ್ಲಿ ಸುಟ್ಟು ಹೋದವರನ್ನು

ನಿನ್ನ ಕರುಣೆ ಮೈಯ್ಯಿ ದಡವಿತು
ಕೈ ಹಿಡಿದು
ತಿರುಗಿ ನಿನ್ನ ನಗೆ ದಾರಿಹಿಡಿಸಿತು

ಎಂಟು:

ಒಡ್ಡುಗಳ ಕೆಳಗೆ ಒಣಗಿ ನದಿಗಳು
ಒಡಕೊಡಕು ನೆಲ
ಕಾಲೆಳೆಯುತ್ತ ಕಾಲದೂರವನ್ನೆಳೆಯುತ್ತ
ಕಂದು ಸಂಜೆ ಕಡೆಗೆ ಬಂದಾಗ

ಒಣಮರದ ತುಂಬ ಕಾಗೆಗಳ ಪರಿಷತ್ತು
ಕೆಂಚಿನಾಚೆಗೆ ಕತ್ತಲೆನ್ನುವ ಚರ್ಚೆ
ಅರ್ಥವಾಯಿತು ನನಗೆ ಅವರ ಮಾತು

ಆಕಾಶ ಮಾತ್ರ
ಆ ಕಡೆಯಿಂದ ಈ ಕಡೆ ಉದ್ದಗಲ
ನಿಗಿ ನಿಗಿ ಗಟ್ಟಿ ನೀಲಿಯ ಕೆಂಡ

ಅದರಲ್ಲಿಯೂ ತೆವಳುತ್ತ ಬಂದ
ಹೊನ್ನ ಲೇಪನದ ಹರಕು ಬೂದಲು ಮೋಡ
ಮೊದಲು ಪುಟ್ಟ ಕೈಯಾಗಿ ಆಮೇಲೆ ಕಾಲು ಹೊಳೆವ ಮೈ
ಆಮೇಲೆ ಎಳೆನಗುವ ಮೋರೆಯಾಗಿ
ಗುರು ನಿನ್ನ ಮಾನಸ ಕೂಸು ಈಸುತ್ತಿದೆ ಅಲ್ಲಿ

ಕಾಲು ಕುಸಿಯುವ ಹೊತ್ತು
ಮಬ್ಬುಗವಿಯುವ ಹೊತ್ತು
ಕಂದು ಹುಲ್ಲಿನ ಮಧ್ಯ ಕರಕು ಪೊದೆಯಲ್ಲೂ
ಹೊಂಗಿರಣದೊಬ್ಬುಳಿ

ಕಾಗೆಗಳೇ ನದಿಯ ಹಿಂಗಿದ ನಾಲಗೆಗಳೇ
ದೂರದಲ್ಲಿ ಕಾದಿರುವ ನಗರಗಳೇ

ಆಕಾಶದಲ್ಲಿ ಆ ಮೊಗವ ಕಂಡಿದ್ದೇನೆ
ಆಕಾಶದಲ್ಲಿ ಆ ನಗೆಯ ಕಂಡಿದ್ದೇನೆ

ಒಂಬತ್ತು:

ನಗೆಯ ನೆನಪೇ ಇಷ್ಟು ಮಧುರ
ನಕ್ಕವನ ಮಾತು ಇನ್ನು ಹೇಗಿರಬೇಡ
ಮುಖ ಮೈಯ್ಯಿ ಸಾಮೀಪ್ಯ

ನೀವಳಿಸಿ ಎಷ್ಟು ಸ್ವರ್ಗವನ್ನು
ಎಸೆಯಬೇಡ

ಕಾಲಕೋಶಗಳೊಳಗೆ
ದೇಶದೇಶಗಳೊಳಗೆ
ಹುಡುಹುಡುಕಿ ತಡತಡಕಿ
ಸಿಗದ ನಗೆಯನ್ನೆಲ್ಲಿ ಕಂಡಿದ್ದೆನು

ಕಂಡಿದ್ದು ಖಂಡಿತಾ
ಧ್ಯಾನದಲ್ಲೋ ಇಲ್ಲ ಕನಸಿನಲ್ಲೋ
ಇಲ್ಲ ನನಸುಗಳ ನಗೆ ಪಾಟಲೀಪುತ್ರ
ರಾಜ ಬೀದಿಗಳಲ್ಲೋ
ಇಲ್ಲೋ ಅಲ್ಲೋ ಇನ್ನೆಲ್ಲೋ
ಕಂಡಿದ್ದು ಖಂಡಿತಾ

ಕಾಣದಿದ್ದರೂ ಏನು
ಕನಸಿದ್ದು ನೆನಸಿದ್ದು ತಿರುಗಿ ಬಯಬಯಸಿದ್ದು
ಕಾಣದೇನು

ಹತ್ತು:

ಎಲ್ಲ ದಾರಿಗಳೂ ಇಲ್ಲಿ ಸೇರುತಿವೆ
ಎಲ್ಲ ಕಾಲಗಳೂ ಇಲ್ಲಿ ಕೂಡುತಿವೆ
ಎಲ್ಲ ಕಾಲುಗಳೂ ಇತ್ತ ನಡೆಯುತಿವೆ
ಮರುಭೂಮಿ ದಾಟಿ ಬಿಸಿ ಬೀಸುಗಾಳಿ
ಗ್ರಾಮಗಳ ಸವರಿ
ಕಡಲಲ್ಲಿ ತಂಗಿ ಅಲೆನೀರ ಬಾಚಿ
ಉರುಳುರುಳಿ ಉರುಳಿ ಬರುತಿದೆ
ಈ ಹೊನ್ನ ಮರಳ ತಡಿಗೆ

ಎಲ್ಲ ದ್ವೀಪಗಳ ಸರಕು ಇಳಿಯುತಿದೆ
ಎಲ್ಲ ನಾವೆಗಳು ಇಲ್ಲೇ ನಿಲ್ಲುತಿವೆ
ಎಲ್ಲ ತೋಳುಗಳು ಇಲ್ಲೆ ಸಂದಣಿಸಿ
ಖಾಲಿ ಜಾಗದಲಿ ಭವನ ಕಟ್ಟುತಿವೆ
ದಾರಿ ದಾರಿಗಳು ಬೀದಿಯಾಗುತಿವೆ
ಅರಮನೆಯ ಕಳಶ ಝಗಝಗನೆ ಥಳಿಸಿ
ಆಸ್ಥಾನದಲ್ಲಿ ಹಾಡುಗಳು ಕುಣಿತ
ರಾಜವಂಶಗಳ ಕಥೆಯ ಹೇಳುತಿವೆ
ಹೊನ್ನ ಹೊಳಪು ಕಣ್ಣು ಕುಕ್ಕುತಿದೆ
ತೋಳ ಬಿಗಿತದಲಿ ವಿರಹ ಉರಿಯುತಿದೆ

ಯುದ್ಧ ಬಂತು ಯುದ್ಧ
ಈ ನಗಳದುದ್ದ ಈ ನಗರದಗಲ
ಬರೀ ರಕ್ತ ಪುಟಿವ ತಲೆಗಳನು ಎಸೆವ
ಬುಗ್ಗೆ ಅದರ ಮಧ್ಯೆ
ಬರಿದಾದ ಮಾಡಗಳು ಏರಿಸಿದ ಗೋಳು ದನಿಯೇ
ಅಗೋ ಕಪ್ಪು ಗಗನದಲಿ ತೇಲಿಬರುತಲಿದೆ
ಕೆಂಪು ಮೋಡವಾಗಿ

ಹೀಗೆ ಕಥೆ ಇನ್ನೂ ಗೂಢವಾಗಿ
ಎಲ್ಲ ದಾರಿಗಳು ಇಲ್ಲಿ ಸೇರುತಿವೆ
ಎಲ್ಲ ಕಾಲಗಳೂ ಇಲ್ಲಿ ಕೂಡುತಿವೆ
ಎಲ್ಲ ಕಾಲುಗಳೂ ಇತ್ತ ನಡೆಯುತಿವೆ
ಎಲ್ಲ ಬೀದಿಗಳೂ ಎಲ್ಲ ಭವನಗಳೂ
ಎಲ್ಲ ನಾವೆಗಳೂ ಎಲ್ಲಿ ರೇವುಗಳೂ
ಇದ್ದ ಹಾಗೇ ಇವೆ
ಯಾರೂ ಇಲ್ಲದ ಹಾಗೆಯೇ ಇವೆ

ಹನ್ನೊಂದು:
ಮತ್ಸ್ಯೇಂದ್ರ ಯಾವ ಕಡಲಲ್ಲಿ, ಹಡಗಲ್ಲಿ
ಅಲೆಯುತ್ತಿದ್ದೀಯ
ಮತ್ಸ್ಯೇಂದ್ರ ಯಾವ ನದಿಯ ಪ್ರವಾಹದಲ್ಲಿ ಕೊಚ್ಚಿಹೋಗಿದ್ದೀಯ

ಮತ್ಸ್ಯೇಂದ್ರ ಯಾವ ಮಾಯಾವಿಯ ದ್ವೀಪದಲ್ಲಿ
ಬಂದಿಯಾಗಿದ್ದೀಯ
ಪಂಚಭೂತಗಳನ್ನು ದಾಟಿ
ನಾನು ಬಂದು ಸೇರಿದ ಈ ನಡುಗಡ್ಡೆ
ಮತ್ಸ್ಯೇಂದ್ರ ನೀ ಕೊಟ್ಟ ನಕ್ಷೆಯಲ್ಲಿರಲಿಲ್ಲ

ನಕ್ಷತ್ರ ಪುಂಜ ಚಂದ್ರ ಸೂರ್ಯ
ಎಲ್ಲಕ್ಕೂ ಮೊದಲು ಹೊತ್ತಿಸಿದ ಕಿಚ್ಚು
ಹುಚ್ಚೆದ್ದು ಕುಣಿಯುತ್ತಿದೆ ಇಲ್ಲಿ
ಈ ನೆರಳ ತಿಂಥಿಣಿ ಮಾಯೆಯಲ್ಲ

ಮುಂಡಗಳು ತುಂಡು ತುಂಡು ಕೈ ಕಾಲುಗಳು
ಎಳೆತರುವ ಈ ಕಾಲ ತೇರು
ಯಾವ ದೇವರ ಊರು
ಇಲ್ಲಿಯೂ ನೀನಿಲ್ಲ
ಹೇಸಿ ತೊಲಗುವೆ ನಾನು
ಹೋಗಿ ಬರುವೆನು ದಿಕ್ಕುಗಳೆ ದಿಕ್‌ಪಾಲಕರೆ
ಜ್ವಾಲೆಗಳೆ ನೆರಳುಗಳೆ

ಗೋರಕ್ಷ
ಗೋರಕ್ಷ

ಯಾರ ದನಿ ಈ ಘೋರ ನೀರವದಲ್ಲಿ

ಗೋರಕ್ಷ ಗೋರಕ್ಷ

ಕಡಲದನಿಯೆ ಇಲ್ಲ ಗಾಳಿ ದನಿಯೆ
ಗಾಳಿ ಕೆದಕಿದ ಹಿಡಿ ಬೂದಿ ದನಿಯೆ

ಗೋರಕ್ಷ ಗೋರಕ್ಷ
ಎಲ್ಲಿರುವೆ ಎಲ್ಲಿರುವೆ
ಮತ್ಸ್ಯೇಂದ್ರ ನಿನ್ನ ದನಿ... ನಿನ್ನದೇ...
ಎಲ್ಲಿರುವೆ ಎಲ್ಲಿರುವೆ
ಮತ್ಸ್ಯೇಂದ್ರ... ಮತ್ಸ್ಯೇಂದ್ರ...
ಗೋರಕ್ಷ...
ಮತ್ಸ್ಯೇಂದ್ರ...

ಡಿಸೆಂಬರ್, ೧೯೮೩

ರಿಕ್ಯೂನ ಕೊನೆಯ ಟೀ ಸಮಾರಂಭ

ರಿಕ್ಯೂ ಜಪಾನಿನ ಝೆನ್ ಗುರು. ಟೀ ಸಮಾರಂಭದ ಪ್ರವೀಣ. ಹಿದಯೋಷಿ ಚಕ್ರವರ್ತಿ ರಿಕ್ಯೂನ ರಾಜಕೀಯ ಗೊಂದಲಗಳಲ್ಲಿ ತನ್ನ ಗುರು ತನ್ನ ವಿರುದ್ಧ ಪಿತೂರಿ ನಡೆಸುತ್ತಿರುವನೆಂಬ ಶಂಕೆ ಮೂಡಿ ಹಿದಯೋಷಿ ರಿಕ್ಯೂಗೆ ಗೌರವಾರ್ಹ ಮರಣ ದಂಡನೆ ವಿಧಿಸುತ್ತಾನೆ. ಅದರ ಪ್ರಕಾರ ರಿಕ್ಯೂ ಹರಾಕಿರಿ ಮಾಡಿಕೊಳ್ಳಬೇಕು. ಅದಕ್ಕೆ ಮೊದಲು ರಿಕ್ಯೂ ತನ್ನ ಆಪ್ತ ಗೆಳೆಯರೊಂದಿಗೆ ಟೀ ಸಮಾರಂಭ ಆಚರಿಸುತ್ತಾನೆ. ಆಗ...

ಯುಗದ ಹಾಗೆ
ಇಲ್ಲಿ ಪ್ರತಿಯೊಂದೂ ಕ್ಷಣ
ಚೆರ್ರಿ ತೋಟದ ಗಾಳಿ
ತರುತ್ತಿದೆ ಮತ್ತೊಮ್ಮೆ
ಉರುಳಿ ಹೋದ ವಸಂತಗಳ ಗಂಧ
ಹಕ್ಕಿ ಹಾಡು

ಟೀ ಕೋಣೆ ನಡುವೆ
ಅಂಗೈಯಗಲ ಅರಳಿರುವ ಹಳದಿ ಹೂ
ಹೂದಾನಿಯಲ್ಲಿ; ಎಲ್ಲಿ ಎಲ್ಲಿ
ಅದರ ನೂರಾರು ಸೋದರರು?

ಎಲ್ಲಿ ಹೋಗುತ್ತದೆ
ಎಲ್ಲಿಂದ ಬರುತ್ತದೆ
ಒಂದೂ ಗೊತ್ತಿಲ್ಲ
ಈ ಕೋಣೆಗೆ, ಟೀ ಪಾತ್ರೆಗೆ

ಕುದಿ ಬಂದ ನೀರಲ್ಲಿ ಕೇಳಿಸಿತು ರಿಕ್ಯೂಗೆ
ಹೋಗಿ ಬನ್ನಿ ವಸಂತಗಳೆ
ಹೋಗಿ ಬನ್ನಿ ವಸಂತಗಳೆ
ಮಂಜಲ್ಲಿ ಹಾಡಿದ ಹಕ್ಕಿ

ಒಲೆಯ ಮಂದ ಬೆಳಕು
ಉರಿದು ಇತರ ಗೆಳೆಯರ ಕಣ್ಣಲ್ಲಿ
ನೆನಪು ಬಂತು ಮತ್ತೆ:

ಸಾಯಬೇಕು ರಿಕ್ಯೂ-
ಇವತ್ತೇ-
ತನ್ನ ಕೈಯಿಂದಲೇ;
ಚಕ್ರವರ್ತಿಯ ಆಜ್ಞೆ

ಸುರಿದುಕೊಂಡರು ಟೀಯನ್ನು
ಖಾಲಿ ಬಟ್ಟಲುಗಳೊಳಗೆ
ಸುರಿದುಕೊಳ್ಳುವ ಹಾಗೆ ತಮ್ಮ ಜೀವವನ್ನು

ಒಂದೊಂದು ಗುಟುಕು ಟೀಯಲ್ಲಿ
ಕೋಟಿ ಕೋಟಿ ಕಲ್ಪಗಳು

ಆಮೇಲೆ
ಒಂದೊಂದು ಕೈಯಲ್ಲು ಒಂದೊಂದು ಖಾಲಿ ಬಟ್ಟಲು
ಒಂದನ್ನು ಬಿಟ್ಟು

ಅಪ್ಪಳಿಸಿದ ರಿಕ್ಯೂ ತನ್ನ ಬಟ್ಟಲನ್ನು ನೆಲಕ್ಕೆ
"ಕುಡಿಯದಿರಲಿ ಯಾರೂ ಈ ಪಾಪಿಷ್ಟ ಬಟ್ಟಲಿಂದ"

ಆಮೇಲೆ
ಎಲ್ಲ ಮಿಂಚಿನ ಹಾಗೆ:
ಕತ್ತಿ, ಕತ್ತಿ ಬಿಂಬಿಸಿದ ಕಣ್ಣುಗಳು
ಕಣ್ಣುಗಳಲ್ಲಿ ಕಣ್ಣುಗಳು
ಕೋಟಿ ಬುದ್ಧರು
ಕಲ್ಪಗಳು

ಹೊಳೆಯುತ್ತಾ ಇದೆ ಇನ್ನೂ
ಕತ್ತಿ ಮಿಂಚಿನ ಹಾಗೆ
ರಕ್ತ ಚೆರ್‍ರಿಯ ಹಾಗೆ

ಯುಗದ ಹಾಗೆ
ಇಲ್ಲಿ ಪ್ರತಿಯೊಂದೂ ಕ್ಷಣ

ಅಕ್ಟೋಬರ್, ೧೯೮೫

ಅಭಿನವ

ಸ್ಪಂದ-೧

ಸುಡುಹವೆಯೊಳಗೆ ತಣ್ಣನೆ ಗಾಳಿ
ತಂದ ಮಳೆಯ ವಾಸನೆ
ಸೂರ್ಯ ಮುಳುಗಿ
ನಿಡುಸುಯಿಲಿಡುವ ನಗರದಾದಂಡೆ ಮೇಲೆ
ಚಂದ್ರ ತೋರಿದ ಮೇಲೆ
ಈ ಶುಷ್ಕ ಶಾಂತ ಸರೋವರದ ಏರಿಯ ಮೇಲೆ
ಹಗಲಿರುಳು ನಡುದಾಣದಲ್ಲಿ
ಮೊದಲ ಮಳೆ ಸೂಚನೆಗಳು...
ಉರಿದು ಕರಿದಾಗಿರುವ ಆಕಾಶದೆದೆತುಂಬ
ಕಂದು ತಿರುಗಿರುವ ತರುಮರದ ಬರಿತೋಳು ತಲೆಯಲ್ಲಿ
ಚಿಕ್ಕೆಗಳ ಜೊತೆಗೆ
ಸ್ಮರಣೆಗಳ ಮಾಲೆ:

ಬೋಳುಗುಡ್ಡದ ಮೇಲೆ ಕೊಚ್ಚುವ ಮಳೆ;
ಉಪ್ಪುನೆತ್ತರು ಚಪ್ಪರಿಸಿದ ಬಲಿಪೀಠಗಳ ಮೇಲೆ
ಗೋಗರೆವ ರವರವ ಮಳೆ;
ಬರದ ವರುಷಗಳ ಬಳಿಕ
ಉನ್ಮತ್ತ ವರ್ಷ
ಒಣಗದ್ದೆ ಹೊಲತೋಪುಗಳ ಮುಳುಗಿಸುವ ಮಳೆ...
ಸ್ಮರಣೆಗಳ ಸರಮಾಲೆ

ಮೊಗೆಮೊಗೆದು ಎದೆತಳದ ಧಗೆಯನ್ನು
ಈಗ ತೋರುವೆ
ಹೂಹಗುರ ಎಲರಿನೊಳಗೆ

ಬನ್ನಿ
ವರ್ತಮಾನದ ಆವರ್ತನದೊಳಗೆ
ಮಿಂಚುಗಳೆ ಗುಡುಗುಗಳೆ ಸಿಡಿಲುಗಳೆ
ಭೈರವನ ಧಾತುಗಳೆ ಮಾತುಗಳೆ
ಕ್ಷಣದ ಸ್ಪಂದನದಲ್ಲಿ
ಅದರ ಕಂಪನದಲ್ಲಿ
ಕಂಪನದ ಲಯದಲ್ಲಿ
ಕಿಂಚಿತ್ತು ಅದುರುವ ಮರದ ರೆಂಬೆತುದಿ...
ಒಂದು ಚಾತಕ ಪಕ್ಷಿ
ಕಾಯುತ್ತಿದೆ
ಅಂದಿಂಗೆ ಹಳೆಯ
ಇಂದಿಂಗೆಳೆಯ
ಕೊನೆಯಿರದ ಮೊದಲ ಮಳೆ ಹನಿಗೆಂದು

ಅಭಿನವ ಸ್ಪಂದಕೆಂದು

ಸ್ಪಂದ-೨

ಓ ಕಾಲ ಚಕ್ರಗಳೇ ನಿಮ್ಮ ಜೊತೆ
ಓ ನಕ್ಷತ್ರವ್ಯೋಮಗಳೆ ನಿಮ್ಮ ಜೊತೆ ಓ
ಋತುಮಾನ ದಿನಮಾನ ಕ್ಷಣಮಾನ ಕ್ಷಣಾರ್ಧಮಾನಗಳೆ
ನಿಮ್ಮ ಜೊತೆ ಓ ಅನಂತತೆಯೇ ನಿನ್ನ ಜೊತೆ ಓ
ಅನಾದಿಯೇ ನಿನ್ನ ಜೊತೆ

ಯಾತ್ರೆ ಹೊರಟಿದ್ದೇವೆ ಭೈರವನ ದೇಶಕ್ಕೆ

ಹೆಜ್ಜೆ ಹೆಜ್ಜೆಗೆ ಬಲಿಯಾದ ನರರ ರುಂಡಗಳು ಮುಂಡಗಳು
ಸುರೆಯ ಘಾಟಿನ ಮೃತ ಕಪಾಲಗಳು
ಘೃತಕಾಗಿ ಚಾಚಿರುವ ಶತಯಜ್ಞ ಜ್ವಾಲೆಗಳು
ಅಮವಾಸೆ ಮಸಣದ ಮೈಥುನದ ಕೇಳಿಗಳು
ನೂಪುರದ ಮೊಳಗುಗಳು ಪೌರ್ಣಿಮೆಯ ನಗರಗಳು
ತರಗುಡುವ ನೆಲದೆದೆಮೇಲೆ
ಕಪ್ಪುಕುದುರೆಗಳು ಟಪ್ಪಟಪ ಗೊರಸುಗಳು...

"ಎಲ್ಲಿ ಹೊರಟಿರುವಿರಿ ನೀವೆಲ್ಲಾ?"
ಎಂದು ಕೇಳಿದರೆ ಹೇಳಿದವು:

"ಭೈರವನ ದೇಶಕ್ಕೆ"
ನಾನಂದೆ: ಅದು ನಿಮ್ಮ ಗುರಿಯಲ್ಲ, ಗೊತ್ತಲ್ಲ, ನೆಲೆಯಲ್ಲ
ಬೇರಲ್ಲ, ಅದು ನೀವೆ ಅದು ನಾವೆ
ಅದೇ ದಡ ಅದೇ ಕಡಲು ನಮ್ಮೆಲ್ಲರಿಗೂ
ಅಲ್ಲಿಯೇ ಇದ್ದು ಹೇಗೆ ಎದ್ದು ಬಂದಿರಿ
ಹೇಳಿ ಅಲ್ಲಿಂದ
ಇಲ್ಲಿಗೆ ಇಲ್ಲಿಂದ
ಅಲ್ಲಿಗೆ ಹಾದಿ ಎಲ್ಲಿಂದಲೂ ಇಲ್ಲ
ಈಗಿಂದ
'ಇಂದ'ಲೂ ಅಲ್ಲ
ಈ ಸ್ಪಂದ

ಸ್ಪಂದ-೩

ಕಲ್ಹಣ ಬರೆದಿದ್ದಾನೆ ರಾಜತರಂಗಿಣಿಯಲ್ಲಿ
ಕಾಶ್ಮೀರ ಕೇಸರಿಯ ಕುಸುಮಗಳ ಬಗ್ಗೆ
ಪದ್ಮರಾಗದ ಅಧರದ ಸುಭಗೆಯರ ಬಗ್ಗೆ
ಮುಗಿಲುಗಳ ನಿಲೆ ಹಾಕಿನಿಂತ ಗಿರಿಶಿಖರಗಳ ಬಗ್ಗೆ
ವಿದ್ವದ್ಗೋಷ್ಠಿ ವಿಲಾಸಕೂಟಗಳ ಬಗ್ಗೆ
ಕಲಶರಾಜನ ಆಸ್ಥಾನದಲ್ಲೊಬ್ಬ ಮಾರ್ಜಾಲ ವರ್ತಕ
ತಾನೆ ಗುರುವೆಂದು ತಾನೆ ಹರನೆಂದು
ದೊರೆಗೆ ತಿನ್ನಿಸಿ ಬಳ್ಳೆಹಣ್ಣು
ವರ್ಣಕಾರ ಮತ್ತಿತರ ಕುಶಲಕರ್ಮಿಗಳ ಪರಿಷತ್ತಿಗೆ
ಒಡೆಯನಾದುದರ ಬಗ್ಗೆ

-ಕಲ್ಹಣನ ರಾಜತರಂಗಿಣಿಯಲ್ಲಿ
ಯುಗದ ಸಕಲವೂ ಉಂಟು
ಅಲ್ಲಿ ನಾಪತ್ತೆ ಒಂದು. ಹೆಸರು:
ಅಭಿನವ

ಅಭಿನವ ಆಸ್ಥಾನದಲ್ಲಿರಲಿಲ್ಲ ಈಸ್ಥಾನದಲ್ಲಿರಲಿಲ್ಲ
ಅವನಿದ್ದ ಸ್ವಸ್ಥಾನ ಸ್ವಾಸ್ಥ್ಯದಲ್ಲಿ
ನಿಜದಾವಾಸ ಸ್ಥಾನದಲ್ಲಿ

ಕಲ್ಹಣನ ಕಾಶ್ಮೀರದಲ್ಲಿ ಅಭಿನವನಿಲ್ಲ
ಅಭಿನವ ಹೃದಯಸ್ಥ

ಕಾಶ್ಮೀರ
ಉರಗ ಭೂಷಣನ ಉರದಲ್ಲಿ
ತ್ರಿಪುರಸುಂದರಿ ಹಾಗೆ

ಸ್ಪಂದ-೪

ಅಮೃತಪೂರಿತ ಹೃದಯ ಪಾತ್ರ
ಒಂದು ಕರದಲ್ಲಿ
ಅತಿತೀಕ್ಷ್ಣಪ್ರಜ್ಞೆಯ ಖಡ್ಗ
ಒಂದು ಕರದಲ್ಲಿ
ತರ್ಕ ದರ್ಶನ ಶಾಸ್ತ್ರ ಮೀಮಾಂಸೆ
ಒಂದು ಜೋಳಿಗೆಯಲ್ಲಿ
ಯಂತ್ರ ತಂತ್ರ ಮಂತ್ರ ಮಂಡಲ
ಒಂದು ಜೋಳಿಗೆಯಲ್ಲಿ

-ಹೀಗೆ ಹರನ ಹೊರೆ ಹೊತ್ತು
ಕಾದಿರುವೆ ಎಳೆ ಹರೆಯದಿಂದ ಮುದಿಯನಾಗುವವರೆಗೆ

ಕಳಿಸು ಯಾರನ್ನಾದರೂ ಇಲ್ಲಿ
ಪರಿಹರಿಸಿಕೊಳ್ಳಲಿ ಸಿಹಿಯನ್ನು ನಿನ್ನ ವಿಷದಿಂದ
ತುಂಬಿಕೊಳ್ಳಲಿ ಸಪ್ಪೆಗಣ್ಣುಗಳನ್ನು ನಿನ್ನ ಚಂದ್ರಕಳೆಯಿಂದ
ನಿಲ್ಲಿಸಲಿ ಐಶ್ವರ್ಯ ದಾರಿದ್ರ್ಯಗಳ ತೊಯ್ದಾಟವನ್ನು
ತಿರಿದುಂಡೂ ಪೊರೆವ ನಿನ್ನ ಸಿರಿಯಿಂದ

ಯಾರೂ ಬರುತಿಲ್ಲ
ಕೇಸರಿ ಕುಸುಮಗಳು ನೆಲದಲ್ಲೆ ಬಾಡುತ್ತಿವೆ
ಹಿಮಶಿಖರದ ತುದಿಮೇಲೆ ತುದಿಗಾಲಾದ ತಾರೆ
ಯಾರಿಗೂ ಕಾಣದೆಲೆ
ಕರಗುತ್ತಿದೆ

ನೀ ಹುಟ್ಟಿ ಬಂದು ಸಕಲಜಾತಗಳಲ್ಲಿ
ನಮ್ಮಿಚ್ಛೆಯಂತೆ
ಕಲ್ಪಿಸಿ ಮೃತ್ಯುಜಾಲಗಳನ್ನು
ಕ್ಷಣಕ್ಷಣವು ಅಣುಅಣುವಾಗಿ ಸತ್ತು
ಮರುಹುಟ್ಟಿ
ಮತ್ತೆ ಅಪ್ಪಿಕೊಳ್ಳುವ ಬರಸೆಳೆದು

ಓ ನಿಷ್ಕಲನೆ
ಸಕಲಜೀವಿಗಳನ್ನು
ನಿನ್ನಂತೆ
ಬರಸೆಳೆದುಕೊಳ್ಳಬೇಕೆಂದು ಹೃದಯಗಳನ್ನು
ಕಾದಿರುವೆ ವೃಥಾ
ಕಮಲದ ಹಾಗೆ
ನಿನ್ನ ಹಣೆಗಣ್ಣ ರವಿಕಿರಣ ಸ್ಪರ್ಶಕೆಂದು

ಅಗೋ ಪಶ್ಚಿಮದ ದಿಶೆಯಲ್ಲಿ ಚಿತ್ಸೂರ್ಯ
ಕಳಿಸು ಹೃದಯಾಂಬುಜಗಳನ್ನು
ಅವನೆಡೆಗೆ
ಒಂದೆರಡಾದರೂ

ಸ್ಪಂದ-೫

ಮೂರು ಕಣ್ಣುಗಳು ಇರಲಿಲ್ಲ ನಿನಗೆ
ಎರಡು ಕಣ್ಣುಗಳೂ ಇರಲಿಲ್ಲ ನಿನಗೆ
ನಿನಗೆ ಇತ್ತು
ಒಂದೇ ಕಣ್ಣು
ಅದು ಕಣ್ಣ ಕಣ್ಣು

ಹುಲಿಯ ತೊಗಲೂ ಇಲ್ಲ
ಗಜದ ತೊಗಲೂ ಇಲ್ಲ
ನಿನಗೆ ಇತ್ತು
ಒಂದೆ ತೊಗಲು
ಅದು ತೊಗಲ ತೊಗಲು

ಎಲ್ಲಿತ್ತು ತ್ರಿಶೂಲ ನಿನ್ನ ಕೈಯಲ್ಲಿ
ನಮ್ಮ ತ್ರಿಕರಣಗಳನ್ನುಳಿದು
ಎಲ್ಲಿತ್ತು ಡಮರು ನಿನ್ನ ಕೈಯಲ್ಲಿ
ನಮ್ಮ ಹೃದಯವನ್ನುಳಿದು
ಎಲ್ಲಿತ್ತು ಸರ್ಪ ನಿನ್ನ ಕೊರಳಲ್ಲಿ
ನಮ್ಮ ಚಿತ್ತವನ್ನುಳಿದು
ನೀನು ಇದ್ದೂ ಇಲ್ಲ
ನೀನು ಏನೂ ಅಲ್ಲ

ಈಗ ತಾನೇ ಬಂದ ಗಾಳಿಯ ಹಾಗೆ
ಅದರೊಳಗೆ ಸುಳಿದ ಪರಿಮಳದಂತೆ
ಈಗ ಅವೆರಡೂ ಇಲ್ಲ
ನಿನ್ನಂತೆ
ಹೃದಯದಂತೆ
ಬಡಿದು ನಿಲ್ಲುವಂತೆ
ನಿಂತು ಬಡಿಯುವಂತೆ
ಚಂದ್ರ ಕುಗ್ಗುವಂತೆ ತಿರುಗಿ ಹಿಗ್ಗುವಂತೆ
ಹೆಜ್ಜೆ ಊರುವಂತೆ
ಹೆಜ್ಜೆ ಚಿಮ್ಮುವಂತೆ
ಗೆಜ್ಜೆಗಳ ಗಲಗಲಕು ಉಲಿಯುವಂತೆ
ಕರವೆರಡು ಕೊಲುವಂತೆ ಪೊರೆಯುವಂತೆ
ಕಂಡು ಕರಗುತ್ತಿರುವ ಕರಗಿ ಕಾಣುತ್ತಿರುವ
ನಿನ್ನ ಚಿತ್ರವ ಬರೆದೆ ಸಪ್ತವರ್ಣಗಳಿಂದ:

ಅಲ್ಲಿ ತ್ರಿಶೂಲ ಡಮರುಗವಿತ್ತು
ಅಸುರಮಾಲೆಯು ಇತ್ತು

ಸ್ಪಂದ-೬

ಎಡೆಬಿಡದ ಹಿಮಪಾತ ಪರ್ವತ ಪ್ರಾಂತ್ಯದಲ್ಲಿ
ಅಲ್ಲಿ ಮಡಿಯುವರ ಬದಿಯಲ್ಲಿ
ಇದ್ದೆ ನಾನು ಮಡಿಯುತ್ತ ಕಣಕಣವಾಗಿ

ದಕ್ಷಿಣಾಪಥದ ಒಳನಾಡಿನಲ್ಲಿ ಭೀಕರ ಕ್ಷಾಮ
ಅಲ್ಲಿ ಮಡಿದ ಗೋವುಗಳ ಎದೆಗೂಡಿನೆಲುಬುಗಳ
ಜೊತೆಜೊತೆಗೆ
ಎಣಿಸಿರುವೆ ನನ್ನೆದೆಯ ಎಮಕೆಗಳನ್ನು ಬಡಬಡವಾಗಿ

ತಾರುಣ್ಯದ ಯುದ್ಧದಲ್ಲೊ
ವೃದ್ಧಾಪ್ಯದ ಶಾಂತಿಯಲ್ಲೊ
ಮದುವೆ ತಿಥಿ ಮುಂಜಿಯಲ್ಲೊ

ಸ್ವರ್ಗಸೋಪಾನ ಹತ್ತುವರ ಪಾದಧೂಳಲ್ಲಿ ನಾನಿದ್ದೆ
ನರಕಸೋಪಾನ ಇಳಿಯುವರ ಉಗುರಕೊಳೆಯಲ್ಲಿ ನಾನಿದ್ದೆ
ಇರುವೆ ಹೀಗೇ ಎಂದು
ಎಂದೆಂದು

ನಾನು ಏನೂ ಅಲ್ಲ, ಎಲ್ಲವೂ ನಾನು
ನಾನು ಯಾರೂ ಅಲ್ಲ
ಎಲ್ಲರೂ ನಾನು

ಸ್ಪಂದ-೭

ಬಾಲರು ಒಂದೊಂದು ಸಲ ಇಣುಕುತ್ತಾರೆ ನನ್ನ ಗುಹೆಯೊಳಗೆ
ಅವರ ಕಣ್ಣಿಗೆ ಕಾಣುವವು-
ಆರು ಕೈಗಳ ಮೂರು ಕಣ್ಣಿನ
ಚಿತ್ರವಿಚಿತ್ರ ಆಯುಧಪಾಣಿ ದೇವತಾಮೂರ್ತಿಗಳು
ಸೌಮ್ಯ ಭೀಕರ ಮುಖಮುದ್ರೆಗಳು

ಬುಧರು ಒಂದೊಂದು ಸಲ ಹತ್ತುತ್ತಾರೆ ನನ್ನ ಗುಹೆ ಹೊಸ್ತಿಲನ್ನು
ಅವರಿಗೆ ಅಲ್ಲಿ ಕಾಣುವುದು
ಬರೀ ಕತ್ತಲು
ಎಲ್ಲಿವೆ ಇಲ್ಲಿ ತರ್ಕಸೂತ್ರಗಳು ಪ್ರಮಾಣಗಳು?

ಉನ್ಮತ್ತರು ಒಂದೊಂದು ಸಲ ಹೊಗುತ್ತಾರೆ ನನ್ನ ಗುಹೆಯೊಳಗೆ
ಕಾಣಲೇಬೇಕೆಂದು ತಾವಂದುಕೊಂಡಿದ್ದ
ಬಣ್ಣ ರೂಪಗಳನ್ನು
ಕಂಡಕೂಡಲೆ
ಕಾಲುಕೀಳುತ್ತಾರೆ ಅಲ್ಲಿಂದ

ಯಾರಿಗೂ ಗೊತ್ತಿಲ್ಲ ಏನಿದೆ ನನ್ನ ಗುಹೆಯೊಳಗೆ
ಗೊತ್ತಾಗುವುದಿಲ್ಲ ನಿನ್ನ ಕತ್ತಿನ ಸರ್ಪ ಅವರನ್ನು ಕಚ್ಚದಿದ್ದರೆ
ನಿನ್ನ ಬೆಂಕಿಯ ಕಣ್ಣು ಆ ಗಾಯವನ್ನು ದಹಿಸದಿದ್ದರೆ
ನಿನ್ನ ನೆತ್ತಿಯ ಗಂಗೆ ಆ ಉರಿಯನ್ನು ತಣಿಸದಿದ್ದರೆ

ಸ್ಪಂದ-೮

ಒಂದು ಮಕ್ಕಳ ಹಾಡು:
ಎಷ್ಟೊಂದು ತೋಟಗಳು ಈ ಮಧ್ಯದೇಶದಲ್ಲಿ
ಎಷ್ಟೊಂದು ಹೂವುಗಳು ತೋಟತೋಟದಲ್ಲಿ

ಇದರಲ್ಲಿ
ನಾನು ಯಾವ ತೋಟವ ಹೊಗಲಿ
ಯಾವ ಹೂವನ್ನು ಕಣ್ತುಂಬ ನೋಡಲಿ

ಕೈಯಿಂದ ಸೋಕಿ, ಮೂಗಿಂದ ಮೂಸಲಿ
ಇಷ್ಟಮೂರ್ತಿಯ ಪೂಜೆಗೋಸ್ಕರ ಕೀಳಲಿ?

ಈ ಹೂವ ನೋಡಿದರೆ ಆ ಹೂವು ಕರೆಯುವುದು
ಈ ತೋಟ ಹೊಕ್ಕರೆ ಆ ತೋಟ ಮುನಿಯುವುದು
"ಹೇಳಿ: ಯಾವ ಹೂವಿನ ಬಳಿ ಸಾರಲಿ?"
ಎಂದು ಕೇಳುತ ಬಂದೆ
ತೋಟತೋಟಗಳಲ್ಲಿ
ಹೂವುಹೂವುಗಳನ್ನು

ಅವು ಕೊನೆಗೆ
ಹೇಳಿದವು
ನಾವೆಲ್ಲ ಒಂದೊಂದು ಕನ್ನಡಿ
ನಿನ್ನ ನಿಜವಾದ ಮುಖಕಾಗಿ

ಮಾರ್ಚ್, ೧೯೮೮

ಪ್ರಭುದೇವರ ಜಾತ್ರೆ

ಉಳವಿಯಲ್ಲಿ ನಡೆಯಲಿದ್ದ ಪ್ರಭುದೇವರ ಜಾತ್ರೆಗೆಂದು
ಪಡ್ಡೆಹುಡುಗರ ಗುಂಪೊಂದು ಹೊರಟಿತ್ತು
ಕಾಲ್ನಡಿಗೆಯಲ್ಲಿ
ಶಿಶುನಾಳವೆಂಬ ಕುಗ್ರಾಮದಿಂದ

ಆ ಗುಂಪಲ್ಲಿ ಒಬ್ಬ
ಅರೆಹುಚ್ಚ ಸಾಬಣ್ಣ

ಉಳಿದವರು ಜಾತ್ರೆ ಹಾಗಿರಬಹುದು ಹೀಗಿರಬಹುದು
ಜಾತ್ರೆಗೆ ಯಾರು ಯಾರು ಬರಬಹುದು
ಅಲ್ಲಿ ಏನೇನು ಸಿಕ್ಕಬಹುದು
ಎಂದು ಹರಟೆಕೊಚ್ಚುತ್ತ
ಕೇಕೆ ಹಾಕುತ್ತ ನಡೆಯುತ್ತಿದ್ದಾಗ
ಹಠಾತ್ತನೆ ನಿಂತ
ಮೌನಿ ಸಾಬಣ್ಣ
"ಇಲ್ಲೇ ಕುಂತಾನ ನೋಡ್ರೋ
ನಿಮ್ಮ ಆ ಪ್ರಭುದೇವ"

ಈಗಾಗಲೇ ಜಾತ್ರೆಯಲ್ಲಿ ಪೂರ್ತಿ ಕಳೆದುಹೋಗಿದ್ದ
ಆ ಪಡ್ಡೆ ಹುಡುಗರ ಕಣ್ಣಲ್ಲಿ
ಅಲ್ಲಿ ಆಗ ಎದುರಿಗೆ
ಜಾಲಿ ಮರದ ಅಡಿಯಲ್ಲಿ
ಕೂತಿದ್ದ ಆತ
ಚಿಂದಿಬಟ್ಟೆ ಕೂರೆಗಳ ತವರುಮನೆ
ತಿಗಣೆ ಸೊಳ್ಳೆ ನೊಣಗಳ ಜೀವಂತ ಅರಮನೆ
ಗುಳಿಬಿದ್ದ ಕಣ್ಣು ಕೆನ್ನೆ
ಎಲುಬು ತೊಗಲಿನ ತಡಿಕೆ

ಪ್ರಭುದೇವನೂ ಅಲ್ಲ ಗಿಬುದೇವನೂ ಅಲ್ಲ
ಎಂದು ಹೇಳಿದರು ಆ ಪಡ್ಡೆ ಹುಡುಗರು:
"ಲೋ ಹುಚ್ಚ ಸಾಬಣ್ಣ
ಇವ ಬರೀ ತಿರುಕ ಅದಾನ"

ಈ ನಗೆಚಾಟಿ ಕೇಳದ ಹಾಗೆ ಮೈದುಂಬಿ
ಕಂಬನಿದುಂಬಿ ಆ ಸಾಬಿ
ಕೊಳಕು ತಿರುಕನ ಮುಂದೆ
ಹಾಡತೊಡಗಿದ:
"ಮೂರು ಲೋಕದ ಸ್ವಾಮಿ ಇವ ಕಾಣಿರೋ
ಎಲ್ಲ ದೇವರ ಜೀವ ಇವ ಕಾಣಿರೋ"

ಆಮೇಲೆ, ಈ ದಂತಕತೆಯ ಪ್ರಕಾರ
ಜಾತ್ರೆಯ ಪ್ರಭುದೇವರನ್ನು
ಈ ಗುಗ್ಗುವಿಗೆ ತೋರಿಸಲೇಬೇಕೆಂದು
ಎಳೆದೊಯ್ಯುತ್ತಾರೆ ಅವನನ್ನು ಪಡ್ಡೆ ಹುಡುಗರು
ಒಂದು ಕ್ಷಣದ ನಂತರ
ಹಿಂತಿರುಗಿ ನೋಡಿದರೆ
ಆ ತಿರುಕ ಜಾಲಿಮರ
ಎಲ್ಲ ಮಾಯವಾಗಿರುತ್ತವೆ

ಆದರೂ
ಯಾಕೆ ಹೋಗುತ್ತಾನೆ ಆ ಸಾಬಣ್ಣ-
ಶಿವಯೋಗಿ ಷರೀಫ
ಪಡ್ಡೆಹೈಕಳ ಜತೆಗೆ
ಉಳವಿಗೆ
ಪ್ರಭುದೇವರಿರದ ಪ್ರಭುದೇವರ ಜಾತ್ರೆಗೆ?

ಆಗಸ್ಟ್, ೧೯೮೮

ಅಂಬಪಾಲಿ

೧

ಏನಾಗಿತ್ತು ನೀನಾಗುವ ತನಕ
ಅಂಬಪಾಲಿ ಈ ವೇಸಾಲಿ?
ಏನನಿತ್ತಿತ್ತು ನಿನ್ನನೀಯುವ ತನಕ
ಅಂಬಪಾಲಿ ಈ ವೇಸಾಲಿ?

ವಲಸೆ ಹೋಗುವ ಮಲಯಮಾರುತ ಪಡೆದಿದ್ದಾನೆ
ನೆಲೆಯನ್ನು ಅಂಬಪಾಲಿ ನಿನ್ನ ಸನಿಹದಲ್ಲಿ

ಎಲೆಗುಂಪಲು ಕಿಕ್ಕಿರಿದ ಆಮ್ರವನದಲ್ಲಿ
ಮೈಮುಚ್ಚಿ ಬಚ್ಚಿದ್ದ ಪಕ್ವಫಳಗಳಿಗೆಲ್ಲ
ದೊರೆತಿವೆ ಆಕಾರ ಅರ್ಥ ಅಂಬಪಾಲಿ
ನಿನ್ನಂಗ-ಲಿಂಗ ಹೊರಗು-ಒಳಗುಗಳಲ್ಲಿ;

ಹಗಲಿರುಳು ಪ್ರತ್ಯೇಕ ಕಾರಾಗೃಹದಲ್ಲಿ
ಅನವರತ ಕಾದು ಕರಗುತ್ತಿದ್ದ
ಸೂರ್ಯ ಚಂದ್ರರಿಬ್ಬರಿಗೂ ಈಗ
ಒಂದೇ ಮನೆ-ನಿನ್ನ ಮುಖದಲ್ಲಿ
ಒಂದೇ ಬೆಳಕು-ನಿನ್ನ ಕಣ್ಣುಗಳಲ್ಲಿ

ಏನಾಗಿತ್ತು ನೀನಾಗುವ ತನಕ

ಹಗಲೇ ಇರುಳಾಗಿದೆ ನೀ ಬಂದ ದಿನದಿಂದ
ಇರುಳು ಹಗಲಾಗಿದೆ ನೀ ತಂದ ಕನಸಿಂದ

ನೀನು ಬರುವ ತನಕ ವೇಸಾಲಿಯಲ್ಲಿ
ಕೂಗುತ್ತಾ ಇತ್ತು ಹೊನ್ನು ಕಕ್ಕಾವಿಕ್ಕಿ-
ಇಡಿ ಇಡಿ ನನಗೊಂದು ಜೀವದೊಡವೆಯನ್ನು;

ಕೇಳುತ್ತಾ ಇತ್ತು ರೇಷ್ಮೆ ರೇಗಾಡುತ್ತ-
ಕೂಡಿ ಕೂಡಿ ನನಗೊಂದು ಪ್ರಾಣದುಡಿಗೆಯನ್ನು;
ಅಳುತ್ತಾ ಇತ್ತು ಆಳು-ಅರಸರ ಭೇದ;
ಮಿಸುನಿ ವಿರುದ್ಧ ಚಿಂದಿ ಅರಿವೆಯ ಕ್ರೋಧ;
ಭಿನ್ನ ಮತಗಳ ವಾದ ವಿಚ್ಛೇದ

ನೀ ಬಂದ ಬಳಿಕ ವೇಸಾಲಿಯಲ್ಲಿ
ಆಳರಸರೆಲ್ಲ ಬರೀ ಆಳುಗಳು;
ಮಿಸುನಿಯ ಗಟ್ಟಿಗಳು ಹರಿದೆಸೆದ ಚಿಂದಿಗಳು
ಗತಿಗೆಟ್ಟು ಭಿನ್ನಮತಿಗಳು
ವಾದವಿವಾದ
ನಿರ್ವಿವಾದ

ಮೊರೆಯಿಡುತ್ತಾರೆ ಎಲ್ಲರೂ
ಏಕತ್ರ ಸರ್ವತ್ರ

ಏನು ಕಾಯುವುದು ನಮ್ಮನ್ನು ಈ ದಾಳಿಯಿಂದ
ದೂರದಿಂದ ಶೀತಲವಾತ
ಬಳಿಹಾಯ್ದು ಮೇಲೆರಗಿ ವಿಲಯ ಝುಂಝಾವಾತ
ತರಗಲೆ ಮಾಡಿ ನರಲೋಕವನ್ನು
ಗಿರಗಿರ ತಿರುಗಿಸುವ ಅಂಬಪಾಲಿ ನಿನ್ನಿಂದ?

ನೀ ಬರುವ ಮೊದಲು ಅಂಬಪಾಲಿ
ಈ ವೇಸಾಲಿ ಬರೀ ವೇಸಾಲಿ
ಈಗ ವೇಸಾಲಿಯೇ ಮಗಧ
ಕೋಸಂಬಿ ವಾರಣಾಸಿ

ಎಲ್ಲ ಅರಸರೂ ನಿನ್ನೆದುರು ತಿರುಕರು
ಎಲ್ಲ ಶೂರರೂ ನಿನ್ನೊಳಗೆ ಸೆರೆಯಾಳುಗಳು
ಎಲ್ಲ ಸಂಪತ್ತೂ ಈಗಿಲ್ಲಿ ಕಿಂಚಿತ್ತು

ಎಲ್ಲ ಗುಂಡಿಗೆ ಕಣ್ಣು ಕೈಯಿ
ಖಾಲಿ ತಿರುಪೆ ಪಾತ್ರೆ
ಅಂಬಪಾಲಿ ನಿನಗಾಗಿ
ನಿನ್ನ ಪ್ರೀತಿಗಾಗಿ

೨

ಹೀಗೆ ಶಾಪವಾದಾಗ ರೂಪು
ವಿಪತ್ತಾದಾಗ ಸಂಪತ್ತು ವೇಸಾಲಿಯೆಲ್ಲ
ಆದಾಗ ಮುಂಗುರುಹು ನಿನ್ನ ಮುಂಗುರುಳು
ಮೂಲೋಕ ವಿಲಯಕ್ಕೆ

ಮೂಡಲೇ ಬೇಕು
ಮೂಡಣದ ನಭದಲ್ಲಿ:
ಒಂದು ತಿರುಪೆ ಪಾತ್ರೆ
ಒಂದು ವಿಕಸಿತ ಕಮಲ
ಸೂರ್ಯವದನದ ಮೇಲೆ ಚಂದ್ರಹಾಸ

ಒಡ್ಡಲೇಬೇಕು ನಿನ್ನೆದುರು
ಬುದ್ಧ ಪ್ರಸಿದ್ಧ ತಿರುಕರೆಲ್ಲರ ಅರಸ
ಶೂನ್ಯ ಭಿಕ್ಷಾಪಾತ್ರೆಯನ್ನು

ಸೆರೆಯಾಳುಗಳಿಗಾಗಲ್ಲ, ಸೆರೆಗಾಗಿ
ಆಳುಗಳಿಗಾಗಲ್ಲ, ಅರಸಿಗಾಗಿ
ವೇಸಾಲಿಗಾಗಲ್ಲ
ಅಂಬಪಾಲಿ ನಿನಗಾಗಿ
ನಿನ್ನ ತ್ಯಾಗಕಾಗಿ

ಏನಾಗುತ್ತದೆ ನೀನಾದ ಬಳಿಕ
ಅಂಬಪಾಲಿ ಈ ವೇಸಾಲಿ?
ಏನನೀಯುತ್ತದೆ ನಿನ್ನನಿತ್ತ ಬಳಿಕ
ಅಂಬಪಾಲಿ ಈ ವೇಸಾಲಿ?

ಅಕ್ಟೋಬರ್, ೧೯೮೮

ಮಣಿಮೇಗಲೆ

ಏಳು ಕಡಲಿನ ನೀಲಿ ಬಸಿರಿನ ದಾವಾನಲವೆ
ಸುರತದ ತೀವ್ರ ಕ್ಷಣದಲ್ಲಿ ಬರುವ ಪ್ರಜ್ಞೆಯ ಕೂಸೆ
ಅಲುಗಿನ ನಿಡುಹಾದಿಮೇಲೆ ನಡೆಯಿಸುವ ಕ್ರೂರ
ಕರುಣೆಯ ಗುರಿಯೆ
ತುಟಿತುಟಿಯ ಸೋಂಕಲ್ಲಿ ಕಡಲುಪ್ಪುರುಚಿಯೆ
ಒಡಲ ನಡುಸಂದಿಯಲಿ ಎದ್ದ ಜ್ವಾಲೆಯ
ಶೋಕವನದಲ್ಲಿ ಬಯಕೆಗಳ ಮಂದ ಬೆಳಕಲ್ಲಿ
ತಿರುಕಚೂಣೆಗಳಿಗೆಲ್ಲ
ಅಕ್ಷಯದ ಭಿಕ್ಷಾಪಾತ್ರೆಯಿಂದ ಭಿಕ್ಷೆ ನೀಡುವ ಮಗಳೆ
ಗುಡುಗುಗಳ ಮುಂಜಾನೆ ಚಿತೆಬೂದಿಯಿಂದ
ಹೂವುಗಳ ರಂಗೋಲೆ ಬಿಡಿಸುವವಳೆ
ಪ್ರತಿ ಬಿದಿರುಮೆಳೆಯಲ್ಲಿ ಚಟ್ಟ ತೊಟ್ಟಿಲುಗಳ ಅಡಗಿಸಿಟ್ಟವಳೆ
ಕಂಪಿನಿಬ್ಬನಿ ಮೊಗ್ಗುಗಳ ಆರಿಸಿತಂದು
ಕೆಂಡದೊಡಲಿನ ಸೂರ್ಯನಿಗೆ ತೊಡಿಸುವವಳೆ

ನೀನು
ಕಡಲಾಳ ತಳಮಳಶಾಂತೆ

ಹೆಸರು: ಮಣಿಮೇಗಲೆ

ಡಿಸೆಂಬರ್, ೧೯೮೮

ನಾಗಾರ್ಜುನ

ನಾಗಾರ್ಜುನ ೨ನೇ ಶತಮಾನದ ಮಹಾಯಾನ ದಾರ್ಶನಿಕ, ಅನುಭಾವಿ, ತಾಂತ್ರಿಕ, ರಸಸಿದ್ಧ, ತರ್ಕಜ್ಞ, ವಿಜ್ಞಾನಿ. ಶಾತವಾಹನರ ಕಾಲದಲ್ಲಿ ಬದುಕಿದವನು. ಶಾತಕರ್ಣಿ ಚಕ್ರವರ್ತಿಗೆ ಸೆರೆಯಾಳುಗಳನ್ನು ನೋಡಿಕೊಳ್ಳುವುದರ ಬಗ್ಗೆ ಚಾಣಕ್ಯನ ಅರ್ಥಶಾಸ್ತ್ರದ ಪರಿಕಲ್ಪನೆಗಳನ್ನು ಟೀಕಿಸಿ ಪತ್ರ ಬರೆದವನು. ತನ್ನ ರಸಸಿದ್ಧ ಯೋಗ ಸಾಧನೆಯಿಂದ ಸುವರ್ಣಕಾಯವನ್ನು ಪಡೆದುಕೊಂಡಿದ್ದ. ೨೦೦ ವರ್ಷ ಬಾಳಿ ತನ್ನ ಕಾಲದ ವೈರುಧ್ಯಗಳಿಂದ ಬೇಸತ್ತು ತನ್ನ ಶಿಷ್ಯ ಆರ್ಯದೇವನಿಂದ ತನ್ನನ್ನು ತಾನೇ ಕೊಲ್ಲಿಸಿಕೊಂಡ.

೧ ಬೋಧಿಸತ್ವರ ಪ್ರಾರ್ಥನೆ

ಭವದ ಚಿಪ್ಪೊಡೆದು
ದಿವದ ಗಡಿ ದಾಟಿ
ಬರದೆ ಹೋಗದೆ ಹೋದ
ಸಿದ್ಧರೆ
ಬುದ್ಧರೆ

ಕರೆದರೂ ಕೇಳಿಸದ ನದಿ ದಂಡೆ ಆಚೆ
ಬೋಧಿಫಲ ತರಿದುಂಡು
ಫಲದಾಸೆ ನೀಗಿ

ಯಾರೋ ಕೂಗಿದರೆಂದು
ಯಾರೋ ಕೊರಗಿದರೆಂದು
ಮರುಗಿ ಮರಳಿದವರೆ
ಮರಳ ಕಣದ ಹಾಗೆ ಗಣತಿ ಮೀರಿದ ಬೋಧಿಸತ್ವರೆ
ಭದಂತರೆ

ಆ ದಂಡೆ ಈ ದಂಡೆ
ನಡುವೆ
ಎಲ್ಲಿ ಸೇತುವೆ?

೨ ನಾಗಾರ್ಜುನನ ಶಂಕೆ

ಹೊಳೆಬಿಸಿಲು ಹೊನ್ನ ಕಳಶಗಳು
ಬಿಳಿಮುತ್ತು ಹವಳ ನೀಲಮಣಿ ಪಚ್ಚೆ
ಹೊತ್ತುತರುವ ಮಣ್ಣುಗಾಡಿಗಳು
ಕಡಲಾಚೆ ನಾಡುಗಳ ಛಾತಿ ಕೆಣಕುವ
ಹರಿತುರಗ ಸೇನೆ ಶಸ್ತ್ರಾಗಾರಗಳು
ವಿಶಾಲ ಮಂದಿರ ವಿಹಾರಗಳು
ಸಂಗೀತ ನಾಟ್ಯ ಗೋಷ್ಠಿಗಳು
ತರ್ಕ ತಂತ್ರ ಸಿದ್ಧಾಂತ ಶಾಸನ
ಸಾರ ಗಟ್ಟಿ ಗಟ್ಟಿ
ಕಟ್ಟಿಟ್ಟ ಗ್ರಂಥರಾಶಿ
ಎಲ್ಲೆಲ್ಲೂ ಯಾಕೆ ನಿಟ್ಟುಸಿರು?
ಯಾಕೆ ಹಸಿವು?
ಯಾಕೆ ನೋವು?
ಕಾಡುಕತ್ತಲೆ ದಂಡೆತ್ತಿ
ನುಗ್ಗಿ ರಾಜಧಾನಿಗಳಲ್ಲಿ
ಎದೆಎದೆಗೂಡಲ್ಲಿ ಸಿಂಹ ಶಿಬಿರ
ಗುಳ್ಳೆನರಿಗಳ ನ್ಯಾಯ
ಬುದ್ಧಾಸನದಲ್ಲಿ ಬಕನ ಧ್ಯಾನ

೩ ಶಾತಕರ್ಣಿಗೆ ನಾಗಾರ್ಜುನನ ಪತ್ರ

ಶಾತಕರ್ಣಿ ನೀನು
ಶಾತವಾಹನ ಚಕ್ರವರ್ತಿ
ಶಸ್ತ್ರಶಾಸ್ತ್ರ ಪಂಡಿತ
ಶತ್ರುದಮನ ನೀತಿಗಳಲ್ಲಿ ನಿಷ್ಣಾತ
ಗೋದಾವರಿ ನೀರು
ದಕ್ಷಿಣ ಜಲಧಿ
ಶ್ರೀಗಿರಿ ಸಂಪತ್ತು
ಸ್ವಂತ ಸ್ವತ್ತೆಂದು ಸ್ವಾಯತ್ತೆ ಪಡೆದವನೆ

ಇನ್ನೂರು ಶಿಶಿರಗಳ ಬಳಿಕ
ಇನ್ನೇಸು ಮಂಜು ಸೋನೆ
ಮೃತ್ಯು ಬಾಧೆ
ತಗುಲಿದರೂ ಕನಲದೆ ಕದಲದೆ ಉಳಿದ

ಈ ಪರುಷಕಾಯ
ಸಾಕಯ್ಯ

ಹೊತ್ತಿಸಿಕೋ ನಿನ್ನ ಕಣ್ಣಲ್ಲಿ ನನ್ನ ಬೆಳಕನ್ನು
ಕಟ್ಟಿಕೋ ನಿನ್ನ ಎದೆಯಲ್ಲಿ
ಕನಸುಹಕ್ಕಿ ಗೂಡನ್ನು

ಈ ದಂಡೆ ಆ ದಂಡೆ
ನಡುವೆ
ಕುಸಿದರೂ ಸೇತುವೆ
ನದಿ ಹರಿಯುತ್ತಲೇ ಇದೆ
ನಡೆಸು ನಡುನೀರಲ್ಲಿ ಎಚ್ಚರದಿಂದ
ಭವದ ದೋಣಿಯನ್ನು

ನಾಗಾರ್ಜುನ ಪರುಷ ಸೋಕಿದ ಬಳಿಕ
ಅವಲೋಹ ನೀನಲ್ಲ

ಹೋಗಿಬರುವೆ ಇನ್ನು
ಹೊರಡು ನೀ ಮತ್ತೆ ಅವಲೋಹಗಳ ಗಣಿಗೆ
ಅಳಲು ಕರೆಯುವ ಧರೆಗೆ
ಹುಲುಕಡ್ಡಿ ಕ್ರಿಮಿಕೀಟಗಳ ಮೊರೆಗೆ

ಅಕ್ಟೋಬರ್, ೧೯೮೦

ಶಂಸ್-ಇ-ತಬ್ರೀಜ್

ಶಂಸ್-ಇ-ತಬ್ರೀಜ್ ಹನ್ನೆರಡನೆ ಶತಮಾನದ ಸೂಫಿ ಕವಿ. ರೂಮಿಯ ಗುರು, ಪ್ರಿಯತಮ. ರೂಮಿಯಂತಹ ಘನತೆವೆತ್ತ ಮೌಲಾನಾ ಹುಚ್ಚ ಶಂಸ್‌ನ ಬೆನ್ನುಬಿದ್ದದ್ದನ್ನು ಕಂಡು ರೂಮಿಯ ಅನುಯಾಯಿಗಳು ಕುಪಿತರಾಗಿ ಶಂಸ್‌ನ ಚರ್ಮ ಸುಲಿದು ಅವನನ್ನು ತುಂಡರಿಸಿದರು. ಆಗ ರೂಮಿ ಅವನ ಸುಲಿದ ಚರ್ಮವನ್ನು ಕೊರಳ ಹಾರವಾಗಿ ಧರಿಸಿ ಉನ್ಮತ್ತನಾಗಿ ಕುಣಿಯುತ್ತ ಶಂಸ್‌ನ ಕುರಿತು ಕವಿತೆ ಕಟ್ಟಿ ಹಾಡಿದನೆಂದು ಪ್ರತೀತಿ. ಈ ಘಟನೆಗಳು ನಡೆದ ತುರ್ಕಿಸ್ಥಾನ ಆಗ ಮಂಗೋಲರ ವಶದಲ್ಲಿತ್ತು.

ಗುಲಾಬಿ ವನಗಳೆಲ್ಲ ಕಸಾಯಿಖಾನೆಗಳಾಗಿವೆ ಇಂದು
ಮಧುಶಾಲೆಯಲ್ಲಿ ಮತ್ತೊಬ್ಬ ಪ್ರೇಮಿ ವಧೆಯಾಗಿದ್ದಾನೆ ಇಂದು
ಉಳಿದ ಯಾವ ದ್ರಾಕ್ಷಿ ತೋಟದ ಯಾವ ಗೊಂಚಲನ್ನೇ ಹಿಂಡು
ರಸವಿಲ್ಲ
ರಕ್ತ ಬರೀ ರಕ್ತ
ಶಂಸ್-ಇ-ತಬ್ರೀಜ್, ನಿನ್ನ ರಕ್ತ

ಹೇಳು ಸಾಕಿ ಹೇಳು
ಯಾವ ಕಡೆಗಿದೆ ಮಕ್ಕಾದ ರಸ್ತೆ
ಎಲ್ಲಿ ಹೂತುಹೋಗಿದೆ ಝಂಝಂನ ಜೀವಜಲ

ಕಾಬಾ ಕಳುವಾದ ಹಾಗೆ
ಖುರಾನು ಕುಷ್ಠ ಹಿಡಿದ ನೆಲದಿಂದ ಸೀದಾ ಹೊರಟಂತೆ
ಕನಸೋ ನನಸೋ
ಕೋನ್ಯಾದ ತುಂಬಾ.....

ಕಾಡಿಂದ ಸಿಂಹಗಳ ಫವುಜು
ನಾಡುನಗರಗಳೆಲ್ಲಾ
ಬರೀ ಮೂಳೆರಾಶಿ
ಬರೀ ಹೆಣಗಳ ನಾತ

ಅಲ್ಲಾ ಹೋ ಅಕ್ಬರ್.....
ನಾವೇನು ನಿನ್ನ ಚದುರಂಗದಲ್ಲಿ ದಾಳಗಳು
ನಾವೇನು ನಿನ್ನ ಕೊರಳಿಗೆ ಕೊಳಲು
ನಾವೇನು ನಿನ್ನ ಗಾಳಿ ಬೀಸುವ ಕಡೆ
ಪಟಪಟ ಬಡಿವ ಬಾವುಟಗಳು

ಹೇಳು ಎಲ್ಲಿದೆ ಕತ್ತಿ
ಮುಸ್ತಫಾ ಕೊಟ್ಟ ಶಾಂತಿಯ ಕತ್ತಿ
ಮತ್ತೊಬ್ಬ ತಾಯ ಮೊಲೆ ಕಡಿದು
ಮತ್ತೊಂದು ಕೂಸನ್ನು ನೆಲಕ್ಕೆ ಅಪ್ಪಳಿಸುತ್ತಿರುವ
ಮಂಗೋಲ ರಾಕ್ಷಸರ ನಾಡಲ್ಲಿ?

ನಿಲ್ಲಿಸಿ ನಮಾಜನ್ನು ಬಂಧುಗಳೆ
ಎಲ್ಲಿ ಕೊಂದು ಹಾಕಿದರು ಹೇಳಿ ನನ್ನ ಪ್ರಿಯತಮನನ್ನು
ಎಲ್ಲಿ ಹೂತು ಹಾಕಿದರು ಅವನ ಕಣ್ಣ ಕದಿರರನ್ನು
ಕವಿತೆ ಜೇನಿಕ್ಕಿದ್ದ ಹೃದಯ ಕುಂಭವನ್ನು

ರೂಮಿ ಹುಚ್ಚ ಅನ್ನುವ ಜಗವೇ
ನಿನ್ನ ಪಾಲಿನ ನರಕ ಇನ್ನೂ ಉಳಿದಿದೆ
ನನ್ನ ಪಾಲಿನ ಸ್ವರ್ಗ ಕಳೆದು ಹೋಗಿದೆ
ಆ ಸ್ವರ್ಗ ಇತ್ತು ಶಂಸ್‌ನ ಕಣ್ಣಲ್ಲಿ
ಅವನೇ ಗಂಡ ನನ್ನ ಪಾಲಿಗೆ
ಅವನೇ ಕೂಸಾಗಿ ತುಟಿಯಿಕ್ಕಿದ್ದ ನನ್ನೆದೆ ಹಾಲಿಗೆ
ಅವನೇ ನನ್ನ ಕನಸಿನ ನಾಲಗೆ

ಮಕ್ಕಾ ಇತ್ತು ಅವನ ಪಕ್ಕದಲ್ಲೇ
ಮದೀನಾ ಅವನ ಬದಿಯಲ್ಲೇ
ಮುಸ್ತಫಾ ಅವನ ಎದೆಯಲ್ಲೇ

ಎಲ್ಲಿತ್ತು ಲಿಂಗ ನಮ್ಮ ಪ್ರೇಮಕ್ಕೆ
ಎಲ್ಲಿತ್ತು ಅಂಗ ನಮ್ಮ ಪ್ರೇಮಕ್ಕೆ

ಮರುಭೂಮಿಯಲ್ಲಿ ಅಲೆಯುವವರಿಗೆ
ತಿಳಿನೀರುಬುಗ್ಗೆ ತೋರುವ ಖಿಜರ್
ಎಲ್ಲಿದೆ ಹೇಳು

ಎಲ್ಲಿದೆ ತೋರು
ಕಸಾಯಿಖಾನೆಗಳಲ್ಲಿ ಗುಲಾಬಿ ವನ ನೆಡುವ
ವಧಾಸ್ಥಾನಗಳನ್ನು ಮಧುಶಾಲೆ ಆಗಿಸುವ
ರಕ್ತವನ್ನೇ ರಸವಾಗಿಸುವ
ನನ್ನ ಮೂಳೆಗಳ ರಸವಾಗಿರುವ
ನನ್ನ ಪ್ರಿಯಕರ ಶಂಸ್‌ನ
ಮಾಂಸದ ತುಕಡಾ

ಎಲ್ಲಿದ್ದರೂ ಬನ್ನಿ
ಅಲ್ಲಿಯೇ ಸೇರಿ ದರವೇಶಿ ಬಾಂಧವರೆ
ಅಲ್ಲಿ ಮಾತ್ರ ಉಳಿದಿದೆ ಮಾಂಸ
ಅಲ್ಲಿ ಮಾತ್ರ ಉಳಿದಿದೆ ಮಧು

ಇಲ್ಲಿ ಮಾತ್ರ ಉಳಿದಿದೆ ಕವಿತೆ

ಆಗಸ್ಟ್, ೧೯೮೦

ಮರವಾಗದವರು

ನೀವು ಕುಂತಕುಂತ ಕಡೆಯಲ್ಲಿ
ಅರಳಿ ಆಲ ಮಾವು ಬೇವು
ಬೇರಿಳಿಸಿ ಕೊಂಬೆ ಚಿಮ್ಮುವುವು
ಬಿಸಿಲ ಹಾದಿಯ ದಣಿವಿಗಾಸರೆಯಾಗಿ
ಇನಿಗನಸುಗಳಿಗೆ ಆಗರವಾಗಿ

ನೀವು ನಿಂತನಿಂತ ಕಡೆಯಲ್ಲಿ
ಮೊಳೆಯುವುವು ದೇವಮೂರ್ತಿಗಳು ಶಿಲೆಯಲ್ಲಿ;
ಆ ಮೂರ್ತಿಗಳ ಪೀಠವೇ ಕೇಂದ್ರ ಎಲ್ಲಕ್ಕೂ;
ಆ ಬಳಿಕ ಸುತ್ತ ಹಬ್ಬಿಕೊಳ್ಳುವ
ಮಂದಿರದ ಬ್ರಹ್ಮಾಂಡ ಮಾದರಿಗಳು

ನೀವು ಅಂದ ಅಂದ ನುಡಿಯೆಲ್ಲ
ಕಾಳುಗಟ್ಟುವುವು ನಮ್ಮ ಉಡಿಯಲ್ಲಿ
ಮುಕ್ಕುವೆವು ಆ ಬಾಲವೃದ್ಧರಾದಿಯಾಗಿ
ಹಗಲಿರುಳ ಚಕ್ರ ತಿರುಗಿಸುವಾಗ

ಆದರೂ ನೀವು
ಮರವಾಗಲಿಲ್ಲ ಕುಂತ ಕಡೆಯಲ್ಲಿ
ಸಿಡಿಲಫಲ ಬೇಕೆಂದು
ಶಿಲೆಯಾಗಲಿಲ್ಲ ನಿಂತ ಕಡೆಯಲ್ಲಿ
ಬಯಲುಮನೆ ಬೇಕೆಂದು
ಸಿಗೆಹಾಕಿಕೊಂಡಿಲ್ಲ ಅಂದ ನುಡಿಯಲ್ಲಿ
ಬರಿ ತಿರುಳು ಬೇಕೆಂದು

ಎಲ್ಲವೂ ಆಗಬೇಕೆಂದು
ಏನೂ ಆಗದ ಹಾಗೆ
ಎದ್ದು ನಡೆದಿದ್ದೀರಿ
ಕಂತೆ ಒಗೆದಿದ್ದೀರಿ.

ಜೀವ ಜೀವಾಳವಾಗಿ

ಜನವರಿ, ೧೯೯೦

ಮುಸಮುಸ ಅಳಬ್ಯಾಡೆ, ಕುಸುಮಾಲೆ, ಕುಸುಮಾಲೆ

೧

ಕುಸುಮಾಲೆ ಕುಸುಮಾಲೆ ಮುಸಮುಸ ಅಳಬ್ಯಾಡೇ
ಹಸೀ ಮಣ್ಣಿನ ಮ್ಯಾಲೆ ಮಕ ಇರಿಸಿ। ತಂಗ್ಯವ್ವೊ
ಹುಸಿ ಅಲ್ಲ ಕೇಳೇ ನನ ಮಾತ॥

ಊರು ಸುಡೊ ಕಾಳ್ಗಿಚ್ಚು ತೂರಿರುವ ಕಾಡೊಳಗೆ
ಯಾರು ಬಲ್ಲರು ಇರುವ ಸಿರಿಯ। ಅಡಗಿ ಅವೆ
ಕಾಳು ಕಡ್ಡಿ ಹೂವು ಹಣ್ಣು॥

ಗುಡುಗಿನ ತಳಗೆ ಅಡಗಿರುವ ಹಂಗೆ
ಕಡುಸುಗ್ಗಿ ಬೀಜ ಮಳೆ ಹನಿಯು। ದುಗುಡದ
ಕಡಲಡಿಯೆ ಮುತ್ತು ರತ್ನ॥

ಬ್ರಮ್ಮ ರಾಕ್ಷಸನಂಥ ನಮ್ಮೀ ಕಾಡೊಳಗೆ
ಬಿಮ್ಮಾನೆ ಬಂದ ಶಶಿ ಬಿಂಬ। ಅದರ್ಹಂಗೆ
ಸುಮ್ಮಕಿರು ಸೌಖ್ಯ ಬಂದೀತು॥

ಹುಲಿ ಸಿಮ್ಮ ಹೆಬ್ಬಾವು ಮಲೆವಂತ ಕಾಡೊಳಗೆ
ಕಳೆದಿರುವೆ ಸಿರಿಗಂಧ ಮರದಂತೆ। ಸುಮ್ಮಕಿರು
ಬಳಿ ಬರುವ ದೊರೆ ಮಗ ನಿನಗೆಂದು॥

ಕುಸುಮಾಲೆ ಕುಸುಮಾಲೆ ಮುಸಮುಸ ಅಳಬ್ಯಾಡೇ...

೨

ನೀಲಿ ಸೀಮೆ ದಾಟಿ ಗಾಳಿ ವೇಗ ಮೀರಿ
ದಾಳಿಯಿಕ್ಕುವ ಅವನು ನೆಲಕೆ। ಆಮ್ಯಾಕೆ
ಹಾಳು ಮಾಡುವ ನಿನ್ನ ಮನೆಯ॥

ಕಿಟಕಿಯ ಮುರಿದಾನು ಕದಗಳ ಕೆಡಹುವನು
ಲಟಲಟ ಗೋಡೆ ಉರುಳಿಸಿ। ಜಂತೆಗಳ
ಪಟದ್ಹಂಗೆ ಮ್ಯಾಲೆ ಹಾರಿಸುವ॥

ತಂದೆಯ ಮರೆಸುವ ತಾಯವ್ನ ತೊರೆಸುವ
ಬಂಧುಗಳ ಬಂಧ ಹರಿಸುವ। ನಿನ್ನನ್ನು
ಕಂಡೋರ ಮುಂದೆ ಕೈಯೊಡ್ಡಿಸುವ॥

ಎರಡಾಗಿ ಸೀಳುವನು ಮೂರಾಗಿ ಮುರಿವಾನು
ಬರಿಬತ್ತಲಾಗಿ ನಿಲಿಸುವ। ಹಲ್ಲುಗಳ
ಕಿರಿವಂತೆ ಮಾಡುವ ನಿನ್ನ ಕಂಡೋರ॥

ತನ್ನ ಗರುಡನ ಹೊನ್ನ ಕೊಕ್ಕೊಳಗೆ ಸಿಕ್ಕಿಸಿ
ಮಣ್ಣಿಂದ ಮ್ಯಾಲಕೊಯ್ಯುವನು। ಎಸೆಯುವ
ನಿನ್ನ ವೈಕುಂಠ ಗಿರಿ ತುತ್ತ ತುದಿ ಮ್ಯಾಲೆ॥

ಕುಸುಮಾಲೆ ಕುಸುಮಾಲೆ ಮುಸಮುಸ ಅಳಬ್ಯಾಡೇ...

ನವೆಂಬರ್, ೧೯೯೧

ಬಾಗ್ದಾದ್: ಒಂದು ಪ್ರಾರ್ಥನೆ

೧

ಈ ಹೊತ್ತು-
೧೯೯೧ರ ಫೆಬ್ರವರಿ ೪ರ ಸರುಹೊತ್ತು
ಫೆಬ್ರವರಿ ೫ ಇನ್ನೂ ಶುರುವಾಗದ ಹೊತ್ತು-

ಪಡುವಣ ಏಷಿಯದ ಅತ್ಯಂತ ನಾಗರಿಕ ಕೊಲುದಾಣದಲ್ಲಿ
ಕೋಳಿಕಳ್ಳನ ಕತ್ತಿನ ಮೇಲೆ
ಇಪ್ಪತ್ತೆಂಟು ಕಡಲುಗಳ್ಳರ ಲೂಟಿಕಾರರ
ಕೊಡಲಿಗಳು ಹೊಂಚು ಹಾಕುತ್ತಿರುವ ಹೊತ್ತು-

ನೊಬೆಲ್ ಪಾರಿತೋಷಕದ ಪರಿತೋಷದಲ್ಲಿ
ಡಬಲ್‌ಕಾಟಿನ ಮೇಲೆ ಗರ್ಬೊಚೇವ್
ಗೊರಕೆ ಹೊಡೆಯುವ ಹೊತ್ತು-

ಆಕಾಶದ ಬಾಂಬರುಗಳು ಎರಗುತ್ತಿರುವಾಗ
ಮಗು ಇರುಕಿಕೊಂಡು ಎಡ ಕಂಕುಳಲ್ಲಿ
ಬಂದೂಕು ಇನ್ನೊಂದು ಕೈಯಲ್ಲಿ-
ಈ ಸ್ಥಿತಿಯಲ್ಲು ಕಂದನಿಗೆ ಹಾಲೂಡುತ್ತಿದ್ದ
ವಿಯತ್ನಾಂ ತಾಯ ಧೀರ ವಾತ್ಸಲ್ಯವನ್ನು;

ಅಥವಾ

ಪಾರ್ಸಿ ಸಿಪಾಯಿಯ ಕತ್ತಿ ಕಿಬ್ಬದಿಯ ಕೀಲು ಹರಿವಾಗ
ಜ್ಯಾಮಿತಿಯ ಆಕಾರ ಗೆರೆಗಳಲ್ಲಿ
ಅಲುಗದ ಹಾಗೆ ನಿಂತಿದ್ದ
ಆರ್ಕಿಮಿಡೀಸನ ಭದ್ರ ಚಿತ್ತವನ್ನು;

ಅಥವಾ

ಕತ್ತಿ ತೂಗುತ್ತಿದ್ದರೂ ನೆತ್ತಿ ಮೇಲೆ
ಗೋಳಾಕಾರ ಭಾವಣೆಯ ಮೇಲೆ

ದೈವಸೃಷ್ಟಿಯ ರಂಗುರೂಪಗಳನ್ನು
ಅಚ್ಚಳಿಯದ ಹಾಗೆ ಬಿಡಿಸುತ್ತಿದ್ದ ಬಿಚ್ಚುಗಣ್ಣಿನ
ಮೈಕೆಲ್ ಏಂಜೆಲೋನ ವರ್ಣ ಸಮಾಧಿಯನ್ನು;

ಅಥವಾ

ಗರಿಷ್ಟ ಶಾಖದಲ್ಲೂ ಹೊಳೆಯುತ್ತಲೇ ಇರುವ
ನಕ್ಷತ್ರಗಳ ನಿರಮ್ಮಳ ಆಯುಷ್ಯವನ್ನು;

ಅಥವಾ

ಸ್ಫೋಟಗಳ ನಡುವೆ
ತುಟಿಪಿಟಕ್ಕೆನ್ನದೆ ಗಾಣ ಸುತ್ತುತ್ತಿರುವ
ನೆಲತಾಯ ನಿಗೂಢ ಮೌನವನ್ನು;
ದಯವಿಟ್ಟು ದಯಪಾಲಿಸು ನಮಗೆ
ನಮ್ಮೊಡಲ ಕಣಕಣದ ಅಣು ಹೊಕ್ಕುಳಿನಲ್ಲಿ ಹೊಕ್ಕುಳಿದು
ನಕ್ಷತ್ರ ದೂರಗಳಲ್ಲೂ ಬಿಚ್ಚಿತೋರುವ
ನಿಂತು ನಡೆಯುವ

ಓ ಅನಾದಿಯೆ!
ಆದಿಶಕ್ತಿಯೆ!

ಆದರೂ-

೨

ಹುಣ್ಣಿಮೆಯ ತುಂಬು ತಿಂಗಳಿನ ಜಾದೂವಿನಲ್ಲಿ
ತಣ್ಣಗೆ ಮಲಗಿದ್ದ ಶಾಂತಸಾಗರದ ಎದೆಮೇಲೆ
ಚೈತ್ರಗಳು ಹೋಗುತ್ತ ಬರುತ್ತ ಇದ್ದಾಗ
ಗೊತ್ತಿತ್ತೆ ನಿಮಗೆ
ಬಡಬಾನಲವೊಂದು ಅಡಗಿತ್ತು ಎಂದು
ಸಾಗರದೊಳಗೆ?

ನೆಲದ ಬಸಿರನ್ನೇ ಸಿಡಿಸಿ ಹಾಕುವ
ಬಾಂಬರುಗಳ ಅವತಾರ
ಗೊತ್ತಿತ್ತೆ ನಿಮಗೆ
ಅಡಗಿತ್ತು ಎಂದು
ಪಿಕಾಸೋನ ಶಾಂತಿ ಪಾರಿವಾಳದ ಎದೆ ಒಳಗೆ

ಮುಗುಳುನಗೆ ಶಾಂತಿಸಂಧಾನಗಳೊಳಗೆ
ಗೊತ್ತಿತ್ತೆ ನಿಮಗೆ
ಅಡಗಿದ್ದವೆಂದು ಸಮರ ಸನ್ನಾಹಗಳು?

ಗೊತ್ತಿತ್ತೆ-
ಸ್ವಾತಂತ್ರ್ಯ ಬೀಜಗಳಲ್ಲಿ
ಪಾರತಂತ್ರದ ವೃಕ್ಷಗಳು?

ಜ್ಯೋತಿಮ್ಮೈ ಹಿಂದೆ
ತಮಂಧ ಸೇನೆಗಳು

ಕಾಣದ ಕುರುಡಂದು:
ಕಾಣುವ ಕುರುಡಿಂದು:
ಎರಡು ಕುರುಡಿನ ನಡುವೆ
ಎಲ್ಲಿತ್ತು ನಡುಗಣ್ಣು.
ಹೇಳು ಬೆಳಕೆ.

ಎರಡು ಇರುಳಿನ ನಡುವೆ
ಎಲ್ಲಿತ್ತು ಹಗಲು.
ಹೇಳು ಯುಗವೆ.

೩

ಬಾಗ್ದಾದ್‌ನ ಹೆಸರಾಂತ ಸಂತ ಶೇಖ್
ಷಹಾಬುದ್ದೀನ್ ಸುಹ್ರವಾದೀ ಅವರ
ಶಾಗಿರ್ದ್ ಅಬ್ದುಲ್ ಖಾದ್ರೀ ಗಿಲಾನೀ ಅವರ ಸಿಲ್‌ಸಿಲಾದ
ಬೆಂಗಳೂರಿನ ಅಜ್ಞಾತ ಸಂತ ಅಕ್ಬರ್‌ಷಾ ವಲೀ ಅವರ ಶಾಗಿರ್ದ್
ಶೇಖ್ ಅಶದುಲ್ಲಾ ಖಾದ್ರೀ ವಲೀ ಅವರ ಮಜಾರ್‌ನ ಪಕ್ಕ
ಕೂತು ಪ್ರಾರ್ಥಿಸುತ್ತಿದ್ದೇನೆ
ಹಣ್ಣುಹಣ್ಣು ಮುದುಕನ ರೂಪದಲ್ಲಿ;

ಬಾಬಾ, ದುವಾ ಮಾಡಿ.
ನನಗೆ ಗೊತ್ತು-
ನೆತ್ತಿಮೇಲೆ ಹಾರುತ್ತಿರುವ ವಿಮಾನಗಳು
ಮೂಲತಃ
ದಿವ್ಯಲೋಕದ ಅಮರ ಪಕ್ಷಿಗಳು:
ಪಾಪ ಅವು ಅಮೆರಿಕಾದಲ್ಲಿ ಹೀಗಾಗಿಬಿಟ್ಟವು.

ಬಾಬಾ, ದುವಾ ಮಾಡಿ.
ಅಲುಗುತ್ತಿರುವ ಸುಸಜ್ಜಿತ ನಗರದ ನಡುವೆ
ನೆಲ ಬಿರಿದರೂ ಅಲುಗೆನೆಂಬ ಪಣತೊಟ್ಟು
ನೀವು ಶಾಂತವಾಗಿ ನಿದ್ರಿಸುವ ಹಾಗೆ
ನಾವೂ ನಿದ್ರಿಸುವ ಹಾಗೆ;

ಬಾಬಾ, ದುವಾ ಮಾಡಿ.
ಮಗುಚಿಟ್ಟ ಆಕಾಶ ಛಾವಣಿ ಕೆಳಗೆ
ಸಿಡಿತ ಮೊರೆತಗಳ ಈ ಲೋಕ
ನೀರವ ಗೋರಿಯಂತಾದಾಗ
ಗೋರಿಯೊಳಗಡೆ ನಿಶ್ಚಿಂತವಾಗಿ ಮಲಗಿರುವ ನಾವು
ಮೇಲೆದ್ದು ನಡೆಯುವ ಹಾಗೆ
ನೀವು ಈಗಾಗಲೇ ನಡೆದಿರುವ ಹಾಗೆ;

ಬಾಬಾ, ದುವಾ ಮಾಡಿ
ನೀವು ಹೋದ ಕಡೆ ನಾವು ಹಿಂಬಾಲಿಸುವ ಹಾಗೆ.

ನಿಮ್ಮ ಹಾದಿಗೆ ಅಡ್ಡಹಾಕುವ ರಕ್ತಹೊಂಡಗಳಲ್ಲಿ
ಅದ್ದಿರುವ ನಿಮ್ಮ ಪಾದಗಳ ಅಂಗಾಲ ಗುಲಾಬಿ ಗುರುತು
ಛಾಪು ಹಾಕಿದೆ ಮರಳುಗಾಡಿನ ತುಂಬ;

ಆ ನೆತ್ತರಿನ ಗುಲಾಬಿ ಗುರುತುಗಳ ಗುರುತ್ತಿಡಿದು
ಲೋಕ ನಡೆಯುವ ಹಾಗೆ

ಬೆಂಗಳೂರಿನ ಮರಳುಗಾಡುಗಳಲ್ಲಿ
ಬಾಬಾ, ದುವಾ ಮಾಡಿ

ಫೆಬ್ರವರಿ, ೧೯೯೧

ಅಂತರಗಂಗೆ

ಎಂಥಾ ಭರ್ಜರಿ ಜಾಗ ನಿಂತ ನೀರಿನ ಹರಹು
ಅಂತರಗಂಗೆ ಬೆಳವಿಗೆಗೆ-

ಬೇರುಂಟು ಆಳವಿಲ್ಲ; ಒಮ್ಮೆ ಬೆಳೆದು ಹರಡತೊಡಗಿದರೆ
ನೀರ ಪಾರ್ಥೇನಿಯಂ; ಆತುರದಿಂದ ದೂರದಿಂದ ಕಂಡ
ಕಣ್ಣಿಗೆ ನೀರು ನೀರಲ್ಲ, ನೆಲ ಎಂಬ ಭ್ರಮೆ

ಕಮಲ ಸೂರ್ಯನ ಕಡೆಗೆ ಮುಖಮಾಡುವ ಹಾಗೆ
ಸೂರ್ಯನ್ನ ಒಲಿಸುವ ಹಾಗೆ ಮಾಡುವುದಿಲ್ಲ
ಅಂತರಗಂಗೆ ತೋಡುವ ಸಣ್ಣ ನೇರಿಳೆ ಹೂವು;
ಅವು ಹಬ್ಬ ಎಮ್ಮೆ ಕೋಣನ ಕಣ್ಣಿಗೆ, ಎಲೆಗಳು ತುಪ್ಪ ನಾಲಿಗೆಗೆ
ನಿಂತ ನೀರೇ ನಡೆವ ನೆಲ
ಎಂದನಿಸಿ ಎಲೆಗಳಿಗೆ ಮನಸೋತು
ಮೇಯಬಯಸಿದ ಎಮ್ಮೆಗಳದೇಸು ಸಲ
ಕಾಲ್ತೊಡರಿಸಿಕೊಂಡು ಸಿಕ್ಕಿಬಿದ್ದವೋ
ಆಳವಿಲ್ಲದ ಬೇರ ಗೋಜಲ
ತಳವಿರದ ತೇಲುಬಲೆಯಲ್ಲಿ

ಅಂತರಗಂಗೆ ಹೀಗೆ ಹಬ್ಬಿಕೊಬ್ಬಿ ಬೆಳೆದಾಗ
ಅಂತರ ಜಲಕೆ ಸೂರ್ಯದರ್ಶನವಿಲ್ಲ ;
ಸೂರ್ಯನಿಗೆ ನೀರು ಕನ್ನಡಿಯಿಲ್ಲ.

ಏಪ್ರಿಲ್, ೧೯೯೧

ಉರಿಚಮ್ಮಾಳಿಗೆ

ಉರಿಚಮ್ಮಾಳಿಗೆ
ಧರಿಸಿ ನಡೆಯುವರ್‍ಯಾರು
ಮೂಡಲ ತೋಟಗಳ ದಾರಿವಳಗೆ

ಉರಿಚಮ್ಮಾಳಿಗೆಯ
ಅವಿಸಿ ಮಡಗುವರ್‍ಯಾರು
ನೆಲದ ಕಡಲಿನ ಬಸಿರ ಆಳದೊಳಗೆ

ಉರಿ! ಉರಿ! ಉರಿ! ಅಂತ
ಕಿತ್ತೆಸೆಯ ಹೊಂಟಾಗ
ಹಸ್ತಕಂಟುವ ಉರಿಯು
ಉಫ್ ಅಂತ ಉರುಬಿದರೆ
ಉಸುರಿಗಂಟುವ ಉರಿಯು
ತಕ್ಷಣ ಹಬ್ಬುತದೆ
ಅಂಗ ಲಿಂಗದ ವಳಗೆ

ಪಿಂಡಾಂಡವನ್ನೇಯೆ
ಬ್ರಮ್ಮಾಂಡ ಗಾತ್ರ
ಕಾಳುಗಿಚ್ಚನು ಮಾಡಿ
ಅದ್ಯಾರು ನಡೆದವರೆ
ನೆತ್ತಿ ಮ್ಯಾಗೆ ಹೊತ್ತ ಉರಿಚಮ್ಮಾಳಿಗೆ ಹೊತ್ತು
ಹೊತ್ತು ಬಂತೋ ಹೊತ್ತು
ಮೂಡಲದ ಮಲೆಯಿಂದ

ಅಲ್ಲಿಂದ
ಅದ್ಯಾರು ದಾಟವರೆ
ನಡುಭವದಂಬೋಧಿಯನು

ಉರಿಚಮ್ಮಾಳಿಗೆಯ
ಗುಲಾಮ ಹಡಗನೆ ಮಾಡಿ
ಉರಿಯ ಕಡಲೊಳಗದ್ದಿ
ಕಡಲ ಉರಿಯೊಳಗದ್ದಿ

ಉರಿಚಮ್ಮಾಳಿಗೆಯ ಉರಿಯ ನಾಲಗೆ ಕೋಟಿ
ಅದರೊಳಗೆ
ಬಂದು ಉರಿಯನ್ನೆತ್ತಿ
ಆಕಾಶ ದೀಪಗಳ ಅಂಟಿಸಿ ಮಡಗಿ ಒಂದೊಂದಾಗಿ
ಚಿಕ್ಕೆ ಪರಿಸೆಯ ನಡುವೆ

ಇರುಳ ತೇರನು ನಡೆಸಿ
ಯಾರು ಬಚ್ಚಿಕ್ಕುವರು
ಆ ಭಯಂಕರ
ಉರಿಚಮ್ಮಾಳಿಗೆಯ
ಕತ್ತಲಿನ ಪುಟ್ಟ ಎದೆಗೂಡಲೊಳಗೆ

ತಿರುಗಿ ಇನ್ನೊಂದು ಕಿತ.
ತಿರು ತಿರುಗಿ ಏಸೋ ಕಿತ
ಉರಿಚಮ್ಮಾಳಿಗೆಯ ಅಂಗಾಲಿನಿಂದಂಗವಿಸಿ
ಅದೇನು ಹೊಂದುತದೆ
ಮೂಡ್ಲ ಬಾಂದಳದಿಂದ
ಮೇಲ್ಕಂಡ ಮಾರ್ಗದ ವಳಗೆ
ಪಡುವ ಬಾಂದಳದ ಕಡೆ

ಉರಿಚಮ್ಮಾಳಿಗೆಯೆ
ಇಂಜಿನ್ನು ಎದೆ ವಳಗೆ
ಬಸಿವ ಉಸುಕು
ಉರಿ, ಚಮ್ಮಾಳಿಗೆಯೆ ಬಲ್ಬುಗಳ ಕಣ್ಣೊಳಗೆ
ಉರಿವ ಬೆಳಕೆ
ಉರಿಚಮ್ಮಾಳಿಗೆಯೆ ಅಚ್ಚ ಬೆಳಕಿನ ಕುಲುಮೆ
ಅದರಿಂದಲೇ ನಮಗೆ ಕಾಳಗತ್ತಲ ಒಲುಮೆ

"ಯಾರು ಹೊರುವರು ಇದನು
ಯಾರು ತೊಡುವರು ಇದನು

ದಾಟುವರು ನಡುಭವದಂಬೋಧಿಯನು
ನೆಲಮ್ಮೈಯಿ ಸುಡದ್ದಂಗೆ
ಎಂಟೆದೆಯ ಗಂಡರು
ಜವರಾಯ್ನ ಮಿಂಡರು
ಮೂಲೋಕದೊಳಗೆ ಮಹಾನ್ ಜಗಭಂಡರು?"

ಇದು ಉರಿಚಮ್ಮಾರ ಹರಳಯ್ನ ವಚನ
ಆದಿ ಕಲ್ಯಾಣದ ವಳಗೆ
ಅನಾದಿ ಕಾಲದಿಂದ

ಮೇ, ೧೯೯೧

ಗಾಣದ ಸುತ್ತುಗಳು

ಸುತ್ತು: ಒಂದು

ಈಗ ಎಲ್ಲಿಯೂ ನಿದ್ದೆ ಇಲ್ಲ;
ನಿದ್ದೆ ಅಂದರೆ ಈಗ ಕದ್ದು ಕೂತಂತೆ ಸದ್ದುಗದ್ದಲದಿಂದ
ಕಿವಿಮುಚ್ಚಾಲೆ ಆಟದಲ್ಲಿ;
ಸದ್ದು ಒದ್ದಿತು ಬಂದು
ಕರ್ಣಪಟಲದ ಮೇಲೆ-
ಓ, ಸಿಕ್ಕಿಬಿದ್ದೆ!

ಈಗ ಎಲ್ಲಿಯೂ ಶಾಂತಿಯಿಲ್ಲ;
ಊರಾಚೆ ತೋಟ; ನಟ್ಟಿರುಳ ಕೋಣೆ;
ಕುಡಿಅಲ್ಲಾಡದಂತೆ ಬೆಳಗೊ ಮೋಂಬತ್ತಿ ಬೆಳಕಲ್ಲಿ
ಎದೆಪುಸ್ತಕ ತೆಗೆದು ಓದುತ್ತಿದ್ದಾಗ
ಹಾ ಶಾಂತಿ
ಗುಂಡಿಗೆ ಸಿಡಿಸಿಕೊಂಡಂತೆ ದೂರ

ಬಾಂಬ್ ಸದ್ದು!
ಬಿಳಿ ಪುಟದ ಮೇಲೆಲ್ಲಾ
ಕರೀ ರಕ್ತದ ಕಲೆ...

ಓ
ಬಾಲ್ಯದ ರಜಾದಲ್ಲಿ
ಊರಿಂದ ಊರಿಗೆ ಒಯ್ಯುತ್ತಿದ್ದ ರೈಲು-
ಕಿಟಕಿಯಲಿ ಹಾಯುತಿರುವ
ಹಾಯಾದ ಹಸಿರು ಹೊಲಗಳೇ,
ಸಿನಿಮಾದ ನವರಂಗಿ ಲೋಕದಲಿ
ನಲ್ಲನಲ್ಲೆಯ

ಲಲ್ಲಲಲ್ಲಲಲ್ಲೆ ವಾಡಿಗೆ
ನೇಪಥ್ಯವಾದ ಕಾಶ್ಮೀರ ಬೆಟ್ಟಗಳೇ
ಹೂ ಚೆಲ್ಲಿದ ಚೆಲ್ಲುಚೆಲ್ಲು ಕಣಿವೆಗಳೇ,
ನಿಮ್ಮ ಮೌನ
ಸ್ಫೋಟಸ್ಫೋಟದ ನಡುವೆ
ಒಂದು ಕಾಮಾ;

ಕ್ರೌರ್ಯಕ್ರೌರ್ಯದ ನಡುವೆ
ಒಂದು ಕೋಲನ್.

ಇದೇ ಸರುಹೊತ್ತು-
ಸಹ್ಯಾದ್ರಿಯ ನಿಬಿಡಾರಣ್ಯಗಳ
ನೀಳನೀಳ ನೀರವದಲ್ಲಿ
ನಿದ್ದಿಸಿದ ಮರಗಳ ಕದ್ದು ಕೊಯ್ದು
ಸರಸರ ಸಾಗಿಸುತ್ತಿದ್ದಾನೆ
ಯಾರೋ
ಗಾಂಧಿ ತಾತನ ಶಿಷ್ಯ

ಈ ವಿಚಿವಿಚಿತ್ರ
ಚಿತ್ರಚಿತ್ರಗಳ ನಡುವೆ
ನಿರಾಕಾರದಲ್ಲಿ ಮುಳುಗಿ ಬಿಡಲೆ;
ಈ ಎದೆ ಬಡಿತ, ಬಡಿತಗಳ ನಡುವೆ
ನೀರವದಲ್ಲಿ ನೆಲಸಿಬಿಡಲೆ?
ಈ ಪ್ರಶ್ನೆ ಪೂರೈಸುವ ಮೊದಲು, ಥತ್,
ಇನ್ನೊಂದು ಚಿತ್ರ-
ಶಿಲಾಬಾಲಿಕೆಯ ಚೆಲುಮೊಗದಲ್ಲಿ
ಮಾನಭಂಗದ ಭಯ!

ಭಯ!
ಈ ನೀಳ, ನೀಲಿ ಇರುಳ ಕೆನ್ನಸುಕು ನಿಲ್ದಾಣ
ದಡದಡ ನುಗ್ಗಿ ನಿಂತಿದೆ
ಈಗ ತಾನೆ
ಕಪ್ಪು ರೈಲ್ ಬಂಡಿ,
ನೂರಾರು ಜಖಮಾದ ಹೆಣಹೊತ್ತು;
ಫಲಕ-ಭೋಗಿಭೋಗಿಗೆ:

'ಹೊಸ ವರ್ಷದ ಬಹುಮಾನ, ಭಾರತಕ್ಕೆ'
ಇದು ಬರೀ ಬೆಳಗಲ್ಲೊ ಅಣ್ಣಾ

ಇಲ್ಲ ಇಲ್ಲ
ಈಗ ನಿದ್ದೆಗೆ ನಿದ್ದೆಯೇ ಇಲ್ಲ
ಈಗ ಶಾಂತಿಗೆ ಶಾಂತಿಯೇ ಇಲ್ಲ

ಸುತ್ತು: ಎರಡು

ಒಂದು ಗಾಣದ ತತ್ವಪದ

ಹಗಲು ಇರುಳನು ಜೋಡಿ ಎತ್ತನು ಮಾಡಿ
ಗಾಣ ಸುತ್ತುವುದು ಅಗೋ। ಜೀವಗಳ
ಗಾಣ ಸುತ್ತುವುದು ಅಗೋ।।

ವೇಗವೆ ಚಾಟಿಯೋ ಬಾಸುಂಡೆ ಬೆನ್ನಿಗೋ
ಕಾಲುಗಳು ಕುಸಿಯುವವೋ। ಮುದಿ ಎತ್ತುಗಳು
ಗಾಣ ಸುತ್ತುವವು ಅಗೋ।।

ನರನರರ ಮೂಳೆ ನುರನುರ ನುರಿದರೂ
ಎಣ್ಣೆ ಇಳಿದಿಲ್ಲೊ ಇನ್ನಾ। ಒಂದು ಹನಿ
ಎಣ್ಣೆ ಇಳಿದಿಲ್ಲೊ ಇನ್ನಾ।।

ಬಡತನದ ಗಾಣದ ಸುತ್ತಲೂ ಸಿರಿವಂತ
ಗಾಣ ಸುತ್ತುವನು ಅಗೋ। ತನ ಸುತ್ತ
ತಾನೂ ಸುತ್ತುವನು ಅಗೋ।।

ಹಗಲು ಸುತ್ತುವುದು ಅಗೋ
ಇರುಳು ಸುತ್ತುವುದು ಅಗೋ। ಬ್ರಹ್ಮಾಂಡ
ಗಾಣ ಸುತ್ತುವುದು ಅಗೋ।।

ಸುತ್ತು: ಮೂರು

ಕಪ್ಪಡಿಯಲ್ಲಿ ಬಸವಣ್ಣ

'ಯಾವ ಯಾವ ವಿಕೃತ ರೂಪಗಳೊ ಅಯ್ಯಾ
ನಿಮ್ಮ ಮೂರುತಿ ತುಂಬಿದ್ದ ನಯನದಲ್ಲಿ

ಯಾವ ಯಾವ ಬರ್ಬರ ಅಬ್ಬರ ಅಯ್ಯೋ
ನಿಮ್ಮ ಕೀರುತಿ ತುಂಬಿದ್ದ ಕಿವಿಗಳಲ್ಲಿ
ಯಾವ ಯಾವ ಒರಟುನುಡಿ ಅಯ್ಯಯ್ಯೋ
ನಿಮ್ಮ ನಾಮಾಮೃತ ತುಂಬಿದ್ದ ಜಿಹ್ವೆಯಲ್ಲಿ
ಮತ್ತೊಮ್ಮೆ
ಕಲ್ಯಾಣದಲ್ಲಿ ರುದ್ರ ತಾಂಡವ;
ಹೆಣ್ಣೂ ಗಂಡೂ ಎರಡೆರಡು ಹೋಳು

ನೆನ್ನೆ ಚಕ್ರವರ್ತಿಯ ರುಂಡವಿಲ್ಲದ ಮುಂಡ
ರಸ್ತೆ ಬದಿ ಬಿದ್ದಿದ್ದ ಸುದ್ದಿ;
ಇವತ್ತು ಎಲ್ಲೆಂದರಲ್ಲಿ
ರಾಶಿ ರಾಶಿ ಹೆಣದ ಸುದ್ದಿ;
ಇಲ್ಲಿ ಕೂಡಿ ಹರಿಯುವ ನದಿ
ಎರಡೂ ಕಿತ್ತಾಡಿ ಒಂದರೊಡನೊಂದು
ಹೊಯ್ದಾಡಿ ರಗುತಗೆಂಪಾಗಿ
ಪೂರ್ವ ಪಶ್ಚಿಮ ದಿಗ್ತಟಗಳೆರಡನ್ನೂ
ತೊಳೆಯ ಹೊರಟಿವೆ ನೆತ್ತರಲ್ಲಿ

ಎಂಥೆಂಥ ಎಂಥೆಂಥ ಚಿತ್ರ
ಅಯ್ಯೋ...

ಸುತ್ತು: ನಾಲ್ಕು

ಬಂಕಾಪುರಿಯ ದೇವತೆಗಳ ಕೂಡ ಒಬ್ಬ ಹುಲು ಮಾನವನ ಮಾತುಕತೆ

ದೇವತೆಗಳೇ, ಅದೆಷ್ಟು ಯುಗಗಳಾಯ್ತು ಹಿಡಿದು ಮಡಗಿದ್ದೀರಿ ನೀವು ನಮ್ಮನ್ನೆಲ್ಲ ನಿಮ್ಮ ನಿಗುನಿಗೂಢ ಜಾಲಗಳ ಜೈಲಿನಲ್ಲಿ. ಈಗ ನೀವೇ ಸೆರೆಯಾಳುಗಳು ನಮ್ಮ ಸಮಣದೊರೆಯ ನೆಲಮಾಳಿಗೆಯಲ್ಲಿ. ಸೂರ್ಯಪ್ಪ ಚಂದ್ರಪ್ಪಗಳಾಣೆ, ಸೂರ್ಯಪ್ಪ ಚಂದ್ರಪ್ಪಗಳ ಹೊರತು ಬಾಕಿ ಉಳಿದಿಲ್ಲ ಯಾವೊಬ್ಬ ದೇವತೆಯೂ ಆಕಾಶದಲ್ಲಿ. ಇನ್ನು ನೆಲದಿಂದ ಗುಡಿಸಿ ಹಾಕಿದ್ದಾನೆ ದೇವತೆಗಳೇ ನಿಮ್ಮನ್ನೆಲ್ಲ ನಮ್ಮ ಸಮಣದೊರೆ ಕಸದ ಗುಡ್ಡೆ ಮಾಡಿ.

ನಮ್ಮ ದೊರೆ ಅರಮನೆ ಮುಂದೆ ಬಂಗಾರ ಪಂಜರದಲ್ಲಿ ಸೆರೆ ಕೂತು ಹಾದಿಹೋಕಯ್ಯಗಳ ಬಾಯಿಂದ ಥೂ ಥೂ ಅನಿಸಿಕೊಂಬ ನಮ್ಮವ್ವ ಲಕ್ಷುಮಿ ದೇವಿ ನಿಮ್ಮ ಮೇಲೂ ನನಗೆ ಎಲ್ಲಿಲ್ಲದ ಕರುಣ. ಅದೇಟು ಥರವಾಗಿ ಕಾಡುತಿದ್ದವ್ವಾ ನೀನು ನಮ್ಮನ್ನು, ಕದ್ದು ಕುಂತು ನೆಲದಾಳದ ಅದುರುಗಳಲ್ಲಿ, ಕಡಲಾಳದ ಮುತ್ತು ರತ್ನಗಳಲ್ಲಿ

ಅದೇಟು ಲಡಾಯಿಗಳಲ್ಲಿ ಅದೇಟು ಫವುಜು ಫವುಜು ಸಿಪಾಯಿಗಳನ್ನು ಸೀಪಿಸೀಪಿ ಉರಉರ ಉರಬಡಕೊಂಡು ತಿಂದಿದ್ದೆ ನಿನ್ನ ಗಂಡರ ಗಂಡ ಅಂದುಕೊಂಡ, ನಿನ್ನ ಮಿಂಡರ ಮಿಂಡ ಅಂದುಕೊಂಡ ಅದೇಟು ಮಂದೆಯನ್ನು- ಹಸಿಯಾಗಿ ಹಸುವಾಗಿ, ದಾಮಮಾಗಿ ಅರಸ, ತಿರುಕ ಎರಡಾಳಿಗೂ; ವರವಾಗಿ, ಶಾಪವಾಗಿ ಲೋಕಾನುಲೋಕವೆಲ್ಲಕೂ. ಪಾಪಚ್ಚಿ, ನೀನೂ ಈಗ ಸೆರೆಯಾಳು. ನಮ್ಮ ಹಂಗೇ.

ಸರಿದೊರೆಯಿಲ್ಲದ ಸಮಣದೊರೆಗಳು ಹೊಂಟ ದಂಡಯಾತ್ರೆಗಳಿಂದ ನದಿಗಳೆಲ್ಲಾ ನಂಜು, ಕಡಲುಗಳೆಲ್ಲಾ ಮೃತ್ಯು. ಕಾಡು-ಬುಡ ಕಡಕೊಂಡು ಬಿದ್ದವೆ. ಹಳ್ಳಿ-ಅಮಾಯಕವಾಗಿ ಕೆಡವಿ ಬಿದ್ದವೆ. ಬುಡಕಟ್ಟು-ಕಟ್ಟು ಹರಿದು ಹರಹರಾ ಅಂದವೆ..

ಅಲ್ಲೋಲ ಕಲ್ಲೋಲದಲ್ಲಿ ಅಲ್ಲಾಡದಿರುವ ರಾಜ್ಯ

ನನ್ನ ಇಂಗ್ಲೀಷು ಕನ್ನಡದಲ್ಲಿ ಹೆಸರಿಕ್ಕಲಾಗದ ತಲಾಕೊಂದು ತಾಯ್‌ನುಡಿಯ ಅನಂತಕೋಟಿ ದೇವತೆಗಳೇ, ಪ್ರಾರ್ಥಿಸಿಕೊಳ್ಳಿ ನಿಮ್ಮ ನಿಮ್ಮ ತಾಯಿನುಡಿಯಲ್ಲಿ ನಮ್ಮನ್ನು ನಾವು ನಿಮ್ಮನ್ನು ಬಿಡುಗಡೆ ಮಾಡುವಂತೆ.

ಸೆರೆಯಾಳುಗಳು ನೀವೆಲ್ಲಾ ಈಗ, ಆವೊಬ್ಬನನ್ನುಳಿದು...

ಸುತ್ತು: ಐದು

ಆ ಒಬ್ಬ

ಆ ಒಬ್ಬ ಒಬ್ಬನಲ್ಲದ ಒಬ್ಬ;
(ಹೆಣ್ಣೆಂದರೆ ಹೆಣ್ಣು, ಗಂಡೆಂದರೆ ಗಂಡು)
ಹೆಸರಿಡಲೂ ಬಾರದ ದೇವ; ಇಟ್ಟರೂ
ಇಟ್ಟು ಕೂಗಿದ ಕೂಡಲೇ
ರೂಪ ಬದಲಾಯಿಸುವಾತ;
ಕೂಗಿ ಕೊಂಬ ಮೆಟ್ಟೆ; ಹಾಡಹಗಲೇ
ಗೊರಗೊರ ಗೊರಕೆ ಹೊಡೆಯುವಾತ;
'ನೆಗೆದು ಬಿದ್ದ' ಅಂತ ನಿಸೂರು ನಿಡುಸುಯ್ಲನಿಟ್ಟಾಗ
ನಿಡುಸುಯ್ಲು ತುದಿಗೆ ಮತ್ತೆ ಹುಟ್ಟುವಾತ-
ಯುದ್ಧರಾತ್ರಿಯ ಬಳಿಕ ಮತ್ತೆ ಹೊಸ ದಿನದಂತೆ
ಕೈ ಎತ್ತಿ ಬೇಡಿಕೊಳ್ಳುವ ಸಕಲ ದೇವತೆಗಳಿಗೆ
ಬೇಡಿತ್ತ ನೀವನಾದರೂ
ತಿರುಪೆ ಎತ್ತುವ ಆ ಒಬ್ಬ

ಹೆದರಿದವರೆದೆ ಬಡಿತವನ್ನೇ
ಮಾಡಿ ನವನವ ಡಮರುಗ ನಾದ
ಹೊಸಾ ವರ್ಣಗಳ ಹೊರಡಿಸುವಾತ.
ಆತ
ನಮ್ಮೆದುರಿಗೇ ಕೈಯೊಡ್ಡಿ ಕವಳ ಬೇಡುವ ತಿರುಕ,
ಗಡೀಪಾರಾದ ಎಣೆಯಿರದ ಮೂಲೋಕದೊಡೆಯ-
ರೈತ ಕಾರ್ಮಿಕ ದಲಿತ ಕರಿಯ ಟ್ರೈಬಲ್
ಯಾವ ಹೆಸರನೇ ಇಡಲಿ,
ಅದರಾಚೆ ನಾಲ್ಕು ನಾಲಗೆಯುದ್ಧ
ನೆಗೆದು ನಿಲ್ಲುವ
ಆ ಒಬ್ಬನೇ
ಸ್ವತಂತ್ರ
ಅತಂತ್ರಗಳೊಳಗೂ

ಸುತ್ತು: ಆರು

ತಿರುಗಿ ಕಿರಣ ಮುರುಕು ಜೋಪಡಿ ಎದೆ ಹೊಗುವ ಹೊತ್ತು:
ಹೊರಲಾಗದ ಹೊರೆ ಹೊತ್ತ ಲಾರಿ
ಟೈರ್ ಬದಲಾಯಿಸಿ
ಏರುದಾರಿಯ ಮೇಲೆ
ಏದುಸಿರಾಗಿ ಏಗುವ ಹೊತ್ತು:
ಅರ್ಥದ ಖಾಲಿ ಬಸ್‌ಸ್ಟ್ಯಾಂಡುಗಳಲ್ಲಿ
ಮುಖೇಡಿ ಶಬ್ದಗಳು
ಕಿಮಕ್ಕನ್ನದೆ
ಕ್ಯೂ ನಿಲ್ಲುವ ಹೊತ್ತು: ಈಗ
ಬೇಕಿಲ್ಲ ಶಾಂತಿ ಯಾರಿಗೂ
ಬೇಕಿಲ್ಲ ನಿದ್ದೆ ಯಾರಿಗೂ
ಬೇಕು-
ನಿಚ್ಚನಿಚ್ಚ ಎಚ್ಚರ
ತಿರುಪೆ ಸಿರಿ
ಈ ಹಾಳು ಬಾಳಿನಲ್ಲಿ
ಈ ತೊಗಲುಗೊಂಬೆಯಲ್ಲಿ

ಜುಲೈ, ೧೯೯೧

ಭೂತನಾಥನ ಗೋಳು

ಈ ರಾತ್ರಿ:
ಮಷಾಣಗಳ ನಿದ್ದೆಯೊಳಗದ್ದಿದ್ದ ಭೂತಗಣಂಗಳೆಲ್ಲಾ ಎದ್ದು ನಿಂತಿವೆ;

ಭೂಮಿಯ ಎದೆ ನಡುಗುವ ಹಾಗೆ
ಆಕಾಶದ ತಿಕ ಹರಿಯುವ ಹಾಗೆ
ನಕ್ಷತ್ರ ಚದುರಿ ಹೋಗುವ ಹಾಗೆ
ಭೂತನಾಥನ ಗೋಳು ಮೊರೆಯುತ್ತಿದೆ.

'ಶಕ್ತಿ ಸತ್ತಿದ್ದಾಳ, ಶಕ್ತಿ ಸತ್ತಿದ್ದಾಳೆ
ಎಲ್ಲಿ ಹೂಳುವುದು, ಹೇಳು, ಜಗತ್ತೇ, ಜಗತ್ತನ್ನೇ
ಜಗತ್ತೇ ಹೀಗೆ ಸತ್ತು ಹೋದಾಗ?'

ತಡವಿ ಮುಟ್ಟಿ ನೋಡುತ್ತಾನೆ ಎತ್ತಿಕೊಳ್ಳುತ್ತಾನೆ
ಹೊತ್ತು ಅವಳ ಶವವನ್ನು ಹೆಗಲಿನ ಮೇಲೆ
ಸುತ್ತುತ್ತಿದ್ದಾನೆ ಸುತ್ತುತ್ತಿರುವ ಜಗತ್ತಿನ ಸುತ್ತ

ಆ ಗೋಳ!
ಆ ಗೋಳ ಮೊರೆತದ ಮರುದನಿಯ ಮರುದನಿಯ ಮರುದನಿಯ
ಕೇಳಲಾರದೆ ಭೂತಗಣಂಗಳು ಮರುಗೋಳನಿಕ್ಕುತ್ತ
ಲಬೊಲಬೊ ಲಬೊಲಬೊ ಎಂದು
ಸುತ್ತುತ್ತಿವೆ ಶಿವನು ಸುತ್ತುವ ಹಾಗೆ
ಸುತ್ತುತ್ತಿರುವ ಜಗತ್ತಿನ ಸುತ್ತ

'ಎಲ್ಲಿ ಹೂಳುವುದು, ಹೇಳು, ಜಗತ್ತೇ, ಜಗತ್ತನ್ನೇ
ಜಗತ್ತೇ ಹೀಗೆ ಸತ್ತುಹೋದಾಗ?'
-ಕೇಳುವನು ಆರ್ತ; ಅನಾಥ ಆ ಜಗನ್ನಾಥ

ಹೂಳಲು ಜಾಗವಿಲ್ಲದೆ, ತಿರುಗು ಭೂಮಿ ನಿಲ್ಲದೆ
ಕೊಳೆತು, ಉದುರುತಿದೆ ದೇವಿಯ ದೇಹ,

ಬಿತ್ತು
ಆಕೆಯ ಕಾಲು ಅರೇಬಿಯಾದಲ್ಲಿ;
ಕೈಯಿ ಆಫ್ರಿಕಾದಲ್ಲಿ;
ಹೃದಯದ ಚೂರು ಚೂರು ಅಮೆರಿಕಾದಲ್ಲಿ
ಗರ್ಭ, ಯೋನಿ
ಭಾರತದ ಈ ಕ್ಷಣದ ನನ್ನ ಬಂಜೆ ನಾಲಗೆಯಲ್ಲಿ.

ಗೊತ್ತು
ಗೊತ್ತು ಸುತ್ತುವ ಈ ಜಗತ್ತಿಗೂ ಸಹಿತ
ನಾರುವ ಈ ಹೆಣದ ಚೂರುಗಳು
ಗೊಬ್ಬರವಾಗಿ ಕೊಳೆತು ಗಬ್ಬಾಗಿ ಅದರಿಂದ
ಮನುಕುಲದ ಹೊಸ ಮೊಳಕೆ ಚಿಗುರುತೆನೆ ಜೀವಬೆಳೆ
ಸುಗ್ಗಿಯಾಗುವವರೆಗೆ

ಹೀಗೇ ಜಗನ್ನಾಥ
ಜಗತ್ತಿನ ಸುತ್ತ
ಸುತ್ತುತ್ತಿರುತ್ತಾನೆ ಹಗಲು ರಾತ್ರಿ
ಸುತ್ತುತ್ತಿರುವ ಜಗತ್ತು
ಸುತ್ತುತ್ತಿರುವ ಹಾಗೇ ಜಗತ್ತಿನ ಸುತ್ತ.

ಈ ಗೋಳ ರಾತ್ರಿ
ಭೂತನಾಥನ ಗೋಳು ಮೊರೆಯುತ್ತಿದೆ
ಭೂತಗಳ ಹೋ ಹೋ ಹೋಕಾರ ಹುಚ್ಚೆದ್ದಿದೆ.

ಹೂಳುವುದು ಎಲ್ಲಿ, ಹೇಳು, ಜಗತ್ತನ್ನು ಜಗತ್ತೇ
ಜಗತ್ತೇ ಹೀಗೆ ಸತ್ತು ಹೋದಾಗ
ಜಗತ್ತೇ ಜಗತ್ತೇ.....

ಜುಲೈ, ೧೯೯೧

ಕತ್ತಲು ಕಾಶ್ಮೀರ

ಸ್ಪಂದ-೧

ಹದ್ದಿನ ಹಾಗೆ ನೀನು ಒಂದೊಂದು ಸಲ
ಗುಬ್ಬಚ್ಚಿ ಹಾಗೆ ಒಂದೊಂದು ಸಲ
ಓ ಕವಿತೆ
ನೀನು ಕುಂತಲ್ಲಿ ಹಾರಾಡಿದಲ್ಲಿ
ಹಿಂಬಾಲಿಸಿದ್ದೇನೆ
ನೆರಳಾಗಿ:

ನೆಲದಿಂದ ದೂರ ನೀನು ಚಿಮ್ಮಿದರೆ
ನಾನು ಸಣ್ಣವನಾದೆ;
ನೆಲದ ಕಡೆ ನೀನು ಇಳಿಯತೊಡಗಿದರೆ
ನಾನು ದೊಡ್ಡವನಾದೆ;
ಮರದ ಕೊಂಬೆ ಮೇಲೆ ಕೂತು
ನೀನು ತಿಂಬಾಗ ನಿಜದ ಹಣ್ಣನ್ನು
ನೆರಳು ಕೊಂಬೆ ಮೇಲೆ ಕೂತು
ನಾನು ತಿಂದಿದ್ದೇನೆ ನೆರಳು ಹಣ್ಣನ್ನು
ಕತ್ತಲಿನ ಸೇನೆ ಪಡುವಣದ ದೆಸೆಗೆ
ಮುತ್ತಿಗೆ ಹಾಕುವವರೆಗೆ.

ಈಗ ಹೆಬ್ಬಂಡೆಗಳ ಮೌನ;
ಎಲೆಯ ಅಲುಗಾಟಗಳು;
ನಿನ್ನ ಪುಟ್ಟ ಎದೆಗೂಡಿಂದ
ಹೊರಟಿವೆ ಮಾತುಗಳು;
'ಬೆಳಗು ಖಂಡಿತಾ-ನಾಳೆ'

ಹೇಗೆ ನಂಬಲಿ ಈ ಮಾತುಗಳನ್ನು
ನಾನು ಎದೆಯಿಲ್ಲದವನು
ನೆರಳಾಗಿ ಇರುಳಲ್ಲಿ ಕರಗುವವನು.

ಸ್ಪಂದ-೨

ಕತ್ತಲು ಅನಿವಾರ್ಯವಾದಾಗ:

ಕತ್ತಲು ತುಂಬಿಕೊಂಡಿದೆ ಇಂಥವರ ಎದೆಯಲ್ಲಿ;
ಅಲ್ಲಾ ಹೆಚ್ಚಿಸುತ್ತಾನೆ ಆ ಕತ್ತಲನ್ನು
-ಖೊರಾನ್

ಕತ್ತಲಾಗಲೇಬೇಕು ಬೆಳಕು ಹುಟ್ಟುವುದೆಂಬ ಕವಿತೆ
ಹುಟ್ಟುವುದೆಂಬ ಆಸೆ ಹುಟ್ಟುವುದಕ್ಕೆ;
ಕತ್ತಲಾಗಲೇಬೇಕು-ನಂದಿರಿ ತಂತ್ರವಿದ್ಯೆಗಳೇ,
ವಿದ್ಯುದ್ದೀಪಗಳೇ-ಬಚ್ಚಿ ಮಡಗಿದ್ದ
ಎದೆಯ ದೀಪಗಳನ್ನು ಹೊತ್ತಿಸುವುದಕ್ಕೆ;
ಕತ್ತಲಾಗಲೇಬೇಕು ಕಾಂಬ ಕಣ್ಣಿನ ಮುಂದೆ ಎದೆಯ
ಭೈರವ ಬತ್ತಲೆಬೆಳಕಾಗಿ
ನರ್ತಿಸುವುದಕ್ಕೆ;
ಕತ್ತಲಾಗಲೇಬೇಕು ಕಾಶ್ಮೀರ ನಕ್ಷತ್ರ ವ್ಯೋಮ
ಪ್ರಾರ್ಥಿಸುವುದಕ್ಕೆ ಯೋಗಿಗಣದಂತೆ
ಅಭಿನವ ವಾಣಿಯಲ್ಲಿ;

'ಕಾಶ್ಮೀರವೇ ನಿಜದ ಕೈ ಬಿಡಬೇಡ'

ಸ್ಪಂದ-೩

ಕಾಶ್ಮೀರವೇ ನಿಜದ ಕೈ ಬಿಡಬೇಡ:

ಇಂದ್ರಾಯುಧ ಘಾತಗಳ ಶತಕಾಲ ಸಹಿಸಿರುವ
ಹಿಮಧವಳ ಗಿರಿಗಳೇ,
ಅಲ್ಲಾಡದಿರಿ
ತುಂಟು ಮಕ್ಕಳ ಬಾಂಬು ಸ್ಫೋಟದಿಂದ;

ಲಲ್ಲವಾಕ್ಕಿನ ಸೊಲ್ಲುಗಳಂತೆ ಜುಳಜುಳಜುಳ
ಹರಿದ ನಿರ್ಮಲ ಜಲದ ಝರಿಗಳೇ,
ನೀರಡಿಸದಿರಿ
ಅಮಾಯಕರ ಉಷ್ಣನೆತ್ತರಿಂದ;

ನಂದನವ ಇಳೆಗೆ ತಂದಿಳಿಸಿಕೊಂಡಿರುವ
ಕಣಿವೆ ಹೂವಾಡಗಿತ್ತಿಯರೇ,

ಅವಿಸಿಡಿ ಚೆಲುವನ್ನು ನಿಮ್ಮ ಆಳಗಳಲ್ಲೆ
ರಗುತಗೆಂಪಾದ ಕಂಗಳಿಂದ;

ಆ ಎಲ್ಲಾ ಹೊಂದಿರುವ ಕನಸುಗಳ ಕೊನೆಕುಡಿಯೇ
ಕಾಶ್ಮೀರವೇ ನಿಜದ ಕೈ ಬಿಡಬೇಡ.

ಸ್ಪಂದ-೪

ಹಜರತ್ ನೂರುದ್ದೀನ್ ವಲೀ ಅವರ ಬಗ್ಗೆ ಒಂದು ದಂತಕತೆ:

(ದೃಶ್ಯ : ಪಚ್ಚೆ ಕಣಿವೆಯೊಳಗೆ ಮುಸ್ಲಿಮರ ಬಡಗುಡ್ಲು; ಅಲ್ಲಿಂ-)

ಕೂಸು ಹುಟ್ಟಿದೆಯಲ್ಲಾ ಸಾವಿನಂತೆ;
ಕಣ್ಣುಂಟು, ಬೆಳಕಿಲ್ಲ; ಕೊರಳುಂಟು, ದನಿಯಿಲ್ಲ;
ಕೈಯಿಕಾಲುಗಳುಂಟು, ಚಲನವಲನಗಳಿಲ್ಲ; ಎಂಥಾ
ಕೂಸು!
ಹೆತ್ತವರ ಕರುಳೊಳಗೆ ಕಿಚ್ಚಿಕ್ಕಲು.

ಜಾದು ತಾವೀಜಾಯ್ತು;
ದವಾ ತಿನಿಸಿದ್ದಾಯ್ತು;
ಆಡಿಕೊಳ್ಳುವವರೆದುರು ಬೇಡಿಕೊಂಡಿದ್ದಾಯ್ತು;
ಎದೆಗೋರೆ
ಕೊಂಡು ಗೋಳು ಕರೆದದ್ದಾಯ್ತು;

ಅತ್ತಿಲ್ಲ, ಕರೆದಿಲ್ಲ, ನನಕಂದ
ಬರಿದೇಹ
ಉಸಿರಾಟ
ಕೇಳುತಿದೆ ಎದೆಬಡಿತ.

ಹೆತ್ತವರ ಕಣ್ಣಿಂದ ಥಟ್ಟನೆ ಪ್ರತ್ಯಕ್ಷ
ಬೇವರ್ಸಿ ಬರೀಮೈಯ ಹೆಣ್ಣು ಬೈರಾಗಿ:
'ಹೆದರದಿರಿ.'

ತುರುಕಿದಳು ನೋಡುನೋಡುತ್ತಿರಲು
ನೆಲದ ಮೌನಯೋನಿಯಂತಿದ್ದ ಎಳೆಗೂಸ
ಬಾಯೊಳಕ್ಕೆ
ಜ್ಯೋತಿರ್ಲಿಂಗದ ಹಾಗೆ ತುಂಬಿದ್ದ ಮೊಲೆಯನ್ನು.

ಅರುಚತೊಡಗಿದೆ ಆ ಕೂಸು;
ಹುಟ್ಟಿದವು ಮತ್ತೊಂದು ಸಲ ಕಾಶ್ಮೀರ ಕಣಿವೆಗಳು;
ಹರಿದವು ಮತ್ತೊಂದು ಸಲ ನಿಂತಿದ್ದ ಝರಿಗಳು.

ಸತ್ತಂತೆ ಬಂದ ಆ ತಾಯಿ
ಶಿವನ ಮರ್ತ್ಯದ ರೂಪ: ಲಲ್ಲೇಶ್ವರಿ;
ಮರುಹುಟ್ಟಿ ಬರಲಿರುವ ಆ ಕೂಸು:
ಹಜರತ್ ನೂರುದ್ದೀನ್ ವಲೀ.

ಸ್ಪಂದ-೫

ಯಾವಾಗ ಬೇಕಾಯ್ತು?

ಹದ್ದಿನ ಹಾಗೆ ನೀನು ಒಂದೊಂದು ಸಲ
ಗುಬ್ಬಚ್ಚಿ ಹಾಗೆ ಒಂದೊಂದು ಸಲ

ಓ ಕವಿತೆ
ತಿರುಗಿ ಹಾರ ಹೊರಟೆ.

ನಿನ್ನ ಹಿಂದೆಯೇ ನಾನು
ನೆರಳಂತೆ......

ಡಿಸೆಂಬರ್, ೧೯೯೧

ಆಗಮೆಮ್ನಾನ್ ನಾಟಕದ ಕಾವಲುಗಾರನ ಸ್ವಗತ

ಇಪ್ಪತ್ತು ವರ್ಷ ನಿದ್ದೆ ಇಲ್ಲದ ಇಷ್ಟೊಂದು ರಾತ್ರಿಗಳಲ್ಲಿ
ಇಲ್ಲ, ಯಾವುದೂ ಇರಲಿಲ್ಲ
ಇಷ್ಟೊಂದು ದೀರ್ಘ.

ಎಷ್ಟೊಂದು ದೀರ್ಘ!

ಸಾಕಪ್ಪಾ ಸಾಕು ಬೇಸತ್ತು ಸತ್ತು ಹೋದರೇ ಮೇಲು
ಈ ನಿದ್ದೆಯಿಲ್ಲದ ಮುಪ್ಪಿನಿಂದ
ಎಂದು ಸಂಕಲ್ಪ ಮಾಡಿದ ಹೊತ್ತು-

ಟ್ರಾಯ್ ಪತನ!
ಗ್ರೀಕ್ ವಿಜಯ!-

ಒಂದಾದ ಮೇಲೊಂದು
ಕತ್ತಲಿನ ಕೋಟೆ ಸಾಲುಗಳಲ್ಲಿ ಝಗ್ಗನೆ
ಹೊತ್ತಿಸಿದ ಪಂಜುಗಳು
ತಂದೋ ಸುದ್ದಿ.

'ಮುಗೀತಲ್ಲಾ ಅಂತೂ'
ಬಿಡುವಾಗ ನಿಟ್ಟುಸುರು
ಯಾರು
ಇವಳು ಯಾರು
ಯಾರಿವಳು ಯಾರಿವಳು ಈ ಥರ
ಉರಿದಿಂಗಳಿನ ಮಾಟದ ಬೆಳಕಲ್ಲಿ ಒಂಟಿ
ನಿಂತು ವಟಗುಟ್ಟುವವಳು?
ಯಾರು?
ಕಸಂದ್ರಾ?
ಕಸಂದ್ರಾ ನಿನ್ನ ಒಗಟಲ್ಲಿ ಹುದುಗಿರುವ

ರಣರಣ ನಿಜದ ಮಾತುಗಳನ್ನು
ಒಡೆದು ನುಡಿಯ ಹೆದರುತಿದೆ ಬಾಯಿ;

ತಂದೆ ಮಗಳನ್ನೇ ಕೊಂದ!
ದ್ವೇಷ ತೀರಿಲ್ಲ ಇನ್ನಾ
ಮಡದಿ ಕೊಲ್ಲುವ ಗಂಡ
ದ್ವೇಷ ತೀರಿಲ್ಲ ಇನ್ನಾ
ಮಗ ತಾಯ ಕೊಲುವ!
ದ್ವೇಷ ತೀರಿಲ್ಲ ಇನ್ನಾ.

ಮಗಳ ಕೊಂದ ಗಂಡನ ಕೊಂದ
ತಾಯಿ ಕೊಲುವ ಮಗನ
ತಾಯಿ ದೆವ್ವ ಕೊಲ್ಲಲು ಬರುವ
ಚಕ್ರದ್ವೇಷ ತೀರಿಲ್ಲವಲ್ಲಾ ಇನ್ನಾ!

ದ್ವೇಷ ತೀರಿಲ್ಲ ಇನ್ನಾ!
ರಾತ್ರಿ ಕಳೆದಿಲ್ಲ ಇನ್ನಾ!
ಯುದ್ಧ ಮುಗಿದಿಲ್ಲ ಇನ್ನಾ!

ಚಂದ್ರಮನ ಮಾಟದ ಬೆಳಕು
ಕಸಂದ್ರಾ..........

ಆಗಸ್ಟ್, ೧೯೯೨

ಗೊಂಬೆ ಕತೆ

[ಒಬ್ಬಾಳು ಒಂದು ದಿನ ಸಂತೇಲಿ ಅಂದಚಂದವಾದ ಹೆಣ್ಣಿನ ಗೊಂಬೆ ಖರೀದಿ ಮಾಡಿದ. ಅದರ ಅಂದಚಂದದಿಂದ ಮರುಳಾಗಿ, ಎಂದೂ ಯಾವೋನೂ ತನ್ನ ನಲ್ಲೇನ ಪ್ರೀತಿ ಮಾಡಲಾಗದಷ್ಟು ಮಟ್ಟಕ್ಕೆ ಅದನ್ನ ಪ್ರೀತಿ ಮಾಡುತ್ತಾ, ಹಗಲೆಲ್ಲಾ ಅದರ ಗ್ಯಾನದೊಳಗೇ ಇದ್ದು, ರಾತ್ರಿ ಹೊತ್ತು ಕೆಟ್ಟ ನಿದ್ದೆ ಬಂದು, ಸತ್ತ ಹೆಣನಂಗೆ ಮಲಗಿ ಬಿಡುತ್ತಿದ್ದ.

ಹಿಂಗೆ ಮಲಗಿರೋ ಹೊತ್ತಿನೊಳಗೆ ಆ ಜೀವವಿಲ್ಲದ ಗೊಂಬೆ ಒಳಗೆ ಜೀವ ತುಂಬಿಕಂತಾ ಇತ್ತು. ಆ ಹರೇದ ಹೈದನ ಅಂದಚಂದಕ್ಕೆ ಆ ಗೊಂಬೆ ಮನಸೋತು, ಇಡೀ ರಾತ್ರಿ ಅವನ ಗ್ಯಾನದೊಳಗೆ ಕುಂತುಕೋತಿತ್ತು. ಬೆಳಕು ಹರಿಯೋ ಹೊತ್ತಿಗೆ ಅದರ ಜೀವ ಹೊರವಂಟು ಗೊಂಬೆ ಗೊಂಬೆಯಾಗಿ ಬಿಡುತ್ತಿತ್ತು. ಈ ಪ್ರಕಾರವಾಗಿ-

ಇವನ ಪ್ರೀತಿ ಅವುಳಿಗೆ ಗೊತ್ತಾಗಲಿಲ್ಲ]
(ಒಂದು ಕ್ಯೂಬನ್ ಜನಪದ ಕತೆಯಿಂದ ಪ್ರೇರಿತ ಕಲ್ಪನೆ)

ಗೊಂಬೆಗೆ ಜೀವ ಬಂದಾಗ ಅವಳು:

ಇರುಳು ಇಳಿಯೀತಂತಾ ಮಳ್ಳಿತೋ ಜೀವಾ॥
ಆಡೋ ನನ ಜೀವಾ। ಮಾ
ತಾಡೋ ನನ ಜೀವಾ। ನಲಿ
ದಾಡೋ ನನ ಜೀವಾ॥

ಎಲ್ಲಿ ಸೋಂಕಿದರೂ ನೀ ಕಲ್ಲುಸಿಲೆ ಹಂಗಲ್ಲೊ।
ಜರಕಂಡ ನರನ್ಹಂಗೆ ಮಿಸಕಾಡದಿರುವ್ಯಲ್ಲೊ॥
ಆಡೋ ನನ ಜೀವಾ॥

ವರಗಿ ಹೋದಿಯಂತ ಮಳೆ ಹಂಗಳುವೆನೊ।
ಕರುಣವಿಲ್ಲದ ಯಮನ ಸಿಡಿಲಾಗಿ ಶಪಿಸಿದೆನೊ॥
ಆಡೋ ನನ ಜೀವಾ॥

ನನ ಮೈಲಿ ಪಕಪಕ ಅಂಬೋ ಜೀವಕೆ ಅಂಬೆ-
ಯಾಕೆ ಬಂದ್ಯೋ ಇವಗೆ ಬೇಕಿಲ್ಲದೋಳಿಗೆ।
ಗಂಡ್ರಾಯ ಕಣ್‌ಬಿಟ್ಟು ನೋಡಿಲ್ಲದೋಳಿಗೆ।
ಬಾಯ್ತೆರೆದು ಬಾ ಅಂದು ಮುದ್ದಾಡದೋಳಿಗೆ।
ತನ ಕೂಡ ತಾನೇನೆ ಮರುಮರುಗುವ್ರೋಳಿಗೆ॥
ಆಡೋ ನನ ಜೀವಾ॥

ಹೆಜ್ಜೆಯೆ ತೊಡದ ಗೆಜ್ಜೆ। ನಾ
ಬೆರಳೆ ತಾಕದ ಚಂಡೆ। ನಾ
ಹಾಡೋರಿಲ್ಲದ ಹಾಡೋ। ನಾ
ಹಕ್ಕಿ ಸೇರದ ಗೂಡೋ॥ ಆಡೋ ನನ ಜೀವಾ॥

ಮೂಕ ಚಂದ್ರನ್ಹಂಗೆ ಮಲಗೀದ್ಯಲ್ಲೋ ಚನ್ನ।
ಮೋಡದ ನಡುವ್ಯಲ್ಲೋ ಬಗಲಾಗೇ ನನ್ನ।
ನೀ ನನ್ನ ಮಿದುಮರದಿಂದ ಕಿತ್ತ ಮಾಂಸದ ಹುಣ್ಣೊ।
ಒಡಲ ಬರದಾಗೆ ತಿನಬರದ ಹಲಸೀನ್ಹಣ್ಣೊ।
ಆಡೋ ನನ ಜೀವಾ॥

ನಿನ್ನ ಮೈ ಕಲ್‌ಬಂಡೆ, ತಲೆ ಚಚ್ಚಿಕೊಂಡೇನೋ।
ನನ್ನೆದೆ ಹಿಂಡಿ ಹಿಂಡಿ ಕಂಬನಿ ತೆಗೆದೆನೋ।
ನನ್ನ ಪ್ರಾಣವ ನಾನೇ ಹಿಂಡಿ ಹಾಕುವ ಮುಂಚೆ।
ಚಿಕ್ಕ ಕಣ್ಣ ಮುಚ್ಚಿ ಚಿಕ್ಕೆ ಮಾಯ್‌ವಾದವ್ರೋ।
ಆಡೋ ನನ ಜೀವಾ॥

ಹಕ್ಕಿ ಚಿಲಮಿಲ ಅಂದೋ ಹೊಳ್ಳಾಡ ನೆಲದಿಂದ।
ಚಿಕ್ಕ ಬಳಗವ ಬಿಟ್ಟು ದಿಕ್ಕಾಪಾಲಾದ ಚಂದ್ರ।
ದಂಡೆ ಇಲ್ಲದ ನದಿ ಅವ್ವ್ಯಾಗಿ ಹೋದಂಗೆ।
ನನ ಪಂಚಪ್ರಾಣ ಹಂಚಿ ಹೋಗುವವಲ್ಲೋ।
ಆಡೋ ನನ ಜೀವಾ॥

ಬೆಳಕ ಹಬ್ಬಿದ್ಹಂಗೆ ಹೂರ-
ಹೋತೋ ನನ ಜೀವ। ಏ
ನಾತೋ ನನ ಜೀವ। ಹೇ
ನಾಥೋ ನನ ಜೀವ। ಹಾರಿ
ಹೋತೋ ನನ ಜೀವ। ಆರಿ
ಹೋತೋ ನನ ಜೀವ॥ ಆಡೋ ನನ ಜೀವಾ॥

ಗೊಂಬೆ ಬರೇ ಗೊಂಬೆಯಾದ
ಹಗಲೊಳಗೆ ಅವನು:

ಕೊಂಬೆ
ರೆಂಬೆ
ಅಂತ ಪ್ರಾಸ ಮಾಡೋರುಂಟು
ರೆಂಬೆ
ಗೊಂಬೆ
ಅಂತ ಪ್ರಾಸ ಮಾಡೋರುಂಟ
ಯಾರಾದರೂ
ಈ ಇಂಥ ಚಂದದೊಂದು ಗೊಂಬೆಯ ಮಾಡಿಟ್ಟ
ಆ ಕ್ರೂರ ಕವಿಬ್ರಹ್ಮನ ಹೊರ್ತು?

ತುಂಬಿಕೊಂಡಿದೆ ತೊಟತೊಟಕು ರೂಪ
ಅಂಗ ಅಂಗದ ವಳಗೂ
ಚಂದ್ರಾಮನೆದೆ ವಳಗೆ ಅಮಾಸೆ ಸೆರೆಸಿಕ್ಕಂಗೆ
ಕಣ್ಗುಡ್ಡೆ ಇದಕೆ

ಮೈರಂಗಿನೊಳಗೆ ಬರ್ಫಕಾಲದ ಶೀತ
ಬ್ಯಾಸಗೆ ಧಗೆ
ಈ ಎರಡಕೂ ಮದುವೆ.

ಗಾತ್ರ, ಎತ್ತರ- ಎಲ್ಲಾ ತಿದ್ದಿ ತೀಡಿದ ಹಂಗೆ
ರತಿಯ ಮಾಡಲ್ ಬಳಸಿ
ಸಾಕ್ಷಾತ್ತು ಆ ಜಕಣಾಚಾರಿ ಆ ರೂಪ!

ನೋಡುತಾ ನೋಡುತಾ ನಾನೇ ಕಣ್ಣಾಗಿ
ಹಾಡುತಾ ಹಾಡುತಾ ನಾನೇ ಬಾಯಾಗಿ
ಬಣ್ಣಿಸುತಾ ಬಣ್ಣಿಸುತಾ ನಿಮಗೆ, ನಿಮ್ಹಂಗೆ ಕರುಣವಿರದೋರಿಗೆ
ಮರತೇ ಹೋಗದೆ
ಎಂದು, ಯಾವ ತವ ಕೊಂಡದ್ದು ಎಂದು.
ಇಷ್ಟಂತ್ಗೂ ಗ್ಯಾರಂಟಿ:
ಅದೇ ನನ್ನ ಕೊಂಡದೆ!
ನನ್ನ ದಿನ, ರಾತ್ರಿ, ಕಣ್ಣು, ಕೈ ವೋಸೂನೂ
ತನ್ನ ಈ ತುಂಬು ರೂಪಿಂದ.

ದೂರಕ್ಕೆ ನಿಂತು ಬಾರೇ ಅಂದರೂ
ಪಕ್ಕಕ್ಕೆ ಕರೆದು ಮುದ್ದುಗರೆದರೂ
ಈಸೂ ಮಿಡುಕಾಡದದಲ್ಲಾ!
ಇದು ಬರೀ ಕಲ್ಲ? ಅಲ್ಲ.

ನನ್ನ ಗೋಳಿಗೆ ಕ್ಯಾರೇ ಅನ್ನದಲೆ
ತನ್ನ ಪಾಡಿಗೆ ತಾನು ಪಡುವಲದ ಕಡೀಕೆ
ಕುಂಟುತ್ತಾ ಹೊಂಟ ಸೂರ್ಯನಿಗೂ ಗೊತ್ತಿಲ್ಲ.
ನನ್ನ ಹಿಗ್ಗುಗಳ ಸರದಿಂದ ಬಿಬ್ಬಿರಿದ
ಮುತ್ತುಗಳ್ಹಂಗೆ ಅಂಬರದ ಅಕ್ಕೀಕಾಳು ಚಲ್ಲಾಪಿಲ್ಲಿ
ಚಿಕ್ಕೆಗಡಣಕ್ಕೂ ಗೊತ್ತಿಲ್ಲ;
ಮೋಡಗಳ ಹೆಣಬಟ್ಟೆ ಹಿಂದೆ
ಸತ್ತಂಗೆ ಬಂದ ಚಂದ್ರನಿಗೂ ಗೊತ್ತಿಲ್ಲ;
ಈ ಗೋಳು-

ನನಗಿನ್ನ ಕಲ್ಲು ನಿದ್ದೆ
ಬೆಳಕು ಹರಿಯೋತಕ
ರೆಂಬೆ ಗೊಂಬೆಯ ಹಿಂಗೆ ಕೂಡಿಸಿದ ಜಕಣಾಚಾರಿ
ನಿನ್ನ ಕೈ ಮುರಿಯ
ಪ್ರಾಸ ಮಾಡಿದ ಬ್ರಹ್ಮ,
ಥೂ ನಿನ್ನ ಹೆಂಡಿರು ಸಾಯ!

ಆಗಸ್ಟ್, ೧೯೬೨

ಅವಲೋಕಿತೇಶ್ವರಾ / ತ್ರ್ಯೈಲೋಕ್ಯೇಶ್ವರಾ

ಅವಲೋಕಿತೇಶ್ವರ = ಬುದ್ಧನ ಮಹಾಕರುಣೆಯ ಸ್ವರೂಪ, ಅಜಂತಾದ ಭಿತ್ತಿ ಚಿತ್ರಗಳಲ್ಲಿನ ಅವಲೋಕಿತೇಶ್ವರನ ಚಿತ್ರ ತುಂಬಾ ಪ್ರಸಿದ್ಧ.
ತ್ರೈಲೋಕ್ಯೇಶ್ವರಾ = ಬೊಂಬಾಯಿ ಬಳಿಯ ಗಜಪುರಿ (ಎಲಿಫೆಂಟಾ) ಗುಹೆಯ ದೇಗುಲದ ಶಿವನ ಮೂರು ಮುಖಗಳ ಶಿಲೆ.
ವಿ.ಸೂ. ಈ ಕವಿತೆಯನ್ನು ಬರೆಯಬೇಕಾಗಿದ್ದು ೬.೧೨.೯೨ರಂದು. ಆದರೆ ಬರೆಯಲು ಸಾಧ್ಯವಾಗಿದ್ದು ೧೩.೧೨.೯೨ ರಂದು.

ಅರ್ಪಣೆ

ದಿ.೧೩ರ ರಾತ್ರಿ ನನ್ನನ್ನು ಕಚ್ಚಲು ಬಂದು, ಕಚ್ಚಲಾಗದೆ ಸುಮ್ಮನೆ ಹೊರಟುಹೋದ ನಾಯಿಗೆ-

ಒಂದು

ಅವಲೋಕಿತೇಶ್ವರಾ,
ನಿನ್ನ ಎಡಗಣ್ಣಲ್ಲಿ ಸೂರ್ಯನ ತಂಪು
ನಿನ್ನ ಬಲಗಣ್ಣಲ್ಲಿ ಬೆಚ್ಚನ್ನ ಚಂದ್ರ
ಮುಂಜಾವು ಮುಸ್ಸಂಜೆಗಳ ಹಿತವಾದ ಕೆಂಪಲ್ಲಿ
ನನ್ನ ಬೆರಳನ್ನದ್ದಿ
ತಿಲಕವಿಕ್ಕುತ್ತೇನೆ ನಿನ್ನ
ಕಲ್ಲು ಹಣೆ ಮೇಲೆ

ಆ ನಿನ್ನ ಶಾಂತ ಮುಖ
ಕಾಯುತ್ತಿರಲಿ ಈ ಲೋಕ ನಾಶವಾಗುವ ತನಕ
ಈಗಿನಂತೇ!

ಆದರೆ ಈಗ:
ಶೂಲದ ಹಬ್ಬ!
ಶೂಲ, ಭರ್ಜಿ, ಈಟಿ, ಕೊಡಲಿ
ಝಳಪಿಸುತ್ತಾ ಕೈಯಿಗಳಲ್ಲಿ

ನೆಲದ ಎದೆಬಡಿತ ಏರುಪೇರಾಗಲಿ ಎಂದು
ದಾಪುಗಾಲಿಕ್ಕಿ ನಡೆವ ಪಾದಗಳಲ್ಲಿ
ಅಗ್ನಿಪರ್ವತದ ಹತ್ತಿಕ್ಕಿದ್ದ
ಕಾವು ಕಾವೋ ಕಾವು

ರಕ್ತ ತಿಲಕದ ಹಾಗೆ ಸೂರ್ಯ
ಆಕಾಶದ ನಡುನೆತ್ತಿಯಲಿ
ಹೊತ್ತಿ ಉರಿಯುತ್ತಿರುವಾಗ ನಿಗಿ ನಿಗಿ ನಿಗಿ ನಿಗಿ
ಮೆರವಣಿಗೆ
ಹೊರಡುತಿವೆ

ಉರಗಲೋಕದ ಅಧೋಗಹ್ವರಗಳಲ್ಲಿ

ಸಿಂಬೆ ಸುತ್ತಿದ್ದ ಕಾಳಿಂಗ ಸರ್ಪಗಳು
ಮೈತಾಳಿ
ಉರವಣಿಸಿ
ಮಾನವಾಕಾರದ ಹಿಂಡುಹಿಂಡುಗಳಲ್ಲಿ
ನಾಗ-ರಿಕ ನಗರದ ಪುಣ್ಯ ಬೀದಿಗಳಲ್ಲಿ.

ಆ ಉನ್ಮತ್ತ
ಪವಿತ್ರತೆಯ ಆಟಾಟೋಪಗಳ
ಅಣಕಣಕು ರೂಪಗಳು
ನನ್ನ ಹೃದಯದಲ್ಲಿ.

ಎರಡು

'ನಾಯಿ ಅಂದರೆ ನಾಯಿಯಲ್ಲ
ಮಾನವ ಜನ್ಮದ ಹೀನನಾಯಿ'
-ಶಿಶುನಾಳ ಷರೀಫ

ಬೆಳಕು ಕರಗುವ ಹೊತ್ತು
ಹಠಾತ್ತು
ಅಡ್ಡ ಬಂತೋೀೀೀ ನಾಯಿ
ಕುಯ್ಯೆನುತ
ಗುರುಗುಡುತ ಬೊಗಳುತ್ತ

ಗುಡಗುಡ ಗುಡುಗುತ್ತ
ಹಿಡಿದು ಕಚ್ಚುವ ಹಾಗೆ
ಕಚ್ಚಿದ್ದ ಲಚ ಲಚ ನೆಕ್ಕಿ
ನೆಕ್ಕಿದ್ದ ಗಪ ಗಪ ತಿಂದುಹಾಕುವ ಹಾಗೆ
ತಿಂದದ್ದ ಪತಪತ ಲದ್ದಿ ಹಾಕಿ
ಅದನ್ನೇ ಲಚ ಲಚ ನೆಕ್ಕಿ
ತಿರುಗಿ ಗಪಗಪ ಗಪ...

ಅದರ ಆ ಕಣ್ಣುಗಳೋ
ಸೂರ್ಯ ಚಂದ್ರರಿಗಾದ ಹುಣ್ಣುಗಳೋ
ಅದರ ಆ ಬಾಲವೋ
ಕೋಕೆಲುವ ಗವಿಯೊಳಗೆ ಅವಿಸಿದ್ದು
ಲೋಕದ ಬೆನ್ನ ಬಾರೆತ್ತುತ್ತಿರುವ
ಬಾರುಗೋಲೋ

ಅದರ ಉರಿಯುಸಿರೋ
ಮಳ್ಳಿಸಾಗರತಲ ವಡಬಾಗ್ನಿಯೋ
ಅದರ ಕ್ರೂರ ಕೆಂಪು ನಾಲಗೆಯೋ
ರಣರಂಗ ಬಲಿಪೀಠಗಳ ಕತ್ತಿ ಅಯ್ಯೋ

ಅಮ್ಮಾ,
ಇನ್ನೇನು ನನ್ನ ಮುಗಿಸೇಬಿಟ್ಟೀತೆನ್ನುವುದರಲ್ಲಿ
ಅದೇ ನಾಯಿ
ಸಿಡಿಮಿಡಿಗೊಂಡಿದ್ದ ತಾಯಿಯ ಹಾಗೆ
ಈಗ ಶಾಂತ
ಅವಲೋಕಿತೇಶ್ವರಾ,

ನಿನ್ನ ಕಣ್ಣುಗಳಲ್ಲಿ ನನ್ನ ಕಣ್ಣುಗಳು
ನನ್ನ ಕಣ್ಣುಗಳಲ್ಲಿ ನಾಯ ಕಣ್ಣುಗಳು
ಕನ್ನಡಿಯ ಹಾಗಾಗಿ
ಈಗತಾನೆ ಬಂದ ಈ ಮಾಗಿ
ಬೆಳುದಿಂಗಳು
ಕೆಳಗೆ ಹೆಣದ ರಾಶಿಗಳು
ಮೇಲೆ ನಕ್ಷತ್ರಗಳು
ಅವಲೋಕಿತೇಶ್ವರಾ
ನೀನು ಹಚ್ಚುವ ಸೊಡರು

ಮೂರು

ಗಜಪುರಿಯ ದ್ವೀಪದಲ್ಲೊಂದು ರವಿವಾರ

DOMINGO EN LA ISLA DE ELEFANTA
Yo la condeno a renacer cien veces
en un mulador,
come a los otros
por eones, en carne viva han de tallarbas
en el infierno de los mutilatedores
de estatuas

-Octavio Paz

ಶಾಪ ಹಾಕುತ್ತೀನಿ ಅವು ಹುಟ್ಟಿಬರಲಿ ನೂರು ಸಾರ್ತಿ ಗಲೀಜು
ತಿಪ್ಪೆಯಲ್ಲಿ

ಮಿಕ್ಕವು
ಯುಗಯುಗಯುಗ ಪರ್ಯಂತ ಜೀವಂತ ಮಾಂಸ ಕೆತ್ತುತ್ತಾ ಇರಲಿ
ಮೂರ್ತಿ ಭಂಜಕರ ನರಕದಲ್ಲಿ

-ಅಕ್ಟೇವಿಯೋ ಪಾಜ್

ಅವಲೋಕಿತೇಶ್ವರಾ
ನಿನ್ನ ಬಲಗಣ್ಣು ಸೂರ್ಯನ ತಂಪು
ನಿನ್ನ ಎಡಗಣ್ಣು ಬೆಚ್ಚನ್ನ ಚಂದ್ರ

ಗಜಪುರಿಯ ಗುಹೆಯ ದೇಗುಲದ
ಜೀರ್ಣ ಹೃದಯದಲ್ಲಿ
ಅಲ್ಲಿ-
ತ್ರೈಲೋಕ್ಯೇಶ್ವರ
ನಿನ್ನದೇ ಅವತಾರ.

ಅಲ್ಲಿ ಎಲ್ಲೆಲ್ಲಿ ಕಲ್ಲೋ ಅಲ್ಲಲ್ಲಿ ಕೆತ್ತಿದ್ದ ಕಲ್ಲು ಮೂರ್ತಿ ಮೂರ್ತಿಗಳ
ಕಣ್ಣು ಮುಖ ಮೂಗು ತಲೆ
ಎದೆ ಹೊಟ್ಟೆ ಕಾಲು ಕೈ
ತಿಕ ಮರ್ಮಸ್ಥಾನ
ಎಲ್ಲೆಲ್ಲೋ
ಅಲ್ಲೆಲ್ಲಾ
ಬುಲೆಟ್ಟು ಬುಲೆಟ್ಟು ಬುಲೆಟ್ಟು

ಹಗೆ ಬೀಜಗಳ ನೆಟ್ಟ
ಪೋರ್ಚುಗೀಸು ಸಿಪಾಯಿಗಳ
ಉಕ್ಕು ಹೃದಯವ ಕದ್ದ
ಆ ಮುಗುಳು
ನಗೆಯ ಮುಖ
ಮೂರು
ಮೂರು ದಿಕ್ಕಿಗೆ
ಕಾಣಿಸದ ನಾಲ್ಕನೆಯ ದಿಕ್ಕಲ್ಲಿ
ತ್ರೈಲೋಕ್ಯೇಶ್ವರಾ
ನಮ್ಮ ಮುಖ
(ಅವಲೋಕಿತೇಶ್ವರನ ಅದೃಶ್ಯ ಮುಖ)

('ಟಿನ್ನು ಕ್ಯಾನು ಫ್ಲಾಸ್ಕುಗಳಲ್ಲಿ ಕುರುತಿಂಡಿ ಕಾಫಿ
ಮುಕ್ಕಿ ಹೀರುತ್ತಿರುವ ಪಿಕ್‌ನಿಕ್ಕು ಪಾರ್ಟಿಗಳ
ಕ್ಯಾಮರಾ ಕ್ಲಿಕ್ಕಿಸುವ ವಿದೇಶೀ ಅಲೆಮಾರಿಗಳ
ನಡು ನಡುವೆ)

ಸುತ್ತಾ ಬಿಸಿಲು ಭರ್ಚಿ ಈಟಿ ಕತ್ತಿ ಕೊಡಲಿ
ಝುಳಪಿಸುತ್ತಾ ಸುಯ್ವ
ಅಬ್ಬರಿಸುವ ಅರಬ್ಬೀ ಕಡಲ ನೀಲಿ
ಮೊರೆವ ರೂಪಗಳ ನಡುವೆ
ನಡುಗದೇ ನಿಂತ ಧ್ಯಾನಸ್ಥ ಗುಡ್ಡದ ಮೇಲೆ
ಅಲೆ ಸುಯ್ಲು-ನಡು
ನೀ
ರವ
ಅವ
ಲೋಕಿತೇಶ್ವರಾ!
ತ್ರೈಲೋಕ್ಯೇಶ್ವರಾ!

ಡಿಸೆಂಬರ್, ೧೯೯೨

ಪುಸ್ತಕದ ಬೆಟ್ಟ, ಕತ್ತಲಿನ ಸುಂಡ

ನಟ್ಟ ನಡೂ ರಾತ್ರಿ
ಪುಸ್ತಕದ ·ಬೆಟ್ಟದೊಳಗೊಂದು
ಕತ್ತಲಸುಂಡ ಸೇರಿಕೊಂಡಿದೆ

ಕಚ್...
ಕಚ್...
ಕಚ್...
ಕತ್ತಲಸುಂಡ ಪುಸ್ತಕದ ಬೆಟ್ಟಾನ
ಹರಹರಾ ಹರಕೊಂಡು ತಿನ್ನುತ್ತಿದೆ

ಹರಾ
ಶಿವಾ
ಅನ್ನಲಾಗದೆ ಗಪ್‌ಚಿಪ್ಪು
ಪುಸ್ತಕದ ಬೆಟ್ಟ
ನಿದ್ದೆ ಹೋಗಿದೆ
ಪುಸ್ತಕದ ಬೆಟ್ಟ.

ಉಷ್!
ನಿದ್ದೆಹೋಗಿದೆ ಪುಸ್ತಕದ
ಬೆಟ್ಟ.

ಜನವರಿ, ೧೯೯೩

ಥತ್ ತಾವೋಗೋ

ಥತ್ ತಾವೋಗೋ ಲೋಯ್ ತತ್ತಾರೋ
ಯಜಮಾನಪ್ಪೋ
ಗುಡ್ಡುದ್ ಸೈಜಿನ್ ಮುದ್ದೆ

ನೆಲುದ್ ಅಗಲಾ ಸಮುದ್ರದ್ ಆಳ
ಇರೋವಂಥಾ ಗಂಗ್ಳಾ
ಅದುರ್ ತುಂಬಾ ಆಂಬ್ರ

ಕ್ಷಾಮುದ್ ಹಂಗೇ ಹಸ್ಕಂಡಿದೀನೋ
ಮೂರ್-ಮೂರೇ ತುತ್ಗೆ ನುಂಗಾಕ್ತೀನೋ
ಓಸೂನೂ

ಆಮ್ಯಾಲೆ
ಬೆಟ್‌ದಂಗೆ ಉಲ್ಡ್‌ಕಂತೀನಿ
ಭೂಮಿ ಹಂಗೆ ಮನೀಕತೀನಿ
ಏಸೋ ಯುಗ ಮನೀಕತೀನಿ
ಮನೀಕಂಡೇ ಇರ್‍ತೀನಿ

ಕಲ್‌ಬಂಡೇನೂ ಕರುಗ್‌ತದಂತೋ
ಒಂದಲ್ಲಾ ಒಂದ್ ದಿವ್ಸ
ಕರ್‌ಗಿದ್ದೆಲ್ಲಾ ಹರ್‍ಯತಣ
ಒಂದಲ್ಲಾ ಒಂದ್ ದಿವ್ಸ

ಉಣ್ಣಕ್ ಕೊಡೋ
ಮನಗಕ್ ಬಿಡೋ
ಅಲ್ಲೀತಕಾ

ಏಸೋ ಯುಗ ಕಳಿಯ ತಕಾ

ಅಕ್ಟೋಬರ್, ೧೯೯೩

ನ್ಯಾಷನಲ್ ಪಾರ್ಕಿನಲ್ಲಿ ಬಕಧ್ಯಾನ-೨

ಒಂದು ಗಾಡಿ ರಾಣಿಪಾಲ್ ಹಾಕಿ ತೊಳೆದರೂ ಬಿಳೀಬಟ್ಟೆ
ಬೆಳ್ಳಗಾಗುವುದಿಲ್ಲ ಈ ಬಕಪಕ್ಷಿಯ ಮೈಯಷ್ಟು.
ಗಾಂಧೀಜಿಯ ಮನಸ್ಸೂ ಇಷ್ಟು ಬೆಳ್ಳಗಿರುತ್ತಿರಲಿಲ್ಲ.
ಉಗ್ರ ತಪಸ್ವಿಗಳೂ ಇಷ್ಟು ಸಲೀಸಾಗಿ
ಒಂಟಿಕಾಲಿನ ಮೇಲೆ ನಿಲ್ಲುವುದಿಲ್ಲ.

ಏನಾದರೂ ಬಕಧ್ಯಾನ ಬಕಧ್ಯಾನವೇ ಅಂತ
ಹಳೇ ಕವಿತೆಯೊಂದರಲ್ಲಿ ಹಂಗಿಸಿದ ನನಗೆ
ತಾನೇ ಕವಿಯಾಗಿ ಬಂದು ಹೇಳಿತು ಈ ಬಕ;
'ಏಯೇ ಬಕರಾ! ನನ್ನ ಹೃದಯದಲ್ಲೇನಿದೆ ಗೊತ್ತಾ?'

ಬಕಕವಿಯ ಎದೆ ಕೊಯ್ದು ಹೃದಯ ಪರೀಕ್ಷಿಸುವ
ಸರ್ಜಿಕಲ್ ವಿದ್ಯೆ ನನಗಿಲ್ಲವಾದ್ದರಿಂದ
ಅದರ ಹೊಟ್ಟೆಯಲ್ಲೇನಿದೆ ಎಂದು ಮಾತ್ರ ಹೇಳಬಲ್ಲೆ.

ಒಂಟಿಕಾಲ ಧ್ಯಾನದಲ್ಲಿದ್ದಂತಿದ್ದ ಅದು
ಸರಕ್ಕನೆ ಎತ್ತಿದ್ದ ಕಾಲನ್ನೂ ಕೆಳಗಿಳಿಬಿಟ್ಟು
ಕತ್ತು ಕೊಂಕಿಸಿ ಕೊಕ್ಕು ನೀರಲ್ಲಿ ಹೂಗಿಸಿ
ಅಬ್ಬೇಪಾರಿ ಹುಳುವ ಗಬಕ್ಕನೆ ನುಂಗಿತಲ್ಲಾ!-
ಆ ಹುಳ ತಳಮಳಿಸುತ್ತಿದೆ ಅದರ ಬಿಳೀ ಹೊಟ್ಟೆಯೊಳಗೆ.

ಪಾಪ, ಧ್ಯಾನಿ ಬಕ ಹುಳ ತಿಂದೇ ಬಾಳಬೇಕು,
ಆದ್ದರಿಂದಲೇ ಅಷ್ಟು ಬೆಳ್ಳಗಿರುವುದು
ಅಷ್ಟು ಮೌನಿಯಾಗಿರುವುದು

ಈಗ ನೀವೇ ಹೇಳಿ:
ಇದರ ಹೃದಯದೊಳಗೇನಿದೆ?

ಗೊತ್ತಿಲ್ಲ? ಬಿಟ್ಟು ಬಿಡಿ.
ಕಣ್ಣು ಕಾಣದ್ದು ಯಾವೋನಿಗೆ ಬೇಕಾಗಿದೆ?

ಫೆಬ್ರವರಿ, ೧೯೯೪

ಮುನ್ನೋಟ

ಇವೊತ್ತು ಸೂರ್ಯ ಮುಳುಗುವುದರೊಳಗೆ
ಇದೇ ಈ ಊರಿನ ಅದೇಸೋ ಮಂದಿ
ಎಮ್ಮೆ ಕೋಣಗಳ ಮೇಲೆ ಸವಾರಿ ಮಾಡುತ್ತಾ
ಸಾಗುತ್ತಾ ಇರುತ್ತಾರೆ ಪಡುವಲದ ಕಡೆಗೆ
ಹಿಂದುಮುಂದಾಗಿ
ಹಿಂಡುಹಿಂಡಾಗಿ

ಇವೊತ್ತು ಸೂರ್ಯ ಮುಳುಗುವುದರೊಳಗೆ
ಇದು ಈ ಥರ ಆಗಲೇಬೇಕೆಂದು
ಯಾರೊಬ್ಬರಿಗೂ ಗೊತ್ತಿಲ್ಲ. ಆದ್ದರಿಂದಲೇ
ಸಾಗಲೇಬೇಕಾಗಿದೆ ಎಲ್ಲಾ ಪಡುವಲದ ಕಡೆಗೆ
ಹಿಂದುಮುಂದಾಗಿ
ಹಿಂಡುಹಿಂಡಾಗಿ

ಇವೊತ್ತು ಸೂರ್ಯ ಮುಳುಗುವುದರೊಳಗೆ
ಇದು ಈ ಥರ ಆಗಲೇಬೇಕೆಂದು
ಗೊತ್ತಿದೆ ನನಗೆ ಚೆನ್ನಾಗಿ, ಆದರೂ ಸಾಗಲೇಬೇಕು
ನಾನೂ ಎಲ್ಲರೂ ಸಾಗುತ್ತಿರುವಾಗ ಪಡುವಲದ ಕಡೆಗೆ
ಹಿಂದುಮುಂದಾಗಿ
ಹಿಂಡುಹಿಂಡಾಗಿ

ನಾವೆಲ್ಲಾ ದಾಟಿ ಹೋದ ಪಡುವಲದಲ್ಲಿ
ಇವೊತ್ತು ಸೂರ್ಯ ಮುಳುಗಿದ ಮೇಲೆ
ನಾಳೆ ಹುಟ್ಟುವನು ತಾನೂ ಹಿಂದುಮುಂದಾಗಿ.

ಅದಕ್ಕೆ ಮೊದಲೇ ಹೊರಡಿ ಪಡುವಲದ ಕಡೆಗೆ
ಹಿಂದುಮುಂದಾಗಿ
ಹಿಂಡುಹಿಂಡಾಗಿ

ಮಾರ್ಚ್, ೧೯೯೪

ಮುದುಕಿ ಗುಡ್ಲಿನ ಬಾಕುಲ ತಾವ ಬಂದವನೆ ರಾಜಕುಮಾರ

ರಾಜಕುಮಾರ:

ನಾ ಮೂಡಲ ಸೀಮೆ ರಾಜಕುಮಾರ
ಅರಬ್ಬಿ ಕುದುರೆ ಧೀರಸವಾರ
ಶಿಕಾರಿಗೆ ಹೊಂಟೆನೋ

ಕಾನನ ಕಾನನ ಕಾನನ ದಾಟಿ
ಪ್ರಾಣಿಯ ಪ್ರಾಣಕ್ಕೆ ಬಾಣವ ನಾಟಿ
ವನವ ಸೋಸಿ ಬಂದೆನೋ

ಗಾಳಿಯ ವೇಗವ ಗಾಳಿಗೆ ತೂರಿ
ದಂಡು ದಳವಾಯಿಯ ಹಿಂದಕೆ ದೂಡಿ
ಮುಂದೆ ಮುಂದೆ ಬಂದೆನೋ

ಕಾಡಾಚೆ ಕಾದಿತ್ತು ಪೊದೇ ಗೂಡು
ಅದರೊಳಗೆ ಬಚ್ಚಿಟ್ಟೈತೆ ನಿನ ಮುರುಕು ಗೂಡು
ಕಂಡು ಬಳಿಗೆ ಬಂದೆನೋ

ಇಂಥಾ ಜಾಗದೊಳಗೆ ನರಪಕ್ಷಿ ಪ್ರಾಣಿ ಯಾವುದಕ್ಕೂ ಕುಡಿನೀರು ಕೂಡ ಸಿಕ್ಕದೆ ಇರೊವಂಥಾ ಸೀಮೆಯಲ್ಲಿ, ಕೂಗಿದರೆ ಓ ಅನ್ನೋರಿಲ್ಲದ ಜಾಗದಲ್ಲಿ, ಕುಂಟಿಕೊಂಡು ಕುರುಡಿಕೊಂಡು ಕಿವುಡಿಕೊಂಡು ವಾಸ ಮಾಡಿಕೊಂಡಿದೀಯಲ್ಲಾ, ಅದೆಂಥಾ ಎಂಟೆದೆ ಇರಬೇಕೇ ನಿನಗೆ ಮುದುಕಿ!

ಖುಲಾಯಿಸಿತು ನಿನ್ನ ನಸೀಬು ಅಂತ ತಿಳಕೋ ಇವೊತ್ತು. ಯಾಕಂದರೆ ಈ ರಾಜಾಧಿರಾಜಕುಮಾರ ರಣರಂಗ ಶೂರ ನಿನ್ನ ಗುಡುಲ ಗರೀಬ ಬಾಗಿಲು ಮುಖದೊಳಗೆ ನಿಂತಿರುವಂಥಾ ಗಳಿಗೆ ಏನಿದೆ ನಮ್ಮ ಸೇವಾರ್ಥ ನಿನ್ನ ಮನೆಯೊಳಗೆ.

ಮುದುಕಿ:

ಮಂದಿಮಾರ್ಬಲವಿಲ್ಲ ದಂಡುದಳವಾಯಿಲ್ಲ
ಯಾವೋನೋ ಸುಕುಮಾರ!
ರಾಜ್ಯ ಕೋಶವಿಲ್ಲ ರಾಣಿರೆಂಭೇರಿಲ್ಲ
ನೀನಿಲ್ಲಿ ಬರಿ ಪೋರ

ನಿನ ಮಿರುಗು ಮೈಗೆ ಬೆರಗಾಗ ಕಣ್ಣಿಲ್ಲ
ಈ ಒಂಟಿ ಕಾಡೊಳಗೆ
ನಿನ ರೂಪು ಯೌವನಕೆ ಮನಸೋಲುವೋರಿಲ್ಲ
ಮರಳುಗಳ ಬೀಡೊಳಗೆ

ತಿರುಪೆಗಂತ ಬಂದೆ ಕರವೆತ್ತಿ ಬೇಡದೆ
ತಲೆ ತಿರುಕನಂಗಾದೊ
ಯಾರು ಆಳಿಸಿಕೊಳ್ಳಲಾಗದ ಜಾಗ;
ನಿನ ರೋಪು ಎಂಥಾದೊ

ಇಲ್ಲಿ ನೋಡೋ ರಾಜಕುಮಾರ ಅಂತ ತಿಳಕಂಡ ಪೋರ,
ಗಾಳಿ ವ್ಯೊಯಂತ ಬೀಸಿದರೆ ಸಾಕು ರ್‍ಯೊಯಂತ ಹಾರಿ ಆಕಾಶ
ಸೇರುವಂಗದಲ್ಲಾ ಈ ಗುಡಲಿನಂಥಾ ಗುಡಲು,
ಇದೇ ಕಾಣೋ ನನ್ನ ರಾಜ್ಯ.

ಈ ರಾಜ್ಯದೊಳಗೆ ಈ ಕಾಡುಸೌದೆ ಉರೀತದಲ್ಲಾ,
ಇದೆ ಕಾಣೋ ನನ್ನ ರಾಜಧಾನಿ

ಈ ಸೌದೆ ಒಲೆ ಮ್ಯಾಲೆ ಮಣ್ಣೀನ ಮಡಿಕೆ ಅದಲ್ಲಾ,
ಇದೇ ಕಾಣೋ ನನ್ನರುಮನೆ

ಈ ಅರುಮನೆ ವಳಗೆ ತಕತಕ ಕುಣೀತ ಕೊತಕೊತ
ಕುದೀತಾ ಅದಲ್ಲ, ಈ ಮುದ್ದೆ ಎಸ್ರು-ಮೂಸೋ
ಮೂದೇವಿ ಇದುರ ವಾಸುನೇನ-
ಇದೇ ಕಾಣೋ ನನ್ನ ಸಕಲ ಐಬೋಗ.
ಆ ಕಾಡೊಳಗೆ ನೀನು ಕಳಕಂಡ ರಾಜ್ಯದ
ಇಪ್ಪಟ್ಟು ಮುಪ್ಪಟ್ಟು ಸಾವಿರ ಪಟ್ಟೇಕೊಟ್ರೂ
ಕೊಡಲಾರೆನೋ ನಿಂಗೆ ನನ್ನ ಮುದ್ದೆ ಎಸ್ರ

ಹಸಿದ ನಾಯಿ ನೀನು ಕುಯ್‌ಕುಯ್ ಅನ್ದೇ
ಬೌಬೌ ಗುರ್‌ಗುರ್ ಅಂದಾ ಈ ಇಟ್ಟಿನ ಕೋಲಿಂದ

ಲಟ್ಟಿಸಿ ಅಟ್ಟಿಬಿಟ್ಟೇನು. ಕೊರಗುಟ್ಟು ಕಿರುಗುಟ್ಟು
ಹಪ ಹಪಾ ಹಸಿದ ನಾಯಂಗೆ

ಆವಾಗ ನನ್ನ ಮನಸೊಳಗೊಂದು ಹನಿಕರುಣೆ ಹುಟ್ಟಾತು
ನನ್ನ ಮುದ್ದೆ ವಳಗೆ ಒಂದರ್ಧನಾರಾ ಸಿಕ್ಕಾತು.

ಸೆಪ್ಟೆಂಬರ್, ೧೯೯೪

ಬಾಗಿಲ ತೆರೆಯೋ

ಮಹಾರಾಷ್ಟ್ರದ ಸಂತ ಜ್ಞಾನದೇವ ಜಾತಿಯಲ್ಲಿ ಬ್ರಾಹ್ಮಣನಾದರೂ ಮೇಲು ಕೀಳೆನ್ನದೆ ಎಲ್ಲ ಜಾತಿಯವರೊಂದಿಗೂ ಒಡನಾಟವಿಟ್ಟುಕೊಂಡಿದ್ದನ್ನು ಕಂಡು ಸಿಡುಕಿದ ಸಂಪ್ರದಾಯವಾದಿಗಳು ಅವನನ್ನು ನಿಂದಿಸತೊಡಗಿದರು, ಹಂಗಿಸತೊಡಗಿದರು. ಲೋಕದ ಈ ವರ್ತನೆಯಿಂದ ಮನನೊಂದು ಜ್ಞಾನದೇವ ಇನ್ನು ಜಗತ್ತಿನ ಸಹವಾಸವೇ ಬೇಡ ಎಂದು ಒಂದು ಕೋಣೆಯೊಳಗೆ ತನ್ನನ್ನು ತಾನೇ ಕೂಡಿ ಹಾಕಿಕೊಂಡು ಕೂತುಬಿಟ್ಟ. ಈ ಸನ್ನಿವೇಶದಲ್ಲಿ ಆತನ ಸ್ವಂತ ಸೋದರಿಯಾದ ಬಹಿಣಾಬಾಯಿ ಬಾಗಿಲು ತೆಗೆದು ಮತ್ತೆ ಪ್ರಪಂಚಕ್ಕೆ ಬಾ ಎಂದು ಕರೆದ ಘಟನೆಯ ಮರುಬರವಣಿಗೆ ಈ ಕವಿತೆ.

ಬಹಿಣಾಬಾಯಿ: (ಜ್ಞಾನದೇವನಿಗೆ)

ಒಂದು

ಅನುವನರಿತವನಿಗೆ ಒಳಗೇನು ಹೊರಗೇನು
ತನುವ ಸೋಸಿದವಗೆ ಮೇಲೇನು ಕೀಳೇನು
ಚಣವ ಸೀಳಿದವಗೆ ಹಗಲೇನು ಇರುಳೇನು
ಈ ಮಾಯೆ ಅಮವಾಸೆ ಕತ್ತಲಂತೆ। ಹೇ ಜ್ಞಾನದೇವ।
ನೀನದ ಬೆಳಗೋ ತುಂಬು ಚಂದ್ರನಂತೆ।।

ತೆರೆಯೋ ಬಾಗಿಲ ತೆರೆಯೋ। ಹೇ ಜ್ಞಾನದೇವ।
ಕಳಿಸೊ ಬೆಳಕನು ಜಗಕೆ।।

ಎರಡು

ಜಗವ ತಿಳಿದವನಿಗೆ ಜಗವೇ ಮೈಯ್ಯಲ್ಲವೇನು
ಸೂರ್ಯ ಚಂದ್ರ ತಾರೆ ಮುಡಿಯ ಹೂವಲ್ಲವೇನು
ಪಾತಾಳಗಳ ತಮವು ಕಾಲಧೂಳಲ್ಲವೇನು
ಪಂಚಭೂತ ಪಂಚಪ್ರಾಣದಂತಲ್ಲವೇನು

ಎಂತೊ ನೀನಿದ ಮರೆತೆ। ಹೇ ಜ್ಞಾನದೇವ।
ಚಿಂತೆ ಮಾಡುತ ಕುಂತೆ॥

ತೆರೆಯೋ ಬಾಗಿಲ ತೆರೆಯೋ। ಹೇ ಜ್ಞಾನದೇವ।
ಪೊರೆಯೋ ನಿನ ಮೈಯ್ಯ ನೀನೇ॥

ಮೂರು

ಕದ್ದರೆ ಕೈಯ್ಯನ್ನೆ ಕೊಯ್ದು ಹಾಕುವರೇನೊ
ಹುಸಿದ ನಾಲಿಗೆಯನು ಸೀಳಿ ಹಾಕುವರೇನೊ
ಕದ್ದು ಕೇಳಿದ ಕಿವಿಯ ಹರಿದು ಹಾಕುವರೇನೊ
ಎಡವಿದ ಕಾಲನು ಕಡಿದು ಹಾಕುವರೇನೊ
ಹೆರರೆಲ್ಲ ನಿನ್ನಂಗವೊ। ಹೇ ಜ್ಞಾನದೇವ।
ಹೆರರೆಂಬುದೆ ಮರವಲ್ಲವೊ॥
ತೆರೆಯೋ ಬಾಗಿಲ ತೆರೆಯೊ। ಹೇ ಜ್ಞಾನದೇವ।
ಪರ-ಸಯ ಭೇದ ಮರೆಯೊ॥

ನಾಲ್ಕು

ಮೋಡದ ನೆರಳಿಗೆ ತಿಟ್ಟೇನು ತೆವರೇನು
ನೆಲ ಕಡಲು ಮರುಭೂಮಿ ಏನಾದರೆ ಏನು
ಇಳಿವ ಮಳೆ ಧಾರೆಗೆ ತರವೇನು ತಮವೇನು
ಕುಲ ಹೊಲಗೇರಿಗಳೆರಡ ತೊಳೆಯದೆ ಏನು
ಕಲ್ಲು ಮುಳ್ಳಿನ ಮೇಲೆ ಹುಲ್ಲು ಹೂವಿನ ಮೇಲೆ
ಎಲ್ಲೆಲ್ಲೂ ತಾನೂ ಹರಿಯಲಾರದೆ ಏನು
ಹಳ್ಳಕೊಳ್ಳದಲ್ಲಿ ನಿಂತು ಕೊಂಡರೆ ಏನು
ಸೂರ್ಯನ ಬಲದಿಂದ ತಿರುಗಿ ಜಲವಾಗದೇನು
ತಿಳಿ ಜೀವ ಮಳೆ ನೀರಂತೆ। ಹೇ ಜ್ಞಾನದೇವ।
ಇಳೆಯ ಜೀವಾಳದಂತೆ॥

ನಡೆಯೋ ನೀ ಜಗದ ತುಂಬಾ। ಹೇ ಜ್ಞಾನದೇವ।
ನಡೆದಂತೆ ಮಳೆಯ ಬಿಂಬ॥

ಐದು

ಹಗಲಿರುಳು ಕಾಲದ ರಥಚಕ್ರವಲ್ಲವೇನು
ಏಳು-ಬೀಳು ವ್ಯೋಮನಾದೆ ಹುಟ್ಟಲ್ಲವೇನು

ಪುಣ್ಯ ಪಾಪ ಜೀವ-ಕುದುರೆಗೊರಸಲ್ಲವೇನು
ಎಡಬಲಗಾಲಂತೆ ಹೊಗಳಿಕೆ ತೆಗಳಿಕೆ
ನಡೆಯಲು ಎರಡೂ ಬೇಕಿಲ್ಲವೇ ಹೇಳು
ಅಳು-ನಗು ಎರಡು ಜೋಡು। ಹೇ ಜ್ಞಾನದೇವ।
ಕಾಲಿಗೆ ನೀನಿವನು ತೊಡು॥

ಹೊರಡೋ ನೀ ನೆಲದ ಮೇಲೆ। ಹೇ ಜ್ಞಾನದೇವ।
ಹೊರಟಂತೆ ಚೈತ್ರಲೀಲೆ॥

ಆರು

ಭವವು ನಿನದಲ್ಲ, ಎಂತು ತೊರೆಯುವೆ ಹೇಳು
ಶಿವವು ನಿನದಲ್ಲ, ಎಂತು ಮರೆಯುವೆ ಹೇಳು
ಚಲಿಸಿದೆ ಜಗವೇ, ಚಲಿಸದಿರುವೆಯ ಹೇಳು
ಕೊನೆಯೆ ಮೊದಲಾದೆಡೆ ಕೊನೆಯ ಹಿಡಿವೆಯ ಹೇಳು
ಅರು-ಮರವೆನ್ನುವ ಜಗದ ಪುಪ್ಪುಸವೆರಡ
ತುಂಬೊ ನೀ ಉಸಿರಿನಂತೆ। ಹೇ ಜ್ಞಾನದೇವ॥
ತೊರೆಯೋ ನೀ ಉಸಿರಿನಂತೆ॥

ತೊರೆಯೋ ನೀ ಉಸಿರಿನಂತೆ। ಹೇ ಜ್ಞಾನದೇವ।
ತುಂಬೊ ನೀ ಉಸಿರಿನಂತೆ॥

ಏಳು

ಸಿದ್ಧನ ಉಸಿರಾದಿ ಬ್ರಹ್ಮನಲ್ಲವೆ ಅಣ್ಣಾ
ಮಧ್ಯದ ಉಸಿರು ಶ್ರೀ ವಿಷ್ಣುವಲ್ಲವೆ ಅಣ್ಣಾ
ಉಸಿರಿನ ತುದಿಬಿಂದು ರುದ್ರನಲ್ಲವೆ ಅಣ್ಣಾ
ಚಿತ್ತ ವೃತ್ತಿಯೊಳಗೆ ದೇವದಾನವರೆಲ್ಲ
ಆದಿ ಅನಂತ ಮುಂದು ಹಿಂದುಗಳೆಲ್ಲ
ಒಂದಾಗಿ ಕೈ ಹಿಡಿದು ನಾಟ್ಯವಾಡವೆ ಅಣ್ಣಾ
ಈ ಕುಣಿತದ ಮೇಳದಂತೆ। ನಿನ ನಿಂದಕರ।
ಬೊಗಳು ನಿನ್ನಿಚ್ಛೆಯಂತೆ॥

ಗಳಹು ನಿನ್ನಿಚ್ಛೆಯಂತೆ। ಪ್ರಶಂಸಕರ।
ಈ ಕುಣಿತದ ಮೇಳದಂತೆ॥

ಎಂಟು

ಬೇಡ ಬೇಕೆಂಬುದು ಬಾಗಿಲೆರಡು ಕದ
ಹಾಕಿಕೊಂಡು ಎರಡ ಒಳಗೆ ಕುಂತೆಯಣ್ಣಾ
ಕೇಡು-ಒಳಿತೆಂಬ ನಿನ್ನ ಎರಡೂ ಕಣ್ಣಾ
ಮುಚ್ಚಿಕೊಂಡು ಹುಟ್ಟು ಕುರುಡನಂತಾದಣ್ಣಾ
ನಿಂತುದೆ ತ್ಯಾಗವೊ, ನಡೆದುದೆ ಭೋಗವೊ
ನಿಲ್ಲದೆ ನಡೆಯದೆ ಕುಂತೆಯಲ್ಲೊ ಅಣ್ಣಾ
ಜಗ ನಿನಗೆ ಕದವಿಕ್ಕಿತೊ। ಹೇ ಜ್ಞಾನದೇವ।
ಜಗಕೆ ನೀ ಕದವಿಕ್ಕಿದೊ॥

ತೆರೆಯೋ ಬಾಗಿಲ ತೆರೆಯೊ। ಹೇ ಜ್ಞಾನದೇವ।
ಮರೆತರೆ ಜಗವೆ ತೆರೆಯೊ॥

ನವೆಂಬರ್, ೧೯೯೪

ಕವಿತಾ ಇತಾಲಿಯಾ

೧. ಬಯಕೆ ಬರೀ ನಿನ್ನ ಕಾಣಬೇಕಂತ, ಫಿರೆನ್ಸೆ

ಮರಳಿ ನೀನು, ಪ್ರಾಣಿಸಿತು ನನ್ನೊಳಗೆ ಮರೆತಿದ್ದ ಆ
ಗುಹ್ಯಾತಿ ಗುಹ್ಯವೆನಿಸಿದ ನಿರಂಗೇಂದ್ರಿಯ. ಆಗ ಹಾ
ಪಚ್ಚೆನದಿ ಆರ್ನೋೀಸಿನ ಹೊನ್ನ ಸೇತುವೆ ಮೇಲಾಸಿ
ಹಾದು ಹೋದೆ ನೀನಾವೊತ್ತು ಎಳೆ ಬಿಸಿಲ ಮಾಟವೇ
ಕಣ್ಣಮುಂದೇನೆ ಕಂಡಂತೆ ಕವಿ ದಾಂತೆ ಜೀವವೇ
ಬಿಯಂತ್ರಿಸೆಯ ಮೈಗನಸೇ, ಫಿರೆನ್ಸೆ ಪುರದ ಪುಣ್ಯವೇ,
ಕದ್ದೂಕದ್ದು ಬಂದವೇ ನನ್ನೆಲ್ಲಾ ಸ್ವಪ್ನ ನಿನ್ನ ಹಿಂದೆ:
ನಿನ್ನ ಹಾದಿ ಇಕ್ಕಟ್ಟಿಂದ ಉನ್ನತ ದುಓಮೋ ಶಿಖರ
ತುದಿ ಶಿಲುಬೆ ಏರಿದವು ವಿಶಾಲ ನೀಲಿ ನನಸಿನ ಕಡೆಗೆ
ನಿನ್ನ ಪುರಾತನ ಚೆಲ್ವಾದ ಪಾವನ ಕುವರಿ ಮರಿಯಾ
ಕೈಯ ಮುಗ್ಧ ಮಗು ಏಸೂನ ತಿಳೀ ನಗೆಯ ಮುಖ ಮುದ್ರೆ
(ಇದೆಯಾ ಅಡಿಯಲ್ಲಿ ನಾನು ಹೊತ್ತಿಸಿದ ಮೊಂಬತ್ತಿ-ಕವಿತೆ)

ಏ ಫಿರೆನ್ಸೆ!
ಕಣ್ಣೆ ನೀನು ಕಂಡಾಗನಿಸಿತ್ತು ನಿನ್ನಲ್ಲೇ ನೆಲಸಬೇಕಂತ;
ಈಗ ದೂರ ಪಾರಾವಾರ; ಬಯಕೆ ಬರೇ ನಿನ್ನ ಕಾಣಬೇಕಂತ.

೨. ಸಂತ ಮಾರ್ಕೋನ ಇಗರ್ಜಿ, ವೆನೆಸಿಯಾ

ಆಸೆಗಲ್ಲಿನ ಮೊಟ್ಟೆ-
ಇಗರ್ಜಿ ಕಟ್ಟಡ,

ಒಳಗೆ:
ಮೂಡಲ ಸೀಮೆಯ ಕೊಳ್ಳೆ-
ಒಳ್ಳೆ ಚಿನ್ನದ ಪಕಳೆ
ಗೋಡೆಯುದ್ದ, ಅಗಲ.

ನಡುವೆ:
ಪೂಜಾಸ್ಥಾನದ ಹಿಂದೆ
ಚಿನ್ನ ತಗಡಿನ ತೆರೆ
ತುಂಬಾ ಕುಸುರಿ
ಕುಸುರಿ ಕ್ರಿಸ್ತಾಯಣ

ಇಲ್ಲಿ ಪೂಜೆ
ನೈಲ ನಾಡಿಂದ ಜಯಿಸಿ ತಂದ
ಸಂತ ಮಾರ್ಕೋನ ಅಸ್ಥಿಗಳಿಗೆ,
ಪವಿತ್ರ ಶಿಲುಬೆಗೆ.

೩. ವೆನೆಸಿಯಾ

ಊರು ಊರೆನ್ನುತ್ತಾರೆ
ಊರು ಊರೆಂದರೆ ಇರಬೇಕು ಹೀಗೆ
ಈ ಊರಿನ ಹಾಗೆ:

ನೀನು ನೆಲೆಗೊಳ್ಳಲೆಂದು ನೆಲದಂತೆ
ತಾನೇ ಹಾದಿ, ಬೀದಿ, ಗಲ್ಲಿ, ಸಂದಿ, ಗೊಂದಿ
ಹಿತ್ತಲು, ಹೊಸಿಲು -ಎಲ್ಲಾ ಆಗಿಯೂ
ಹರಿದಾಡುತ್ತಿರಬೇಕು
ನಿರಂತರ

ಹಾಗೇ
ಹಿತ್ತಲು, ಹೊಸಿಲು, ಕದ, ಕಿಟಕಿ, ಗೋಡೆ
ನಿಂತೂ ತೇಲುತ್ತಿರುವ ಹಾಗೆ
ನೋಡುತ್ತಿರಬೇಕು
ನೀರಿನ ಪಕ್ಕ ನೀರಿನೊಳಗಡೆ
ತಮ್ಮದೇ ಕಲಕಲ ಹಸಿರು ಬಿಂಬ.

ಛಾಪು ಹಾಕಿದ ಹಾಗಿರಬೇಕು
ನೆಲದ ಮೇಲೆ ಮೋಡದ ಛಾಯೆ
ನೀರ ಮೇಲೆ ಬಿಸಿಲಿನ ಮಾಯೆ!
ನೀರ ನೀಲ ಹಸಿರು ಅಧೋ ಆಕಾಶದಲ್ಲಿಯೆ

ಇಲ್ಲಿ
ಬಾಳು

ಹರಿಗೋಲು-
ಉಪಮೆ, ರೂಪಕವಲ್ಲ

ನೆಲಕ್ಕೆ ಜಲದ ಅಂಟು
ಹಾಕಿವೆ ಗಾಳಿ, ನೀಲಾಕಾಶ,
ಉರಿದೇವ

ಇಲ್ಲಿ
ಬಾಳು
ಸದಾ
ಹರಿಗೋಲು

ಅಂಬಿಗಾ,
ಊರು ಊರಾಗಿರಲು
ಇರಲಿ
ಈ ನೀರಿನ ಈ ಊರಿನ ಹಾಗೆ
ಪುರಾತನ ದಿವ್ಯ ಸೌಧಗಳ ನನ್ನ ವೆನೆಸಿಯಾದ ಹಾಗೆ.

೪. ರಾಜಧಾನಿಯಿಂದ ರಾಜಧಾನಿಗೆ

ಹೊಸಾ ರಾಜಧಾನಿಯ ಹೊಸಿಲಿನಲ್ಲಿ
ಹಳೇ ರಾಜಧಾನಿಯ ನಕಾಶೆಗಳನ್ನು ಹರಿದು ಚೆಲ್ಲು.
ಅದರ ರಸ್ತೆಗಳ, ತಿರುವುಗಳ, ವೃತ್ತಗಳ, ಚೌಕಗಳ
ನಾಮಫಲಕಗಳನ್ನು ಕಿತ್ತು ಬಿಸಾಕು.

ಮರೆತು ಬಿಡು
ಅಲ್ಲಿನ ಭಾಷೆಯ ವರ್ಣಮಾಲೆ!
ಅಲ್ಲಿನ ಮಾತಿನ ಏರಿಳಿತ ವಿನ್ಯಾಸ
ಕೈಸನ್ನೆ, ಬಾಯ್ಸನ್ನೆ,
ಸಂಚಾರೀ ನಿಯಮ ಸಂಕೇತಗಳು
-ಎಲ್ಲವನ್ನೂ, ಅವು ಇನ್ನು
ಮೂರು ಕಾಸಿಗೂ ಬೇಡ.

ಆಹ್, ಬಿಸಿಲಲ್ಲಿ ಮೈಚೆಲ್ಲಿ ಕೂತಿದೆ
ಇನ್ನೊಂದು ರಾಜಧಾನಿ
ಇದರ ನಕಾಶೆ ಇನ್ನೂ ನಿನಗೆ ಸಿಕ್ಕಿಲ್ಲ
ಭಾಷೆ ಚೂರೂ ಗೊತ್ತಿಲ್ಲ

ಕೈಸನ್ನೆ, ಬಾಯ್ಸನ್ನೆ, ಸಂಚಾರಿ ನಿಯಮ ಸಂಕೇತ
ಏನೇನೂ ಗೊತ್ತಿಲ್ಲ.

ಹಳೇ ರಾಜಧಾನಿಯ ನಕಾಶೆ ಹರಿದು ಚಲ್ಲಿದ್ದೀಯ
ಅದರ ಭಾಷೆ ನಿಯಮಗಳು, ಸಂಕೇತಗಳು-
ಎಲ್ಲಾ ಮರೆತಿದ್ದೀಯ.
ಇನ್ನು ಹಿಂದಕೂ ಹೋಗುವಂತಿಲ್ಲ.

ಆಹ್ ಬಿಸಿಲಲ್ಲಿ ಮೈಚಲ್ಲಿ ಕೂತಿದೆ
ಇನ್ನೊಂದು ರಾಜಧಾನಿ.
ಹುಷಾರಾಗಿ ಒಳಹೋಗು, ಹೆಜ್ಜೆ ಹಾಕು.

ಅಲ್ಲಿ ಸೋತವನು ಇಲ್ಲೂ ಸೋಲುವೆನೆಂಬ
ದಿಗಿಲೂ ಬೇಡ.
ಅಲ್ಲಿ ಗೆದ್ದವನು ಇಲ್ಲೂ ಗೆಲ್ಲುವನೆಂಬ
ಕೊಬ್ಬೂ ಬೇಡ.

ಆದರೂ-
ಅಲ್ಲಿ ಸಲ್ಲುವ ನಾಣ್ಯ ಇಲ್ಲಿ ಸಲ್ಲುವುದಿಲ್ಲ
ಅಲ್ಲಿನ ಪತಾಕೆ ಇಲ್ಲಿ ಹಾರುವುದಿಲ್ಲ.

೫. ಮೋಡಗಳ ಮಾರ್ಗ

ಆಲ್ಪ್ಸ್ ಪರ್ವತಗಳ ಮೇಲೆ
ಹರಡಿರುವ ಮೋಡಗಳಲ್ಲಿ ಹೆಣೆದಿರುವ ಬೆಳಕು
(ಹಂಜಿ ಬಟ್ಟೆಯ ಒಳಗೆ ಚಿನ್ನ ನೂಲು!)

ಇಂಥಾ ಹೊತ್ತು
ಇಂಥಾ ಗೊತ್ತು
ಇಲ್ಲಿ ಹಾರಾಡಬೇಕಾದವರು
ಮಂದಾರ ಕುಸುಮ ಮೂಲಾಂಕಿತ
ಪುರಾಣದ ದೇವತೆಗಳು
ಖೇಚರರು ಖೇಚರಿಯರು.

ಆದರೆ ಇಂದು ಹಾರಾಡುತಿದೀವಿ
ನಾವು-
ಭೂಚರರು ಭೂಚರಿಯರು

ಕೂತು
ಈ ಲೋಹಹದ್ದಿನ ದೊಡ್ಡಬಸಿರಲ್ಲಿ.

ಅಕಸ್ಮಾತ್, ನಾವೆಲ್ಲಾ ಇಲ್ಲೇ-
ಈ ಮೋಡಗಳ ಎತ್ತರದಲ್ಲೇ-
ಹುಟ್ಟಿದ್ದರೆ!

ಅನ್ನುತ್ತಿದ್ದೆವು:
'ಅಗೋ ಅಲ್ಲಿ ಕೆಳಗೆ ಥಳ ಥಳ ಥಳ ಬೆಳ್ಳಿ!
ಶಿಖರ
ಇತ್ತ ಇತ್ತಕಡೆ ಇನ್ನೊಂದು
ಹಸಿರು ಹೊನ್ನ ಪಟ್ಟೆ
ಕಣಿವೆ
ನಟ್ಟನಡುವೆ...
ಆ ಪುಟ್ಟ ಪುಟ್ಟ ಮನೆಗಳಲ್ಲಿ ಇರುವೋರು
ಆ ಥಳ ಥಳ ರೋಡುಗಳಲ್ಲಿ ಹಾಯುವೋರು
ಆ ಗೋಪುರ ಚೂಪಾಗಿ ಮಾಡಿರುವೋರು

ಹಾ, ಹೌದು
ಅವರೇ ಇರಬಹುದು ನಮ್ಮ ದೇವತೆಗಳು!'

ಹರಡಿರುವ ನನಸಲ್ಲಿ ಹಣೆದಿರುವ ಕನಸು
(ಹಂಜಿ ಬಟ್ಟೆಯ ಒಳಗೆ ಚಿನ್ನ ನೋಟ)

ಆಲ್ಫ್ಸ್ ಪರ್ವತಗಳ ಮೇಲೆ...

೬. ತಗೋ, ಜಲದೇವತೆ ಈ ಮುದ್ದಿನ ಹಾರ

ನಾನು ಬಡವ,
ನೀನು ಬಡವಿ;
ನಿನಗೆ ನಾನು ಕೊಡಲಾರೆ, ನಿಜ,
ಮುತ್ತಿನೋಲೆ, ತೋಳುಬಂದಿ
ಕೈತುಂಬಾ ಕಡಗ, ಅಪ್ಪಟ ವಜ್ರದ ಸರ,
ಇತ್ಯಾದಿ ಥರ ಥರ ಒಡವೆ

ಕೊಡುತ್ತಿದ್ದೇನೆ, ತಗೋ,
ವೆನೆಸಿಯಾ ಚಂದ್ರಗನ್ನಡಿ ತಿಳಿ ಬೆಳಕಲ್ಲಿ
ನಕ್ಷತ್ರರಾಶಿ ಬಿಂಬಿತ ಥಳ ಥಳ ರಾತ್ರಿ ಜಲದಲ್ಲಿ
ತೇಲು ಸೇತುವೆ ಕೊಂಡಿ ಹಾಕಿ ಹರಡಿದ
ಈ ಪುಟಾಣಿ ದ್ವೀಪಗಳ
ಜಲದೇವತೆಯ ಮುದ್ದಿನ ಹಾರ.....

ನವೆಂಬರ್-ಡಿಸೆಂಬರ್, ೧೯೯೪

ಮುಂಬಾಜಿ ಮುಳುಗಿಸಲು ಹೊರಟ ತುಕಾನ ಅಭಂಗಗಳು

"ಇದು ಕೆಟ್ಟಕಾಲ, ಹಾಡು-ಕವಿತೆಗಳು ದುಷ್ಟ ಜನರ ಪಾಲು"

-ತುಕಾನ ವಾಣಿ

ಶೂದ್ರ ಜಾತಿಯ ತುಕಾರಾಮನ ಅಭಂಗಗಳು ಧರ್ಮಬಾಹಿರ ಎಂದು ಧರ್ಮದ ಯಜಮಾನಪ್ಪಗಳಾದ ಸಂಪ್ರದಾಯವಾದಿಗಳು ತೀರ್ಮಾನಿಸಿದರು. ತುಕಾರಾಮನಿಗೆ ತರಬಾರದ ಪರಿಪಾಟಲುಗಳನ್ನು ತಂದಿಕ್ಕಿ, ಅವನನ್ನು ಅಸಹಾಯಕನನ್ನಾಗಿಸಿ, ಆತ ತನ್ನ ಕೃತಿಗಳಾದ ಅಭಂಗಗಳ ತಾಳೆಯೋಲೆ ಕಟ್ಟನ್ನು ಚಂದ್ರಭಾಗಾ ನದಿಯೊಳಗೆ ಮುಳುಗಿಸುವಂತೆ ಮಾಡಿದರು. ಆಮೇಲೆ ತುಕಾ ಹದಿಮೂರು ದಿವಸ ಕಠೋರ ಅನುಷ್ಠಾನ ಮಾಡಿ ಹದಿನಾಲ್ಕನೆ ದಿವಸ ಬೆಳಿಗ್ಗೆ, ಮುಳುಗಿಸಿದ್ದ ಒಂದೊಂದು ತಾಳೆಗರಿಯೂ ನದಿಯ ಮೇಲೆ ತೇಲುತ್ತ ದಂಡೆ ತಲುಪುವ ಪವಾಡ ಜರುಗಿಸಿದನಂತೆ.

ಒಂದು

ಧರ್ಮದುರಂಧರರ ಅಧಿನಾಯಕನಾದ ಮುಂಬಾಜಿಯ ಅಪ್ಪಣೆಯಂತೆ ತುಕಾ ತನ್ನ ತಾಳೆಯೋಲೆ ಕಟ್ಟನ್ನು ಚಂದ್ರಭಾಗಾ ನದಿಯಲ್ಲಿ ಮುಳುಗಿಸಲೇ ಬೇಕಾಗಿ ಬಂದಾಗ –

ಮುಂಬಾಜಿ (ಸಂಸ್ಕೃತದಲ್ಲಿ):
ಮುಳುಗು!
ನೀರಿನಲ್ಲಿ ತೇಲುವುದೇ ಘನವಸ್ತುವಿನ ಧರ್ಮ
ಆದರೂ
ನಾವು ಹೇಳುತ್ತೇವೆ, ನಮ್ಮ ಧರ್ಮದ ಆಣೆ, ಮುಳುಗು!

ತುಕಾ (ಮರಾಠಿಯಲ್ಲಿ):
ತೇಲು.
ನೀರಿನಲ್ಲಿ ಮುಳುಗುವುದೇ ಘನವಸ್ತುವಿನ ಧರ್ಮ
ಆದರೂ
ನಾನು ಹೇಳುತ್ತೇನೆ, ಪಾಂಡುರಂಗನ ಆಣೆ, ತೇಲು

ಮುಂಬಾಜಿ:

ಪಂಡಿತರ ಮಂಡೆ ಮೇಲೆಳೆದ ಕಲ್ಬಂಡೆಯೇ
ವೇದಶಾಸ್ತ್ರ ಪುರಾಣಗಳೆದೆ ಗುಂಡಿಗೆಗೆ ಹೊಡೆದ ತೋಪಿನ ಗುಂಡೇ
ಹೀನಕುಲಜರ ಹಲವು ಜನ್ಮಗಳ ಕರ್ಮಕೋಟಲೆ ಹೊರೆಯೇ
ಧರ್ಮರಾಜ್ಯದ ಪೊರೆಯೆ
ಮುಳುಗು! ಮುಳುಗು!

ತುಕಾ:

ವಿಠ್ಠೋಬನ ತಿರುವಡಿಯ ನಿತ್ಯ ಮಲ್ಲಿಗೆ ಹೂವೇ
ನಾಲಗೆಯ ಬರಗಾಲದ ಶಬ್ದ- ಗೋಧಿ ಕಾಳ ಗೋಣಿಚೀಲವೇ
ಜಗದ ಗಾಡಿಯ ಎತ್ತಾಗಿ ಎಳೆದೆಳೆದು ಬಳಲಿ ಆದಿ ನಾರಾಯಣನೊರಗಿದ
ಸರ್ಪಸುಪ್ಪತ್ತಿಗೆ ತೇಲಿದ ಹಾಗೆ
ನನ್ನ ಆತ್ಮಸಾಕ್ಷಿ ಹೇಳಿದ ಹಾಗೆ ತೇಲು ತೇಲು

ಮುಂಬಾಜಿ:

ನಾಕು ವೇದಗಳಾಣೆ ಆರು ಶಾಸ್ತ್ರಗಳಾಣೆ ಪರಮಪಾವನ ಚಾತುರ್ವರ್ಣ
ಧರ್ಮದ ಆಣೆ
ನಮ್ಮ ಪವಿತ್ರ ಯಜ್ಞೋಪವೀತದ ಆಣೆ ನಮ್ಮ ದೇವಭಾಷೆಯ ಆಣೆ
ಮುಳುಗು!
ಮುಳುಗು! ಮುಳುಗು!

ತುಕಾ:

ನನ್ನ ಜೀವದ ಆಣೆ ನನ್ನ ಭಾವದ ಆಣೆ
ಪಂಚಭೂತಾತ್ಮಕನಾದ ನರನೆಂಬ ಏಕೈಕ ಜಾತಿಯಾಣೆ

ಹರಿ ಕೊಟ್ಟ ಬದುಕೆಂಬ ನಾಗರದ ಮಣಿಯಾಣೆ ನನ್ನ ಸಾವ ಭಾಷೆಯ ಆಣೆ
ತೇಲು, ತೇಲು, ತೇಲು.

ಮುಂಬಾಜಿ:

ನಮ್ಮನಾಳುವ ಶಿವ ಮಹಾರಾಜರಾಣೆ- ಏಯ್! ಮುಳುಗು! ಮುಳುಗು!

ತುಕಾ:

ಭಕುತರಿಗೆ ಆಳಾದ ಕೇಶವನ ಆಣೆ- ಅಯ್ಯೋ- ತೇಲು, ತೇಲು.

ತುಕಾ ಅಂದ ಪ್ರಕಾರ ಮುಳುಗುವುದೇ ಘನವಸ್ತುವಿನ ಧರ್ಮ
ಮುಳುಗಿತ್ತು ಅಭಂಗಗಳ ತಾಳೆ ಕಟ್ಟು ಮುಂಬಾಜಿ ಬೀಗಿದ:

'ವಸ್ತುಧರ್ಮದ ಪ್ರಕಾರ-ನೋಡಿ- ತೇಲಬೇಕಾಗಿತ್ತು
ಆದರೂ ನನ್ನ ಆಜ್ಞಾನುಸಾರ ಹಿಪ್ಪಿಪ್ಪಿ ಮುಳುಗೇಬಿಟ್ಟಿತು.'

ಎರಡು

ತುಕಾನ ಶಿಷ್ಯೆ ಬಹಿಣಾಬಾಯಿ ತನ್ನ ಗುರುವಿನ ಹದಿಮೂರು ದಿವಸದ ಅನುಷ್ಠಾನವನ್ನು ಬಣ್ಣಿಸಿದ ಬಗೆ.

ಬಂಡೆ ನುಡಿಯುವುದನೇನಾರಾ ಕೇಳಿದ್ದಿರಾ? ಕೇಳಿಲ್ಲದಿದ್ದರೆ, ಬನ್ನಿ ಇಲ್ಲಿಗೆ,
ಬಂಡೆಗಲ್ಲುಗಳ ನಡುವೆ ಬಂಡೆ ತಾನೂ ಆಗಿ
ತುಕಾ ಮಹಾರಾಜ ವಿಠಲಾ ವಿಠಲಾ ಎಂದು ಜಪಿಸುವಲ್ಲಿಗೆ

ನಾಮವೇ ಜೀವದುಸಿರಾಗಿ, ಕೂಳಾಗಿ ನೀರಾಗಿ
ಎಲ್ಲಾ ಥರ ಶಬ್ದಕೂ ಶೃತಿ ಹಿಡಿದ ಏಕತಾರಿಯ ಹಾಗೆ
ದುಂದುಂ ದುಮಾದುಮಾ ಮಿಡಿಯುವುದ ಕೇಳಿದ್ದೀರಾ?
ಕೇಳಿಲ್ಲದಿದ್ದರೆ, ಬನ್ನಿ ಇಲ್ಲಿಗೆ,
ತುಕಾ ಮಹಾರಾಜ ವಿಠಲಾ ವಿಠಲಾ ಎಂದು ಜಪಿಸುವಲ್ಲಿಗೆ

ಹಾ ಹದಿಮೂರು ರಾತ್ರಿ ಹದಿಮೂರು ಹಗಲ ಒಂದೊಂದೂ ಕ್ಷಣ

ಹಾ ಹದಿಮೂರು ದಶಕ ಹದಿಮೂರು ಶತಕದೊಂದೊಂದೂ ಕ್ಷಣ

ಹಾ ಹದಿಮೂರು ಯುಗ ಹದಿಮೂರು ಕಲ್ಪದೊಂದೊಂದೂ ಕ್ಷಣ

ಕಾಲ ಅಂಬೋ ಕಾಳಸರ್ಪ
ಕಚ್ಚಿ ತನ್ನ ಬಾಲ ತಾನೇ

ಸುತ್ತಿ ಸುತ್ತಿ ಹೋದಂತೆ ಅವರ ಸುತ್ತೂ
ಕೇಳಿಸಿಕೊಳ್ಳಿ- ಬೇಡುತಾ ಇದ್ದಾರೆ ಇನ್ನೂ:
'ಮುಳುಮುಳುಗಿಸಬೇಡ, ಬೇಡ ವಿಠಲಾ
ತೇಲಿಸು, ತೇಲಿಸಯ್ಯಾ'

ಮೂರು

ಈ ಪ್ರಕಾರವಾಗಿ ಹದಿಮೂರು ರಾತ್ರಿ ಹದಿಮೂರು ಹಗಲು ಕಳೆಯುತ್ತಿರುವಂಥ ಸಂದರ್ಭದಲ್ಲಿ ಈಗ – ಹದಿಮೂರನೆ ರಾತ್ರಿಯ ಕೊನೇ ಜಾವ ತುಕಾ ಇನ್ನೂ ಬೇಡುತ್ತಿದ್ದಾನೆ:

ಮುಳುಗಲೇಬೇಕಾದ್ದು, ನಿಜ, ಘನ ವಸ್ತುವಿನ ಗುಣ
ಆದರೆ ತೇಲಲೇಬೇಕಾದ್ದು ದಯಾಘನ ಶಬ್ದದ ಗುಣ

ಶಬ್ದ ಸಮುದ್ರ ಸರ್ಪ ಹಾಸಿಗೆ ಮೇಲೆ ಮುಳುಗದೆ ಮಲಗಿದವನೆ,
ತೇಲಿಸು ತೇಲಿಸು ನನ್ನೆದೆಯ ಈ ಶಬ್ದಗಳನು ನಿಶ್ಯಬ್ದದಲ್ಲಿ ಯಾವುದೂ
ಮುಳುಗುವುದಿಲ್ಲ, ತೇಲುವುದೂ ಇಲ್ಲ
ಮೌನ ಜಲದಲಿ ಶಬ್ದವಾಗಿ ತೇಲಿದೆ, ವಿಠಲಾ ಸೃಷ್ಟಿಮೊದಲಿಗೆ ಆದೇ
ಜಲಜ ಸಂಜಾತೆ

ನಿನ್ನ ಆ ರುಖುಮಾಯಿಯನು
ಶಬ್ದದಲಿ ಮದುವೆ ಮಾಡುವ ಮೊದಲೆ ಹುಟ್ಟಿ ಬೆಳೆದು ಚದುರಿದವು ಶಬ್ದ
ಬ್ರಹ್ಮಾಂಡಗಳು
ನಿರ್ಬೀಜದೊಳಗಿಂದ ಬಂದ ಆದಿ ಬೀಜಮೂಳಗಿಂದ ಕೋಟಿ ಕೋಟಿ
ಬೀಜಗಳು
ಮೊಳೆಯುವಂತೆ;
ನಿರ್ವೇದದೊಳಗೆ ನಿಶ್ಶಾಸ್ತ್ರದೊಳಗೆ ನಿಶ್ಯಬ್ದದೊಳಗೆ ನಿಃಶೂನ್ಯದೊಳಗೆ
ಒಂದು ಬೆಳಕಿನ ಬಿಂದು ಕೋಟಿ ಕೋಟಿ ತಾರೆಗಳಾಗಿ ಚದುರಿದಂತೆ.

ಶಬ್ದ-ಕರೀಮಣ್ಣ ಬಿಳೀ-ಕಂಬನಿ ಜೋಳಕಾಳ ಹಾಡೆಂಬೋ ಬೀಸುಗಲ್ಲಲಿ
ಬೀಸಿ
ಹಗಲೆಂಬ ಬವಣೆಯುದ್ದಕ್ಕೂ ಇರುಳೆಂಬ ತೂತುವಾಡೆಯ ತುಂಬಾ
ತುಂಬಿಟ್ಟ ಶಬ್ದದ
ಹಿಟ್ಟು ಬೇಕು ಲೋಕದ ತುಂಬಲಾಗದ ಬಾಯ ರೊಟ್ಟಿಯಾಗಲು
ಪರಲೋಕ ಗಿರಣಿಯ ತುಟ್ಟಿ ಬಟ್ಟೆಯಾಗಲು.....
ಆಗಿ
ಈ ಜಲಕ್ಷಾಮ, ನೆಲಕ್ಷಾಮ, ವಾಯುಕ್ಷಾಮ, ಅಗ್ನಿಕ್ಷಾಮ,
ಆಕಾಶಕ್ಷಾಮ ಕಳೆದು ಸರ್ವವನೂ ಸರ್ವರನೂ ಸಮೃದ್ಧಿಗೊಳಿಸಲೆಂದು
ತೇಲಿ ಬರಲಿ ಹರಿವ ನೀರ ಮೇಲೆ, ಶ್ರೀ ಹರಿಯೆ, ಆ ಶಬ್ದಗಳು,
ಆ ಶಬ್ದಗಳಿಂದ ನಿನಗಾಗಿ ನಾನು ಕಟ್ಟಿದ ಮಧುಮಧುರ ಭಾವದ ಹಾಡು-
ಹಾರಗಳು.

ಶಬ್ದಲೋಕದ ಮೊಟ್ಟಮೊದಲನೆ ಮಗನೇ
ಶಬ್ದಲೋಕದ ಮೊದಲನೆ ಸೊಸೆಯ ಕೈ ಹಿಡಿದವನೇ
ಪಂಡರೀ ವಿಠಲನೇ, ರುಖುಮಾಯಿ ಪ್ರಿಯನೇ,
ಹದಿಮೂರು ರಾತ್ರಿ ಹದಿಮೂರು ಹಗಲು
ಹರಿದು ಹೋದವೋ ನನ್ನ ಕಂಬನಿ ನದಿಯಾಗಿ.

ಉಳಿದಿದೆ- ಇನ್ನು ಒಂದೇ ಒಂದು ಗಳಿಗೆ
ಮುಳುಗಿದುದು ತೇಲಿ ಮೇಲೆ ಬರುವ ಪವಾಡಕ್ಕೆ:
ತೇಲಿಸು ಆ ನದಿಯಲ್ಲಿ
ಆ ನದಿ ಹರಿದು ಸೇರುವ ನಿನ್ನ ಎದೆಕಡಲಲ್ಲಿ
ನನ್ನ ತೂತು ಶಬ್ದದ ಹಡಗ;
ಕುಳ್ಳಿರಿಸಿ ಅದರ ಬಸಿರಲ್ಲಿ
ಆ ನನ್ನ ಮಹಾವೈರಿ ಮುಂಬಾಜಿಯನ್ನೂ
ನಿನ್ನ ವೈಕುಂಠದಂಡೆಗೇ ಒಯ್ಯುವಂತೆ

ಉಳಿದಿದೆ- ಇನ್ನು ಅರ್ಧ ಗಳಿಗೆ
ಅರ್ಧದಲ್ಲಿ ಬರೇ ಅರ್ಧ ಗಳಿಗೆ

ಹೇ ಗರುಡವಾಹನ
ಬಾರಯ್ಯಾ ತಳಗೆ.

ಫೆಬ್ರವರಿ, ೧೯೯೫

ರಂಗಗೀತೆಗಳು

ಕೇಳೋ ನೀರ

ಕೇಳೋ ನೀರ ಸುಕುಮಾರ ಧೀರ
ನಾ ಕಂಡೆ ಕೆಟ್ಟ ಕನಸ।
ಒಂದು ಕೆಟ್ಟ ಕನಸ॥
ಒಡೆಯದಂತೆ ಕಾಪಾಡೋ ಮಣ್ಣ ಮಡಕೆ
ನನ್ನ ಮನಸ।
ಈ ನನ್ನ ಮನಸ॥

ನರಕ ಹಾದು ನರನರಳಿ ಸಾನು
ಬರಿದಾಗಿ ಬಂದೆನಲ್ಲ।
ಈ ಕಣ್ಣಿನಿಂದ ಕಣ್ಣನ್ನು ಕೆಡಿಸೊ
ಬಣ್ಣಗಳ ಕಂಡೆನಲ್ಲ ॥ ಕೇಳೋ ನೀರ ॥

ಕಾರ್ಗತ್ತಲಿನ ಭೋರ್ಗರೆತದಲ್ಲಿ
ನನ ತಲೆಗೆ ಸೂರು ನೀನೊ।
ಅಮವಾಸೆ ಗಾಸಿ ಗವ್ವಿರುಳ ಕೊನೆಗೆ
ನೀನಾಗು ರವಿಯ ಕಿರಣೊ ॥ ಕೇಳೋ ನೀರ ॥

'ಮನೆಯೊಳಗಣ ಬೆಂಕಿ'ಯಿಂದ

ಮಲಗವ್ವ ನನ ಮಗಳೆ

ಮಲಗವ್ವ ಮಲಗವ್ವ ನನ ಮಗಳೆ
ಮಲಗವ್ವ॥

ಆಗಸದ ಮಡಿಲಿನಲಿ ಮುಗಿಲು ಮಲಗುವ ಹಾಗೆ
ಮಲಗವ್ವ ಮಲಗವ್ವ ನನ ಮಗಳೆ ಮಲಗವ್ವ॥

ಮುಗಿಲಿನೆದೆಯಡಿಯಲ್ಲಿ ಸಿಡಿಲು ಮಲಗುವ ಹಾಗೆ
ಮಲಗವ್ವ ಮಲಗವ್ವ ನನ ಮಗಳೆ ಮಲಗವ್ವ॥

ಕಡಲ ಹೆಬ್ಬಸಿರಲ್ಲಿ ಕಿಚ್ಚು ಮಲಗಿದ ಹಾಗೆ
ಮಲಗವ್ವ ಮಲಗವ್ವ ನನ ಮಗಳೆ ಮಲಗವ್ವ॥

ಅಂತರಾಳಗಳಲ್ಲಿ ಬಯಕೆ ಮಲಗಿದ ಹಾಗೆ
ಮಲಗವ್ವ ಮಲಗವ್ವ ನನ ಮಗಳೆ ಮಲಗವ್ವ॥

'ಮಾಧವಿ'ಯಿಂದ

ಬನ ಅರಳಿತು

ಬನವೂ ಅರಳಿತು, ಮನವೂ ನಲಿಯಿತು
ನೆಲದ ಕಣ್ಣಿವೆ ತೆರೆಯಿತು।
ಎರಡು ಒಡಲಲಿ ಒಂದೆ ಹಿಗ್ಗಿನ
ಸೊಗದ ಪರಿಷೆಯು ನೆರೆಯಿತು॥

ಯಾವ ಸಂತಸ ನದಿಯು ಬಂದಿತು
ನಮ್ಮನಿಲ್ಲಿಗೆ ಹುಡುಕುತ।
ಯಾವ ಮಾಂತ್ರಿಕ ಪುಳಕ ಹಾಯಿತು
ನಮ್ಮ ಲೋಕವ ತಡವುತ॥

ರೋಮರೋಮಗಳಲಿ ಹೂಬನವರಳಿ
ಪರಿಮಳವಲೆಯಿತು।
ತೊರೆದು ಪಂಜರ ಗಿಳಿಯ ಜೋಡಿಯು
ದಿಶೆಗಳಾಚೆಗೆ ತೇಲಿತು॥

ಇಂದ್ರ ಧನುಷುಗಳಿಳಿದು ದಿಶೆಗಳ
ಏಳು ಬಣ್ಣದಿ ತೊಳೆದಿವೆ।
ಇಬ್ಬನಿಯ ಮಣಿಮಣಿಗಳೊಳಗಡೆ
ಹಗಲ ಚಿಕ್ಕೆಯೆ ಮಿನುಗಿವೆ॥

ಲೋಕವಾದೆನು ನಿನಗೆ ಒಲವೇ
ನನಗೆ ನೀನೇ ನಾಕವು।
ಎರಡು ಲೋಕಗಳೊಂದೇ ಆದವು
ಒಳಗೂ ಹೊರಗೂ ಏಕವು॥

'ಮಾಳವಿಕಾ'ದಿಂದ

ನಟರ ಪ್ರಾರ್ಥನೆ

ಕುಣಿಕುಣಿದು ಗೆಜ್ಜೆಗಳು
ದಣಿದು ಹೋಗದ ಹಾಗೆ।
ಉಲಿಮಲಿದು ಗೀತೆಗಳು
ಅಡಗಿ ಹೋಗದ ಹಾಗೆ।
ರಚಿರಚಿಸಿ ಕುಂಚಗಳು
ಸವೆದು ಹೋಗದ ಹಾಗೆ।
ಬಿರಿಬಿರಿದು ಪ್ರಣಯಿಗಳು
ಮರಳಿ ಕೂಡುವ ಹಾಗೆ।
ಭುಕ್ತಿಯಲೆ ಮುಕ್ತಿ ಸಿರಿ
ಗಳಿಸಿಕೊಳ್ಳುವ ಹಾಗೆ।
ಗೆಲುವು ಸೋಲಲಿ ಜೀವ
ಆಯತಪ್ಪದ ಹಾಗೆ।
ಅನುಗ್ರಹಿಸು ನಿನ್ನ ನಾವನು-
ಕರಿಸುತಿರುವಂತೆ।
ನೆನೆಯೊಳಗೆ ಹೂವಂತೆ
ನಮ್ಮಲಿರುವವನೆ।
ಗರಿಗೆದರಿ ನವಿಲಂತೆ
ಲೋಕವಾಡುವನೆ॥

'ಮಾಳವಿಕಾ'ದಿಂದ

ತತ್ವಪದಗಳು

ತಿಗಣೆ

ಮಧ್ಯರಾತ್ರಿಯಲ್ಲಿ ತಿಗಣೆ ಕಚ್ಚತೊಡಗಿತೋ
ಕಚ್ಚಿಕಚ್ಚಿ ನನಗೆ ಹುಚ್ಚು ತಂದು ಹಿಡಿಸಿತೋ॥

ದೊಡ್ಡ ದೊಡ್ಡ ಸುಪ್ಪತ್ತಿಗೆ ಲೋಡಲಡಗಿತೋ
ಓಡಿ ಬಂದು ನನ್ನ ಹರಕು ಚಾಪೆ ಹೊಕ್ಕಿತೋ॥

ಚಾಪೆಯೊಳಗೆ ಪಾಪಿ ತಿಗಣೆ ಹೆಚ್ಚಿಕೊಂಡವೋ
ಸಾಕು ಸಾಕು ಅನಿಸುವಷ್ಟು ಕಚ್ಚಿಬಿಟ್ಟವೋ॥

ತೊಟ್ಟು ಮಾತ್ರ ತಿಗಣೆ ಬೆಟ್ಟ ಗಾತ್ರವಾಯಿತೋ॥
ಬೆಟ್ಟನಿಂದ ಏಕದಮ್ ಬೆಟ್ಟವಾಯಿತೋ॥

ಗಟ್ಟಿಯಾಗಿ ಅರಚಿದರೂ ರಕ್ತ ಹೀರಿತೋ
ರಕ್ತ ಡೊಳ್ಳು ಹೊಟ್ಟೆಯಾಗಿ ಜಗವ ನುಂಗಿತೋ

ಸಿಟ್ಟು ಸೆಡವು ಜಠರದಲ್ಲಿ ಹುಟ್ಟಿ ಬಂದಿತೋ
ಗುಟ್ಟು ಎಂಬ ಗಟ್ಟಿಮೊಲೆಯ ಹಾಲು ಹೀರಿತೋ॥

ಕತ್ತಲಲ್ಲಿ ಕೊಬ್ಬಿ ಕೊಬ್ಬಿ ಉಬ್ಬಿ ಬೆಳೆಯಿತೋ
ಹತ್ತು ಎಣಿಸೊ ಮೊದಲು ಕೋಟಿ ಹುಟ್ಟಿ ಹಾಕಿತೋ॥

ಎಚ್ಚರಾಗೊ ತಿಗಣೆ ನಿನ್ನ ಕಚ್ಚಿ ತಿಂದಿವೆ
ನಮ್ಮ ಸಲುಹೆ ಮಹಾಲಕ್ಷ್ಮಿ ಶ್ರೀ ನಿರಂಜನೆ॥

ಕುಂಬಾರಣ್ಣ

ಮಡಕೆಯ ಮಾಡಿದನೊ। ಕುಂಬಾರಣ್ಣ
ಮಡಕೆಯ ಮಾಡಿದನೊ। ಜೇಡಿಮಣ್ಣ
ಮಡಕೆಯ ಮಾಡಿದನೊ॥

ತಮರಜಸತುವವೆ
ಮಿದ್ದ ಜೇಡಿಮಣ್ಣ
ಗಾಲೀಲಿ ತಿರುವಿದನೋ। ಕುಂಬಾರಣ್ಣ
ಮಡಕೆಯ ಮಾಡಿದನೊ। ಜೇಡಿಮಣ್ಣ
ಮಡಕೆಯ ಮಾಡಿದನೊ॥

ನಿಮಿಷಕೊಂದು ಮಡಕೆ
ದಿವಸಕೊಂದು ರಾಶಿ
ಪೇರಿಸಿ ಮಡಗಿದನೊ ಕುಂಬಾರಣ್ಣ
ತೋರಿಸಿ ನಗುತಿಹನೋ। ಆಹ! ನೋಡಣ್ಣ
ಮಡಕೆಯ ಮಾಡಿದನೊ॥

ಯಾವ ಮಾಯದ ದೊಣ್ಣೆ
ಹೇಗೆ ಬಂದಿತೊ ಕಾಣೆ
ಫಡಫಡ ಹೊಡೆಯುತಿದ್ದೆ ಮಡಕೆಗಳ
ಬಡಿಬಡಿದಿಕ್ಕುತಿದೆ। ಎಲಲಲ
ಪುಡಿಪುಡಿ ಮಾಡುತಿದೆ॥

ಕಂಡರು ಮಡಿಕೆಗಳು
ಕಾಣವೂ ಒಡಿಗೆಗಳು
ಒಮ್ಮೆಲೆ ಒಡೆದಿರಲು
ಮಮ್ಮಲ ಮರುಗಿದನೊ। ಮಾಡಿದೆನೆಂಬ
ಹಮ್ಮನು ಮರೆದಿಹನೊ। ಕುಂಬಾರಣ್ಣ
ಸುಮ್ಮನೆ ಕೊರಗಿಹನೊ॥

ಮಡಕೆಯ ಇಡಿ ರಾಶಿ
ಬಡಗೆ ಪಾಲಾದರು
ಮಡಕೆಯ ಮಾಡುವನೊ। ಕುಂಬಾರಣ್ಣ
ಮಡಕೆಯ ಮಾಡುವನೋ। ಅವ ನಿನ್ನ
ಮಡಕೆಯ ಮಾಡುವನೊ॥

ಯಾವ ಕುಂಬಾರಣ್ಣ
ಯಾವ ಮಡಕೆಯಣ್ಣ
ಯಾ ಪದ ಹಾಡಿದೆನೋ। ಪುಣ್ಯದ
ಪಾಪದ ಹಾಡಿದನೋ ನಿರಂಜನ
ನಿರಾಕಾರ ಪ್ರಣವಾದೆನೊ॥

ಮೂರು ಪ್ರಶ್ನೆಗಳು

೧

ಮಲ್ಲಿಗೆ ಹೂವಿನ ಚಂದದ ಚಲುವೆ,
ಮೆಲ್ಲಗೆ ನುಡಿಯೆ- ಎಲ್ಲಿಗೆ ಹೊರಟೆ?

-ನಲ್ಲನ ಮನೆಗೆ, ನಲ್ಲನ ಮನೆಗೆ
ನಲ್ಲಗು ನನಗು ಈ ದಿನ ಮದುವೆ।

೨

ನಿಂಬೆಯ ಹಣ್ಣೆ ತುಂಬಿದ ಹೆಣ್ಣೆ
ಜಂಬಗಾತಿ ನೀ ಎಲ್ಲಿಗೆ ಹೊರಟೆ?

-ಅಂದದ ಕೂಸನು ಇಳಿಸಿ ಲೋಕದಲಿ
ಗಂಡನ ಮನಕಾನಂದ ನೀಡಲಿಕೆ।

೩

ಮಲ್ಲಿಗೆ ಬಿಸುಟ ಮಾಂಸವೆ, ಎಲುಬೆ
ಮೆಲ್ಲನೆ ಉಸುರೆ- ಎಲ್ಲಿಗೆ ಹೊರಟೆ?

-ಗಂಡನ ಮನದಲಿ ಮುಳ್ಳೇ ತುಂಬಿವೆ
ಅಲ್ಲಿಗೆ ನಾನು ಕೊಳ್ಳಿಯನಿಕ್ಕುವೆ।

ಸುಡುಬಯಲಗಾಳಿ

ಸುಡುಬಯಲ ಗಾಳಿ ನಾನು
ಸುಳಿಯೆ ಪರಿಮಳವೆ ನೀನು।
ಕೊರಗಿ ಮರುಗುತಲಿರುವ
ಕರಕು ಬಿರುಕಿನ ನೆಲಕೆ
ಸುರಿಯೆ ಮಳೆಯಾಗಿ ನೀನು ॥ ಸುಡು... ॥

ಯಾರು ನೆಟ್ಟರು ಇಲ್ಲಿ
ಮುಳ್ಳು ಲೋಹದ ಬಳ್ಳಿ
ಬೇರುಗಳು ಬರಲು ಬರಲು।
ದೂರ ಗಗನದ ನಾಡು
ಖಾಲಿ ನೀಲಿಯ ಜಾಡು
ತೋರೆ ಕಾರ್ಮುಗಿಲ ಕುರುಳು ॥ ಸುಡು... ॥

ಯಾಕೆ ಯಾತನೆ ಚಿಂತೆ
ಲೋಕಗಳು ನನ್ನಂತೆ
ದೇಕುತಿವೆ ನಿನ್ನ ಕಡೆಗೆ।
ಕರೆಯೆ ಜೀವದ ಗೋವ
ಮೆರೆಯೆ ಗೋಕುಲ ನಲವ
ಬೇಕು ನಂದನ ಇಳೆಗೆ ॥ ಸುಡು... ॥

ನೀಡೆ ಇರುಳಿನ ಮೇವ

ಹೊತ್ತು ಮುಳುಗುವ ಹೊತ್ತು
ಹೆಗಲ ಭಾರವ ಬಿಟ್ಟು
ಮಲಗಲು ಬರುವೆನವ್ವ। ತಾಯವ್ವ
ಮಡಿಲಲಿ ನೀಡೆ ತಾವ॥

ಹಕ್ಕಿ ಗವಾಯ್ಗಳು
ಪೆಟ್ಟಿಗೆ ಕಟ್ಟಿಕೊಂಡು
ಗೂಡನು ಹೊಕ್ಕವವ್ವ। ಅವಕೆಲ್ಲ ನೀ
ನಿದ್ದೆಯ ಕಳಿಸವ್ವ॥

ಹಗಲೆಲ್ಲ ಬಲು ದಣಿದ
ನೇಗಿಲ ಕುಳಗಳು
ಮಲಗಲಣಿಯಾದವವ್ವ। ಅವಕೆಲ್ಲ
ಸಪುನವ ಕಳಿಸವ್ವ॥

ದನಕರು ಕಣ್ಣೊಳಗೆ
ಝುಗಝುಗ ದೀಪಗಳು
ಕೊಟ್ಟಿಗೆ ಸೇರಿದವು। ಅವಕೆಲ್ಲ
ನೀಡೆ ಇರುಳಿನ ಮೇವ॥

ಶ್ರೀ ಎಚ್.ಎಸ್. ಶಿವಪ್ರಕಾಶ ಅವರು ಕನ್ನಡ ಕಾವ್ಯ ಲೋಕದಲ್ಲಿ ಒಬ್ಬ ವಿಶಿಷ್ಟರಾದ ಕವಿ. ಇಂಗ್ಲೀಷ್ ಮತ್ತು ಕನ್ನಡ ಸಾಹಿತ್ಯಗಳ ಗಾಢವಾದ ಮತ್ತು ಶ್ರದ್ಧಾನ್ವಿತವಾದ ಅಧ್ಯಯನದಿಂದ ಗಳಿಸಿಕೊಂಡಿರುವ ಕಾವ್ಯ ವ್ಯವಸಾಯದ ಸೂಕ್ಷ್ಮತೆಗಳು, ಜೀವನದ ನಾನಾ ಮುಖಗಳ ತೀಕ್ಷ್ಣ ಮತ್ತು ಕೋಮಲ ಅನುಭವಗಳು, ಜನಪದ ಸಾಹಿತ್ಯದ ವಿಸ್ತಾರವಾದ ಪರಿಚಯ, ಅಲ್ಲಿನ ಹಾಡುಗಳ ಭಾಷೆಯ ಮಣ್ಣಿನ ಸತ್ವ ನಮನಶೀಲತೆಗಳು, ಅವುಗಳ ಅಂತರಾಳದಲ್ಲಿ ಮಿಡಿಯುತ್ತಿರುವ ವಿವಿಧ ಭಾವಸಂದರ್ಭಗಳ ಅಕೃತಕ ಜೀವಂತಲಯ ಮತ್ತು ಗೇಯತೆಗಳು, ಆಧುನಿಕ ಬದುಕಿನ ಜಟಿಲತೆ-ಕುಟಿಲತೆಗಳು, ಪ್ರಕೃತಿಲೋಕ ಮತ್ತು ಮಾನವಲೋಕಗಳೆರಡನ್ನು ತಮ್ಮದೇ ಆದ ವಿಶಿಷ್ಟ ದೃಷ್ಟಿಕೋನಗಳಿಂದ ಪ್ರವೇಶಿಸಿ ಅವುಗಳ ಅಂತರ್ಯದ ಸೂಕ್ಷ್ಮ ಭಾವ ಮತ್ತು ಚಿಂತನೆಗಳನ್ನು ಶಕ್ತಿಯುತವಾಗಿ ಎತ್ತಿ ತಂದು ಕವಿತೆಯಲ್ಲಿ ಅನನ್ಯವಾಗಿ ಅನಾವರಣ ಮಾಡುವ ರೀತಿ, ಕಾವ್ಯವನ್ನು ಕ್ಲಿಷ್ಟತೆಯ ಕಗ್ಗಾಡಾಗಿ ಮಾಡದೆ, ಮಾನವಪರ ಜೀವದನಿಗಳನ್ನು ಸಹಜವಾಗಿ ಹೊಮ್ಮಿಸಲು ಅನುವು ಮಾಡಿಕೊಡುವ ಸರಳ ಸಮರ್ಥ ಅಭಿವ್ಯಕ್ತಿಶಕ್ತಿ ಈ ಕವಿಯು ಅಸಾಧಾರಣ ಸಾಧನೆ.

ಇವರು ನವೋದಯ, ನವ್ಯ, ಪ್ರಗತಿಶೀಲ ಮತ್ತು ದಲಿತ-ಬಂಡಾಯಗಳ ಎಲ್ಲಾ ವಿಶಿಷ್ಟ ಸಂವೇದನೆಗಳನ್ನು ತಮ್ಮ ಕವಿತೆಗಳಲ್ಲಿ ಅಂತರ್ಗತಗೊಳಿಸುವ ಮೂಲಕ ಎಲ್ಲಾ ಪಂಥದ ಓದುಗರ ಮನಸ್ಸನ್ನು ಗೆಲ್ಲುವ ಸೃಜನ ಸಾಮರ್ಥ್ಯವನ್ನು ಪಡೆದುಕೊಂಡಿದ್ದಾರೆ. ಈ ಸಂಕಲನದಲ್ಲಿರುವ ಕವಿತೆಗಳು ಅವರ ವಿಶಿಷ್ಟ ಮನೋಧರ್ಮ, ಭಾಷಾಶಕ್ತಿ, ನಿರ್ಮಾಣಕೌಶಲ ಹಾಗೂ ಚಿಂತನಶೀಲತೆಗಳನ್ನು ಸಮರ್ಥವಾಗಿ ಮತ್ತು ಪರಿಣಾಮಕಾರಿಯಾಗಿ ಬಿಂಬಿಸುತ್ತವೆ.

ಡಾ. ಎಚ್.ಜೆ. ಲಕ್ಕಪ್ಪಗೌಡ

ಐಎಸ್‌ಬಿಎನ್ : ೮೧-೭೭೧೩-೦೪೭-೧